# ಅಪರಂಜಿ

ತಿಳಿನಗೆಯ ಕಾರಂಜಿ ನವೆಂಬರ್ 2022




ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 40**

**ಸಂಚಿಕೆ - 2**

**ನವೆಂಬರ್ - 2022**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಗುಲಾಬಿವನದ ದೇವಯಾನಿ ಪ್ರಸಂಗ | ವತ್ಸನ | 3 |
| ತುಂತುರು | ದಂನಆ | 9 |
| ಸತ್ಯನಾರಾಯಣನ ಬೇಸತ್ತ ವಿಷಯ | ದೊಡ್ಡರಂಗೇಗೌಡ | 10 |
| ಬೀದಿ ಜಗಳಗಳು | ಕೆ. ಸತ್ಯನಾರಾಯಣ | 11 |
| ಗುಂಡ್ಯಾನ ಪಾದುಕಾ ಫಜೀತೀ.. | ಸಿ.ಎ.ವಿಲಾಸ ನಾ ಹುದ್ದಾರ | 16 |
| ಪದಕುಲುಮೆ | ಎಸ್ಎನ್ ಗಣನಾಥ | 18 |
| ಬಕಾಸುರನ ಮರಿಮಕ್ಕಳು | ನಾಗರತ್ನ ಸಾಲಗಾಮೆ | 19 |
| ಅಂತ್ಯ ಕಾಣುತ್ತಿರುವ ಅಂತ್ಯಾಕ್ಷರಿ | ಶ್ರೀಲಕ್ಷ್ಮಿ ಎಸ್. ಗುರುಪ್ರಸಾದ | 22 |
| ತಿರುಪತಿ ವೆಂಕಟರಮಣ ಗೋವಿಂದಾ | ವಸುಮತಿ ಉಡುಪ | 24 |
| ಇಂತಿ ನಿಮ್ಮ ರಶ್ಮಿ! | ಹಿರಿಯೂರು ರಾಘವೇಂದ್ರ | 26 |
| ರಸಿಕ ರಾಯರು | ಆರತಿ ಘಟಿಕಾರ್ | 27 |
| ಜಾನಕಿ ನಗಲಿಲ್ಲ | ಸತ್ಯಬೋಧ | 30 |
| ಸಣ್ಣ ರಸೀತಿ ತಂದಿಟ್ಟ ದೊಡ್ಡ ಫಜೀತಿ | ಅರವಿಂದ. ಜಿ.ಜೋಷಿ | 33 |
| ಅಯ್ಯೋ, ಬೂದುಗುಂಬಳ ಕಾಯಿಯೇ! | ಎಚ್. ನರಸಿಂಹಯ್ಯ | 36 |
| ಹಬ್ಬದ ಮಾರನೆಯ ದಿನ | ಬೇಲೂರು ರಾಮಮೂರ್ತಿ | 38 |

**ವ್ಯಂಗ್ಯ ಚಿತ್ರಗಳು:**

ರಘುಪತಿ ಶೃಂಗೇರಿ

ಹಾಗೂ ಇಂಟರ್ನೆಟ್ ಕೃಪೆ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*





# ಅಪರಂಜಿ ಕಿಡಿ

●ಪ್ರಕಾಶ್

ಚೆಕ್ ಬೌನ್ಸ್ ನಿಗ್ರಹಕ್ಕೆ ನಿರ್ಬಂಧನಕ್ಕೆ ಅಸ್ತ್ರ ?– ದಿನ ಪತ್ರಿಕೆ

**ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ !** ? ?

***

ಕಲೆಗೆ ವ್ಯಾವಹಾರಿಕ ದೃಷ್ಟಿ ಸಲ್ಲದು ! ಹೇಳಿಕೆ

**ಅಪರಂಜಿ ನಗುತ್ತ ತಲೆದೂಗಿದಳಂತೆ !!**

****

ಉನ್ನತ ಶಿಕ್ಷಣದಲ್ಲಿ ಆಂಗ್ಲ ಭಾಷೆ ಆಪ್ಷನಲ್ ಮಾಡಬೇಕು

– ಕೇಂದ್ರದ ವರದಿ

**ಓಹ್ ಮೈ ಗಾಡ್ ಅಂತ ಅಪರಂಜಿ ನಡುಗಿದಳಂತೆ !!!**

****

ಚಂದ್ರನ ಅಂಗಳದಲ್ಲಿ ಸೋಡಿಯಂ ಪತ್ತೆ !!– ಇಸ್ರೋ ವರದಿ

**ಇದರಲ್ಲಿ ವಿದೇಶಿ ಕೈವಾಡ ಇರಲೇಬೇಕು** ??

****

ಹಿಂದುಳಿದವರ ಉನ್ನತಿಗೆ ಮನಃಸ್ಥಿತಿ ಬದಲಾಗಬೇಕು–
ಭಾಗವತ್ ಹೇಳಿಕೆ

**ಭಾಗಶಃ ಒಪ್ಪಬೇಕಾದ ಮಾತು !!**

****

ಸ್ವಾತಂತ್ರಕ್ಕೆ ಧಕ್ಕೆ ಬಂದಾಗ ಜನ ತಕ್ಕ ಪಾಠ ಕಲಿಸುತ್ತಾರೆ
– ದಿನಪತ್ರಿಕೆ

**ಪಾಪ, ಟ್ರಂಪ್ ಮಹಾಶಯರಿಗೆ ಇದು ಮನದಟ್ಟಾಗಿಲ್ಲವಲ್ಲ !!!**

****

**ಆಸ್ಟ್ರೇಲಿಯಾದಲ್ಲಿ ಭಾರತದ ಕ್ರಿಕೆಟ್ ತಂಡಕ್ಕೆ "ಶ್ರೇಯಸ್ "**
**ಬಯಸಿದ ಅಪರಂಜಿ ಜೊತೆಗೆ ನಮ್ಮ ಶುಭಾಶಯಗಳು !!!**

■

# ಗುಲಾಬಿವನದ ದೇವಯಾನಿ ಪ್ರಸಂಗ

**● ವತ್ಸನ**

ಮೊನ್ನೆ ನಾನು ಯಾವುದೋ ಸಮಾರಂಭದ ಪ್ರಯುಕ್ತ ಕನಕಪುರಕ್ಕೆ ಹೋಗಿದ್ದೆ. ಫ್ಲಾಟಿಗೆ ಹಿಂತಿರುಗಿದಾಗ ಸಂಜೆಯಾಗಿತ್ತು. ಶರಲೇಖನೊಂದಿಗೆ ಯಾರೋ ಮಾತಾಡುತ್ತಾ ಕೂತಿದ್ದರು. ನಾನು ಒಳಕ್ಕೆ ಬಂದದ್ದನ್ನು ಕಂಡು ಬಂದಾತ ನನ್ನ ಕಡೆ ತಿರುಗಿದ. ನೋಡಿದರೆ, ನನ್ನ ಬಾಲ್ಯ ಸ್ನೇಹಿತ ಮಂಜುಗೌಡ! ನನ್ನನ್ನು ನೋಡಿ, ತನ್ನ ಗಲ್ಲಕ್ಕೆ ಸರಿದಿದ್ದ ಮಾಸ್ಕನ್ನು ಮತ್ತೆ ಮೂಗಿನ ಮೇಲೆ ಎಳೆದುಕೊಂಡ." ಮಂಜು, ಯಾವಾಗ ಬಂದೆ? ಮನೇಲೆಲ್ಲಾ ಹೇಗಿದ್ದಾರೆ? ಲಾಕ್ ಡೌನ್ ಮುಗಿದ ಮೇಲೆ ನಿಮ್ಮ ಹೋಮ್ ಸ್ಟೇಗೆ ಅತಿಥಿಗಳು ಬರೋದು ಶುರು ಆಗಿದೆಯೇ?" ಎಂದೆಲ್ಲಾ ಕುಶಲ ವಿಚಾರಿಸಿದೆ. ಮಂಜುಗೌಡ ಧವಳಗಿರಿ ಎಸ್ಟೇಟಿನ ಮಾಲಿಕ. ಅವನ ಮಗಳು ಐಶ್ವರ್ಯಾ ಮತ್ತು ಅಳಿಯ ದುಷ್ಯಂತ್ ಇಬ್ಬರೂ ಸೇರಿ ಅಲ್ಲಿ ಒಂದು ಅತಿಥಿಗೃಹವನ್ನು ನಡೆಸುತ್ತಿರುವುದರ ಬಗ್ಗೆ ಹಿಂದಿನ ಪ್ರಕರಣವೊಂದರಲ್ಲಿ ತಿಳಿಸಿದ್ದು ನೆನಪಿರಬಹುದು.

" ಪರವಾಗಿಲ್ಲ. ಕಳೆದ ವರ್ಷದ ಲಾಕ್‌ಡೌನ್ ಬವಣೆಯಿಂದ ಬೇಸತ್ತಿರೋ ಜನ ಈಗ ಬರುಕ್ಕೆ ಶುರುಮಾಡಿದ್ದಾರೆ. ಹೇಗೂ ಗ್ರಾಮಾಂತರ ಪ್ರದೇಶ ಗಳಲ್ಲಿ ಕೋವಿಡ್ ಹಾವಳಿ ಇಲ್ಲವಲ್ಲ. ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದೆ. ಅದ್ಸರಿ, ನಿಮಗೂ ಒಂದು ವರ್ಷದಿಂದ ಇಲ್ಲಿನ ಜೈಲುವಾಸ ಬೇಜಾರಾಗಿರಬಹುದು ಅಲ್ವೇ. ಯಾಕೆ ಒಂದೆರಡು ದಿನ ನಮ್ಮಲ್ಲಿಗೆ ಬರಬಾರದು? ಅದಕ್ಕೇ ನಿಮ್ಮಿಬ್ಬರನ್ನೂ ಕರೆದುಕೊಂಡು ಹೋಗುಕ್ಕೇ ಬಂದಿದೀನಿ" ಅಂತ ಬಹು ವಿಶ್ವಾಸದಿಂದ ನಮ್ಮನ್ನ ಆಹ್ವಾನಿಸಿದ ಮಂಜು. ಶರಲೇಖನಿಗೆ ಕೈತುಂಬ ಕೆಲಸವಿಲ್ಲದಿದ್ದರೆ ನೆಮ್ಮದೀನೇ ಇರೋದಿಲ್ಲ. ಈ ಕೋವಿಡ್ ಗಲಾಟೇಲಿ ಅವನಿಗೆ ಓಡಾಡಿ ಕೆಲಸಮಾಡೋ ಅವಕಾಶಾನೇ ತಪ್ಪಿಹೋಗಿತ್ತು. ಊರು ಬಿಟ್ಟು ಹೋಗೋ ಈ ಅವಕಾಶಾನ ಅವನು ಬಿಟ್ಟಾನೆಯೇ? ನನಗಂತೂ ಗ್ರಾಮಾಂತರ ಪ್ರದೇಶಗಳೆಂದರೆ ಯಾವಾಗಲೂ ಒಲವು. ಹಾಗಾಗಿ ಮಾರನೆಯ ದಿನ ಮಂಜು ವಿನೊಂದಿಗೆ ಕುಣಿಗಲ್, ಚೆನ್ನರಾಯಪಟ್ಟಣದ ಹಾದಿ ಹಿಡಿದೆವು.

ಮಂಜುವಿಗೆ ನಮ್ಮ ನಾಡಿನ ಚರಿತ್ರೆ ಭೂಗೋಳ ಅಂದರೆ ಮೊದಲಿನಿಂದಲೂ ವಿಪರೀತ ಆಸಕ್ತಿ. ನೆಲಮಂಗಲದ ಹತ್ತಿರ ತುಮಕೂರು ರಸ್ತೆಯಿಂದ ಎಡಕ್ಕೆ ತಿರುಗಿ ಕುಣಿಗಲ್ ರಸ್ತೆಯಲ್ಲಿ ಸ್ವಲ್ಪ ದೂರ ಪ್ರಯಾಣ ಮಾಡುವಷ್ಟರಲ್ಲಿ ಮಂಜು ತನ್ನ ಮಾತು ಪ್ರಾರಂಭಿಸಿದ.

"ಈಗ ನಾವು ಅರ್ಕಾವತಿ ಕಣಿವೆಯನ್ನ ದಾಟ್ತಾ ಇದ್ದೇವೆ. ಇನ್ನು ಸ್ವಲ್ಪ ದೂರದಲ್ಲೇ ಕುಮುದ್ವತಿ ನದಿಯ ಪಾತ್ರ. ಇಲ್ಲಿ ಬಲಗಡೆ ಇರೋ ಗುರುತು ಕಲ್ಲಿನ ಎಡಕ್ಕೆ ಬೀಳುವ ನೀರು ಅರ್ಕಾವತಿ ಸೇರಿದರೆ ಬಲಕ್ಕೆ ಬೀಳುವ ನೀರು ಕುಮುದ್ವತಿ ಪಾಲು. ಅಲ್ಲಿ ಕಾಣ್ತಾ ಇದೆಯಲ್ಲಾ ಶಿವಗಂಗೆ ಬೆಟ್ಟ. ಅಲ್ಲಿಂದ ಮೂರು ಸಣ್ಣ ನದಿಗಳು ಹರಿದು ಬರುತ್ವೆ. ಆ ನದಿಗಳ ಹೆಸರುಗಳೇ ಕೇಳುಕ್ಕೆ ಇಂಪು. ನಳಿನಿ, ನಾಗಿನಿ ಮತ್ತು ಕಮಲಾ ಈ ಮೂರೂ ನದಿಗಳ ಸಂಗಮ ಇನ್ನು ಸ್ವಲ್ಪ ಹೊತ್ತಿನಲ್ಲೇ ತೋರಿಸ್ತೀನಿ. ಹಿಂದೆ ಈ ನೆಲವನ್ನು ಆಳಿದ್ದ ನೃಹ ಚಕ್ರವರ್ತಿ ಈ ಸಂಗಮದಲ್ಲಿ ಮಿಂದು ತನ್ನ ಚರ್ಮರೋಗವನ್ನು ಗುಣಪಡಿಸಿಕೊಂಡನೆಂದು ಐತಿಹ್ಯ ಹೇಳುತ್ತದೆ."

ಇದನ್ನೆಲ್ಲಾ ಬಹು ಉತ್ಸಾಹದಿಂದ ನಮಗೆ ಬಿತ್ತರಿಸುತ್ತಿದ್ದ ಮಂಜು ಒಮ್ಮೆಲೇ

ಕಾರು ನಿಲ್ಲಿಸಿದ. ಕಾರು ಒಂದು ಸೇತುವೆಯ ಮೇಲೆ ನಿಂತಿತು. ಕೆಳಗೆ ನದಿಯೊಂದು ಬಂಡೆಗಲ್ಲುಗಳ ನಡುವೆ ದಾರಿಮಾಡಿಕೊಂಡು ಹರಿಯುತ್ತಿತ್ತು.

ಮಂಜು ಶುರುಮಾಡಿದ. " ಇದು ವೀರ ವೈಷ್ಣವಿ ನದಿ. ಶಿಂಷಾ ನದಿಯ ಉಪನದಿ ಇದು. ಈಗ ನಾವು ಯಾವ ಜಿಲ್ಲೆಯಲ್ಲಿ ಇದ್ದೀವಿ ಗೊತ್ತೆ?" ಎಂದು ಅವನು ನಮ್ಮನ್ನು ಪ್ರಶ್ನಿಸಿದ. "ತುಮಕೂರು ಜಿಲ್ಲೆ?" ನಾನು ಪ್ರಶ್ನಾರ್ಥಕ ಉತ್ತರ ನೀಡಿದೆ.

"ಅಲ್ಲ, ಇದು ಮಂಡ್ಯ ಜಿಲ್ಲೆ. ಇನ್ನು ಸ್ವಲ್ಪ ದೂರ ಮಂಡ್ಯ ಜಿಲ್ಲೆ ಈ ರಸ್ತೆಯ ಮೇಲೆ ಚಾಚಿರುತ್ತೆ. ಅನಂತರ ಮತ್ತೆ ತುಮಕೂರು" ಎಂದ ಮಂಜು.

ಅವನ ಮಾತಿನ ಮೋಡಿಯಲ್ಲಿದ್ದ ನಮಗೆ ಸಮಯ ಸರಿದದ್ದೇ ತಿಳಿಯಲಿಲ್ಲ.

ಹಾಸನ ದಾಟಿ, ಸಕಲೇಶಪುರಕ್ಕೆ ಸ್ವಲ್ಪ ಮುಂಚೆ ಎಡಕ್ಕೆ ತಿರುಗಿ ಸ್ವಲ್ಪ ದೂರ ಸಾಗಿ ನಾವು ಧವಳಗಿರಿ ಎಸ್ಟೇಟನ್ನು ತಲುಪಿದಾಗ ಸಂಜೆ ಒಂಭತ್ತಾಗಿತ್ತು.

ದಿನವೆಲ್ಲಾ ಪಯಣಿಸಿ ದಣಿದಿದ್ದರಿಂದ ಬೇಗ ಊಟ ಮುಗಿಸಿ ಎಸ್ಟೇಟಿನ ಕಾಟೇಜ್ ಒಂದನ್ನು ಸೇರಿದೆವು. ಮಾರನೆಯ ಬೆಳಗ್ಗೆ ಉಪಹಾರಕ್ಕೆ ಅಕ್ಕಿ ರೊಟ್ಟಿ ಸಿದ್ಧವಾಗಿತ್ತು. ಮಲೆನಾಡಿನ ರೊಟ್ಟಿ ಬಯಲು ಸೀಮೆಯದಂತಲ್ಲ. ಹಬೆಯಲ್ಲಿ ಬೇಯಿಸಿದ ತೆಳು ನಮೂನೆ. ಬಹು ರುಚಿಯಾಗಿತ್ತು. ಲೋಕಾಭಿರಾಮವಾಗಿ ಮಾತನಾಡುವಾಗ ಐಶ್ವರ್ಯಾ ಶರಲೇಖನನನ್ನು ಕುರಿತು, " ಅಂಕಲ್, ನಮ್ಮ ಹೋಮ್ ಸ್ಟೇ ಉದ್ಘಾಟನೆ ಆದಾಗ ನಿಮ್ಮನ್ನು ನೋಡಿದ್ದು. ಆಗ ನೀವು ಮಾಡಿದ ಸಹಾಯ ನಾವು ಮರೆಯುವಂತೆಯೇ ಇಲ್ಲ. ನಾಳೆ ಬೆಳಗ್ಗೆ  ನಿಮ್ಮಿಬ್ಬರನ್ನ ನನ್ನ ಗೆಳತಿ ನಡೆಸುತ್ತಿರುವ ಫ್ಲಾರಿಕಲ್ಚರ್ ಉದ್ಯಮಕ್ಕೆ ಕರೆದುಕೊಂಡು ಹೋಗಲು ಯೋಚಿಸಿರುವೆ. ಆಗಬಹುದೇ?" ಎಂದು ಕೇಳಿದಳು.

"ಯಾರು ನಿನ್ನ ಗೆಳತಿ? ಎಲ್ಲಿಗೆ ಹೋಗಬೇಕು ನಾವು?" ಶರಲೇಖನ ಪ್ರಶ್ನೆ.

"ದೇವಯಾನಿ ಅಂತ ಅವಳ ಹೆಸರು. ಸಕಲೇಶಪುರದಲ್ಲಿ ನಾವಿಬ್ಬರೂ ಒಟ್ಟಿಗೆ ಓದಿದ್ದು. ಅವಳ ಮನೆ ಇರೋದು ಹತ್ತಿರದ ಬೈಕೆರೆಯಲ್ಲಿ. ತುಂಬಾ ಬುದ್ಧಿವಂತೆ. ಸಸ್ಯಶಾಸ್ತ್ರದಲ್ಲಿ ಮಾಸ್ಟರ್ಸ್ ಪಡೆದು ಅಮೆರಿಕಾದಲ್ಲಿ ಡಾಕ್ಟರೇಟ್ ಮಾಡುತ್ತಿದ್ದಳು. ಅವಳ ತಂದೆ ಸಕಲೇಶಪುರದ ಡಿಗ್ರಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರು. ಅವರ ಪತ್ನಿ ಅನೇಕ ವರ್ಷಗಳ ಹಿಂದೆಯೇ ತೀರಿಕೊಂಡಿದ್ದರು. ದೇವಯಾನಿ ಇವರ ಒಬ್ಬಳೇ ಮಗಳು. ಎರಡು ವರ್ಷಗಳ ಹಿಂದೆ ಇವಳ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದಾಗ ದೇವಯಾನಿ ಅಮೆರಿಕಾ ಬಿಟ್ಟು ಬಂದು ಇಲ್ಲೇ ತಂದೆಯೊಂದಿಗೆ ನೆಲೆಸಿ ಅವರ ನಾಲ್ಕು ಎಕರೆ ತೋಟದಲ್ಲಿ ಗುಲಾಬಿ ಬೆಳೆಯನ್ನು ಪ್ರಾರಂಭಿಸಿದಳು. ಅವಳ ಪತಿ ಮದನ್ ಹೂವುಗಳನ್ನು ಮಾರುವ ಜವಾಬ್ದಾರಿ ವಹಿಸಿಕೊಂಡ ಮೇಲೆ ಅವಳ ಗುಲಾಬಿವನ, ರೋಜಾ ಹೂವುಗಳ ಸಗಟು ಮಾರಾಟಕ್ಕೆ ಹೆಸರುವಾಸಿಯಾಗಿದೆ. ಅವಳ ತಂದೆ ಕಳೆದ ವರ್ಷ ಕಾಲವಾದರು. ತಂದೆ ಹೋದ ಹಲವು ತಿಂಗಳಲ್ಲೇ ಅವಳಿಗೊಂದು ಸಮಸ್ಯೆ ಶುರುವಾಗಿದೆ. ನೀವು ಬಂದು ಅವಳ ಸಮಸ್ಯೆಗೆ ಪರಿಹಾರ ನೀಡುವುದಕ್ಕಾಗುತ್ತದೆಯೇ?" ಅಂತ ಬಹು ಕಳಕಳಿಯಿಂದ ಕೇಳಿದಳು ಐಶ್ವರ್ಯಾ. ಸಮಸ್ಯೆ ಎಂಬ ಪದವನ್ನು ಕೇಳಿ ಶರಲೇಖನ ಕಿವಿ ನೆಟ್ಟಗಾಯಿತು. ತಕ್ಷಣವೇ ಒಪ್ಪಿದ.

ಮಾರನೆಯ ಬೆಳಗ್ಗೆ ದೇವಯಾನಿಯ ಇನ್ನೋವಾದಲ್ಲಿ ಕುಳಿತು ಹೊರಟೆವು. ಮಂಜುಗೆ ಏನೋ ಕೆಲಸವಿದ್ದದ್ದರಿಂದ ಆತ ಬರಲಿಲ್ಲ. ಸಕಲೇಶಪುರ ಮುಖ್ಯ ರಸ್ತೆ ದಾಟಿ ಬಸವನ ಹಳ್ಳಿ ಮಾರ್ಗದಲ್ಲಿ ಸ್ವಲ್ಪ ದೂರ ಸಾಗುವಷ್ಟರಲ್ಲಿ ಎಡಗಡೆ ಒಂದು ವಿಶಾಲವಾದ ತೋಟದಲ್ಲಿ ಗುಲಾಬಿ ಗದ್ದೆಯೇನೋ ಎಂಬ ಭ್ರಮೆಬರುವಂತೆ ಸಾವಿರಾರು ಗುಲಾಬಿ ಬಿಡಗಳು ಹರಡಿದ್ದವು. ಒಂದೊಂದು ಚೌಕಳಿಯಲ್ಲಿ ಒಂದೊಂದು ಬಣ್ಣದ ಗುಲಾಬಿ ಅರಳಿದ್ದು ಒಂದು ಪ್ಯಾಚ್ ವರ್ಕ್ ರತ್ನಗಂಬಳಿಯನ್ನು ನೆನಪಿಸುತ್ತಿತ್ತು. ತೋಟದ

ಗೇಟಿನ ಬಳಿ ದೇವಯಾನಿ ಮತ್ತು ಮದನ್ ಇಬ್ಬರೂ ನಮ್ಮನ್ನು ಬಹು ಆತ್ಮೀಯತೆಯಿಂದ ಸ್ವಾಗತಿಸಿದರು. ಒಂದು ಅರ್ಧ ಕಿಲೋಮೀಟರಷ್ಟು ಹಾದಿಯನ್ನು ಗುಲಾಬಿಗಳ ನಡುವೆ ನಡೆದು ಭವ್ಯವಾಗಿ ಕಾಣುತ್ತಿದ್ದ ತೋಟದಮನೆ ಸೇರಿದೆವು. ವಿಶಾಲವಾದ ಪೋರ್ಟಿಕೋ. ವೆರಾಂಡಾದಲ್ಲಿ ಬೆತ್ತದಿಂದ ಹೆಣೆದ ಸೋಮಾರಿ ಕುರ್ಚಿಗಳು. ರೆಡ್ ಆಕ್ಸೈಡ್ ನೆಲ. ಮನೆ ಮುಂದೆ ಹೂ ಬಿಟ್ಟ ದಾಸವಾಳದ ಹಾಗೂ ಮಲ್ಲಿಗೆ ಗಿಡಗಳು. ಎಲ್ಲರೂ ಆಸೀನರಾದಮೇಲೆ ಐಶ್ವರ್ಯಾ ನಮ್ಮನ್ನು ದೇವಯಾನಿ ಮತ್ತು ಮದನ್ ಗೆ ಪರಿಚಯಿಸಿದ್ದೇ ಅಲ್ಲದೇ ಶರಲೇಖ ಅವಳ ಸಮಸ್ಯೆಯ ಬಗ್ಗೆ ಸಹಾಯಮಾಡಲು ಒಪ್ಪಿರುವುದನ್ನೂ ತಿಳಿಸಿದಳು.

ಮದನ್ ಮಾತು ಪ್ರಾರಂಭಿಸಿದ. "ಶರಲೇಖ ಅವರೇ ನೀವು ಇಲ್ಲಿಗೆ ಬರುಕ್ಕೆ ಒಪ್ಪಿದ್ದು ನಮ್ಮ ಅದೃಷ್ಟ. ನಮ್ಮ ವ್ಯಾಪಾರ ವಹಿವಾಟು, ವೈವಾಹಿಕ ಜೀವನ ಎಲ್ಲಾ ಚೆನ್ನಾಗಿದ್ದರೂ ದೇವಯಾನಿಯ ಮನಸ್ಸು ಮಾತ್ರ ಆತಂಕದಿಂದ ತುಂಬಿದೆ. ಅವಳ ಸಮಸ್ಯೆ ಕೇಳಿದರೆ ನೀವು ನಗಬಹುದು. ಆದರೂ ಸಮಸ್ಯೆಗೆ ಪರಿಹಾರ ಸಿಗುವ ಸಂಭವವಿರುವ ಯಾವುದೇ ಪ್ರಯತ್ನವನ್ನು ನಾನು ಕಡೆಗಾಣಿಸಲಾರೆ. ಮೊದಲು ನಿಮಗೆ ಮನೆಯನ್ನು ತೋರಿಸುವೆ 1890ರಲ್ಲಿ ಕಟ್ಟಿದ ಮನೆ ಇದು." ಎಂದು ಹೇಳಿ ನಮ್ಮನ್ನು ಮನೆಯೊಳಗೆ ಕರದೊಯ್ದ.

ವೆರಾಂಡಾದಿಂದ ಒಳಗಿನ ಹಜಾರಕ್ಕೆ ದಾಟುವಾಗಲೇ ಮದನ್, "ಹುಷಾರು, ಹಳೆಯ ಕಾಲದ ಮನೆ. ಬಾಗಿಲಿನ ಎತ್ತರ ಚಿಕ್ಕದು. ತಲೆ ಬಗ್ಗಿಸಿ ಒಳಗೆ ಬನ್ನಿ" ಎಂದು ಹೇಳಿ ಒಳಹೊಕ್ಕ. ನಾನು ತಲೆಯನ್ನು ಪೂರ್ತಿ ಬಗ್ಗಿಸಿ, ಹೊಸ್ತಿಲನ್ನು ದಾಟಿ ಒಳಗೆ ಹೋಗಿ ತಲೆ ಎತ್ತಿದೆ. "ಫಟ್" ಅಂತ ತಲೆ ಬಾಗಿಲ ವಾಡಕ್ಕೆ ಬಡಿಯಿತು. ಬಾಗಿಲು ಗಿಡ್ಡ ಅಂತೇನೋ ಹೇಳಿದ್ದ ಮದನ್. ಆದರೆ ಒಂದೂವರೆ ಅಡಿ ದಪ್ಪದ ಗೋಡೆ ಇದ್ದುದರಿಂದ ತಲೆ ಬಗ್ಗಿಸಿಕೊಂಡೇ ಎರಡು ಹೆಜ್ಜೆ ನಡೆಯದಿದ್ದರೆ ಏಟು ಖಾತರಿ ಎಂಬ ಅಂಶ ಈಗ ತಿಳಿಯಿತು. ನನ್ನನ್ನು ನೋಡಿ ಶರಲೇಖ ನಗುತ್ತಾ ಯಾವ ಅಪಘಾತವೂ ಇಲ್ಲದೆ ಒಳಕ್ಕೆ ಬಂದ. ವಿಶಾಲವಾದ ಹಜಾರದ ಮಧ್ಯೆ ಆಗಸಕ್ಕೆ ತೆರೆದಿರುವ ಚಚ್ಚೌಕನಾದ ಒಂದು ಅಂಗಳ. ಅಂಗಳದ ಸುತ್ತ ನಾಲ್ಕು ಬದಿಯಲ್ಲಿ ಇದ್ದ ಮೊಗಸಾಲೆ (ಕಾರಿಡಾರ್) ಗೆ ಹೆಂಚಿನ ಸೂರು ಇತ್ತು. ಕರೀಕಲ್ಲಿನ ನೆಲ. ಅಂಗಳದ ಎಡಬಲಗಳಲ್ಲಿ ಗಿಡ್ಡ ಬಾಗಿಲುಗಳನ್ನುಳ್ಳ ಅನೇಕ ಕೊಠಡಿಗಳಿದ್ದವು. ನಾವು ಬಂದ ಬಾಗಿಲಿನ ನೇರಕ್ಕೆ ಅಂಗಳದ ಆಚೆ ಬದಿ ದೇವರ ಮನೆ. ವಿಚಿತ್ರವೆಂದರೆ ಅಗಲವಾಗಿದ್ದ ದೇವರಮನೆಯ ಬಾಗಿಲು ಮಾತ್ರ ಈಗಿನ ಕಾಲದ ಬಾಗಿಲುಗಳಂತೆ ಎತ್ತರವಾಗಿಯೇ ಇತ್ತು. ಅಂಗಳದ ಮಧ್ಯೆ ಒಂದು ತುಳಸಿ ಕಟ್ಟೆ. ಬಲಗಡೆಯ ಮೊಗಸಾಲೆಯಲ್ಲಿ ಕಬ್ಬಿಣದ ಸರಪಳಿಗಳಿಂದ ತೂಗುಬಿಟ್ಟಿದ್ದ ಬೀಟೆ ಮರದ ಕಲಾತ್ಮಕವಾದ ಕೆತ್ತನೆಯ ಕೆಲಸಮಾಡಿದ್ದ ಪೀಠವಿದ್ದ ಉಯ್ಯಾಲೆ. ಮೊಗಸಾಲೆಯನ್ನು ಬಳಸಿ ಮದನ್ ದೇವರಮನೆಯ ಬಳಿಗೆ ಸಾಗಿದ. ನಾವು ಅವನನ್ನು ಹಿಂಬಾಲಿಸಿದೆವು.

ದೇವರ ಮನೆಯ ಇದಿರು ಗೋಡೆಯಲ್ಲಿ ಶಿವ ಪಾರ್ವತಿ ಕೈಲಾಸದಲ್ಲಿ ತಮ್ಮ ಮಕ್ಕಳೊಂದಿಗೆ ಕುಳಿತಿರುವ ಭವ್ಯವಾದ ಪಟ ರಾರಾಜಿಸುತ್ತಿತ್ತು. ಪಟದ ಮುಂದಿನ ತೇಗದ ಮರದ ಪೀಠದ ಮೇಲೆ ಪೂಜಾಸಾಮಗ್ರಿಗಳನ್ನೆಲ್ಲಾ ಅಣಿಯಾಗಿ ಜೋಡಿಸಿಟ್ಟಿದ್ದು ಕಾಣುತ್ತಿತ್ತು. ಪಟದ ಬಲಭಾಗದಲ್ಲಿ ಒಂದು ಗೂಡು. ಈ ಗೂಡಿನಲ್ಲಿ ಒಂದು ಕರೀಕಲ್ಲಿನ ಮೂರ್ತಿ. ಸುಮಾರು ಒಂದುವರೆ ಅಡಿ ಎತ್ತರ ಇರಬಹುದು. ಅದು ದೇವರ ವಿಗ್ರಹದಂತೆ ಕಾಣುತ್ತಿರಲಿಲ್ಲ. ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದ ಒಬ್ಬ ಯತಿಯಂತೆ ಇತ್ತು ಆ ಮೂರ್ತಿ. ಮೂರ್ತಿಯ ಬಲಪಕ್ಕದಲ್ಲಿ ಒಂದು ತ್ರಿಶೂಲ. ಎಡಬದಿಯಲ್ಲಿ ಒಂದು ಕಮಂಡಲು. ಕಲ್ಲಿನ ವಿಗ್ರಹವಾದರೂ ಮೂರ್ತಿಯ ಶಾಂತ ಮುಖಮುದ್ರೆ ಎತ್ತಿ ಕಾಣುತ್ತಿತ್ತು. ಪಟದ ಎಡಗಡೆ ಇತರ ಇದ್ದ ದೇವರುಗಳ ಪಟಗಳು ಅಷ್ಟು ಹಳೆಯ ಪಟಗಳಂತೆ ಕಾಣುತ್ತಿರಲಿಲ್ಲ.

ದೇವರ ಮನೆ ದಾಟಿ ಪಕ್ಕದಲ್ಲಿದ್ದ ಕೊಠಡಿಗೆ ಹೋದೆವು. ಅದು ಊಟದ ಮನೆ. ಅಲ್ಲಿದ್ದ ಕನಿಷ್ಠಪಕ್ಷ ಹತ್ತು ಜನ ಒಟ್ಟಿಗೆ ಕೂಡಬಹುದಾಗಿದ್ದ ಉದ್ದವಾದ ಮೇಜು. ದೇವಯಾನಿ, ' ಸ್ವಲ್ಪ ತಿಂಡಿ ಆಗಬಹುದೇ?" ಎಂದ ಮೇಲೆ ನಾವು ಮೇಜಿನಲ್ಲಿ ಕುಳಿತೆವು. ದೇವಯಾನಿ ಅಡುಗೆಮನೆಯ ಒಳಗೆ ಹೋಗಿ ಒಂದು ಡಬರಿಯಲ್ಲಿ ಹಬೆಯಾಡುತ್ತಿದ್ದ ವಸ್ತು ವಿಶೇಷವೊಂದನ್ನು ತಂದು ನಮ್ಮ ತಟ್ಟೆಗಳಿಗೆ ಬಡಿಸುತ್ತಾ, " ಇದನ್ನ ನಮ್ಮ ಕಡೆ ಪುಟ್ಟು ಅಂತ ಕರೀತೀವಿ. ಅಕ್ಕಿ ಹಿಟ್ಟು ತೆಂಗಿನ ತುರಿ ಮಿಶ್ರಣವನ್ನು ಬೊಂಬಿನ ರಂಧ್ರದಲ್ಲಿ ತುಂಬಿ ಬೇಯಿಸಿರೋದು" ಎಂದು ವಿವರಿಸಿದಳು. ತಿಂಡಿ ತಿನ್ನುವಾಗ ದೇವಯಾನಿ ತನ್ನ ಸಮಸ್ಯೆಯ ಬಗ್ಗೆ ಹೇಳಲು ಪ್ರಾರಂಭಿಸಿದಳು.

" ಇದನ್ನ ನೀವು ಲಘುವಾಗಿ ಕಾಣಬಾರದು. ನಮ್ಮ ತಂದೆ ಹೋದ ಒಂದು ತಿಂಗಳಿನ ನಂತರ ನನಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಒಬ್ಬ ಯತಿ.

ನಮ್ಮ ದೇವರ ಮನೆಯಲ್ಲಿರುವ ಕಲ್ಲಿನ ವಿಗ್ರಹ ಇದೆಯಲ್ಲಾ. ಥೇಟ್ ಹಾಗೇ ಇತ್ತು. ಅದು "ನನ್ನನ್ನು ಮನೆಗೆ ಸೇರಿಸು"ಅಂತ ಹೇಳಿದ ಹಾಗೆ ಭಾಸವಾಯಿತು. " ಎಚ್ಚರವಾದಮೇಲೆ ಏನೋ ಕನಸು ಅಂತ ಸುಮ್ಮನಾದೆ. ಆದರೆ ಕನಸು ನಿಲ್ಲಲೇ ಇಲ್ಲ. ಮದನ್ ಗೆ ಹೇಳಿದೆ. ಅವನು ನಮ್ಮ ಮನೆಗೆ ಯಾವಾಗಲೂ ಪೂಜೆ ಮಾಡಿಸುವ ಶಂಕರ ಶಾಸ್ತ್ರಿಗಳನ್ನ ಕೇಳೋಣ ಅಂದ. ಅವರು ಬಂದು ಅದೇನೇನೋ ಶಾಂತಿಗಳನ್ನೆಲ್ಲಾ ಮಾಡಿಸಿದರು. ಕನಸು ಮಾತ್ರ ನಿಲ್ಲಲೇ ಇಲ್ಲ. ಅಮೇಲೆ ಮದನಾನೇ ಯೋಚಿಸಿ, ಈ ವಿಗ್ರಹ ಯಾವುದಾದರೂ ದೇವಸ್ಥಾನ ಅಥವಾ ಆಶ್ರಮದಿಂದ ತಂದಿದ್ದಾಗಿದ್ದರೆ ಅದನ್ನು ಕಂಡು ಹಿಡಿದು ಅಲ್ಲಿಗೆ ದಾನ ಕೊಟ್ಟುಬಿಡೇಣ ಅಂತ ಹೇಳಿದ. ಲಕ್ಷಾಂತರ ದೇವಸ್ಥಾನಗಳಿರೋ ನಮ್ಮ ದೇಶದಲ್ಲಿ ಯಾವ ದೇವಸ್ಥಾನಾ ಅಂತ ಹುಡುಕೋದು ಹೇಳಿ. ಇದನ್ನೆಲ್ಲಾ ಐಶ್ವರ್ಯಾ ಹತ್ತಿರ ಹೇಳಿದ್ದಕ್ಕೆ ಅವಳು ನಿಮ್ಮನ್ನ ಕೇಳೋಣ ಅಂತ ಸಲಹೆ ಕೊಟ್ಟಳು. ಈಗೇನು ಮಾಡಲಿ?"

ಶರಲೇಖ ದೇವಯಾನಿ ಹೇಳಿದ್ದನ್ನೆಲ್ಲಾ ಸಾವಧಾನವಾಗಿ ಕೇಳಿದ. ಅನಂತರ," ನಿಮ್ಮ ಸಮಸ್ಯೆ ನನಗೆ ಚೆನ್ನಾಗಿ ಅರ್ಥವಾಗಿದೆ. ಇದನ್ನ ಲಘುವಾಗಿ ಕಾಣುವ ಪ್ರಶ್ನೆಯೇ ಇಲ್ಲ. ಆ ಮೂರ್ತಿಯದು ಒಂದು ಒಳ್ಳೆಯ ಫೋಟೋ ತೆಗೆದು ನನಗೆ ಕಳಿಸಿ. ಕೈಲಾದ ಪ್ರಯತ್ನ ನಾನು ಮಾಡುವೆ. " ಎಂದು ಆಶ್ವಾಸನೆ ಕೊಟ್ಟಮೇಲೆ ತೋಟ ನೋಡಲು ಹೊರ ನಡೆದೆವು.

ಇನ್ನೆರಡು ದಿನ ಮಂಜುಗೌಡನ ಆತಿಥ್ಯವನ್ನು ಸ್ವೀಕರಿಸಿ ಬೆಂಗಳೂರಿಗೆ ಹಿಂತಿರುಗಿದೆವು. ದಾರಿಯಲ್ಲಿ ಶರಲೇಖ ಹೆಚ್ಚು ಮಾತನಾಡಲಿಲ್ಲ. ಊರಿಗೆ ಹಿಂತಿರುಗಿದ ನಂತರ ನಾನು ವೃತ್ತಿಪರ ಚಟುವಟಿಕೆಗಳಲ್ಲಿ ಮಗ್ನನಾಗಿದ್ದೆ. ಶರಲೇಖನೂ ಬಿಡುವಿಲ್ಲದ ಕಾರ್ಯಗಳಲ್ಲಿ ಮುಳುಗಿದ್ದ. ಸುಮಾರು ಎರಡು ವಾರಗಳ ನಂತರ ಒಂದು ಬೆಳಗ್ಗೆ," ನಾಳೆ ಗುಲಾಬಿ ವನಕ್ಕೆ ಹೋಗಬೇಕು ಒಂದಷ್ಟು ಮಾಹಿತಿ ಕಲೆ ಹಾಕಿದ್ದೇನೆ.ದೇವಯಾನಿಗೆ ಫೋನ್ ಮಾಡಿದ್ದೆ. ಮದನ್ ಇಲ್ಲಿಗೆ ಬಂದು ನಮ್ಮನ್ನು ಕರೆದೊಯ್ಯುತ್ತಾನೆ". ಅಂತ ಹೇಳಿದ.

ಮಾರನೆಯ ದಿನ ಬೆಳಗ್ಗೆಯೇ ಹೊರಟೆವು. ಹನ್ನೊಂದಕ್ಕೆ ಗುಲಾಬಿವನ ತಲುಪಿದೆವು. ಅಲ್ಲಿ ದೇವಯಾನಿ ನಮ್ಮ ಗುಂಪನ್ನು ಸೇರಿದಳು. ಶರಲೇಖನಿಗೆ ಉಪಯುಕ್ತ ಮಾಹಿತಿ ಸಿಕ್ಕಿರುವ ಸಂಗತಿಯೇ ಅವಳ ಸಂತಸದ ಬಟ್ಟಲನ್ನು ತುಂಬಿತ್ತು. ಬೈಕೆರೆಯಿಂದ ಹೊರಟು ಸಕಲೇಶಪುರದ ಹೆದ್ದಾರಿಯನ್ನು ಸೇರಿ ಸಕಲೇಶಪುರ ದಾಟಿ ಸುಮಾರು ಇಪ್ಪತ್ತು ಕಿಲೋಮೀಟರ್ ಪ್ರಯಾಣಿಸಿದ ನಂತರ ಬಲಗಡೆ ಗುಡ್ಡವೊಂದರ ಮೇಲೆ ಒಂದು ಕೋಟೆ ಕಾಣಿಸಿತು. "ಇದೇ ಮಂಜರಾಬಾದ್ ಕೋಟೆ. ಟೀಪು ಸುಲ್ತಾನ , ಫ್ರೆಂಚರ

ಸಹಾಯದಿಂದ ನಿರ್ಮಿಸಿದ ಕೋಟೆ" ಎಂದು ಶರಲೇಖ ಅದರ ಐತಿಹ್ಯ ಹೇಳಿದ. ಅಲ್ಲಿಂದ ಮುಂದೆ ಸಾಗಿ ಆನೆ ಮಹಲ್, ಅಜ್ಜಿ ಗುಡ್ಡೆ, ಜಂಬರಡಿ ಇವುಗಳನ್ನು ದಾಟಿದ ನಂತರ ಬಲಕ್ಕೆ ಸ್ವಲ್ಪ ದೂರದಲ್ಲಿ ಮೇಕನಗದ್ದೆ ಎಂಬ ಫಲಕ ಕಂಡಿತು. ಅದೊಂದು ಪುಟ್ಟ ಗ್ರಾಮ. ಚಿಕ್ಕದಾದರೂ ಚೊಕ್ಕವಾಗಿತ್ತು ಆ ಹಳ್ಳಿ. ಬೆಳ್ಳಗೆ ಸುಣ್ಣ ಬಳಿದಿದ್ದ ಮನೆಗಳ ಮುಂದೆ ಸಗಣಿ ಸಾರಿಸಿದ ನೆಲಗಳ ಮೇಲೆ ರಂಗವಲ್ಲಿಗಳು ನಗುತ್ತಾ ಬಂದವರನ್ನು ಸ್ವಾಗತಿಸುತ್ತಿದ್ದವು. ಶರಲೇಖ ಕಾರನ್ನು ನಿಲ್ಲಿಸುವಂತೆ ಹೇಳಿ, ಮೊಬೈಲ್ ನಿಂದ ಯಾರಿಗೋ ಕರೆ ನೀಡಿದ. ಸ್ವಲ್ಪ ಹೊತ್ತಿನಲ್ಲೇ ಪಕ್ಕದ ಬೀದಿಯಿಂದ ಒಬ್ಬ ಸಂಭಾವಿತರು ನಡೆದು ಬಂದರು. ನಾವೆಲ್ಲಾ ಕಾರಿನಿಂದ ಇಳಿದೆವು. "ಇವರು ಶ್ರೀಕಂಠ ದೇಶಿಕರು. ಹತ್ತಿರದ ಪಾಂಡವ ಗುಡ್ಡದ ಮೇಲಿರುವ ದೇವಸ್ಥಾನಕ್ಕೆ ಪ್ರಧಾನ ಅರ್ಚಕರು. ದೇವಯಾನಿಯ ಸಮಸ್ಯೆಯ ಪರಿಹಾರಕ್ಕೆ ಬೇಕಾದ ಮಹತ್ವದ ಮಾಹಿತಿಯನ್ನು ಇವರೇ ನನಗೆ ದೊರಕುವಂತೆ ಮಾಡಿದವರು. " ಅಂತ ಶರಲೇಖ ಅವರನ್ನು ನಮಗೆ ಪರಿಚಯಿಸಿದ ನಂತರ ಅರ್ಚಕರು ನಮ್ಮನ್ನೆಲ್ಲಾ ಅವರ ಮನೆಗೆ ಕರೆದೊಯ್ದರು. ಮನೆಯ ಜಗಲಿಯ ಮುಂದೆ ಹಾಕಿದ್ದ ಕುರ್ಚಿಗಳ ಮೇಲೆ ನಾವೆಲ್ಲಾ ಕುಳಿತ ನಂತರ, ಅರ್ಚಕರು, " ಕಳೆದ ವಾರ ಶರಲೇಖ ಅವರು ಇಲ್ಲಿಗೆ ಬಂದಿದ್ದರು. ನಿಮ್ಮ ಸಮಸ್ಯೆಯ ಬಗ್ಗೆ ಅವರು ಬಹು ಮಹತ್ವದ ಕೆಲಸ ಮಾಡಿದ್ದಾರೆ. ಹುಲ್ಲಿನ ಮೆದೆಯಲ್ಲಿ ಸೂಜಿಯನ್ನು ಹುಡುಕುವಂತಹ ಕೆಲಸ ಅದು. ಅವರು ಮಾಡಿದ ಕೆಲಸದ ವಿವರವನ್ನು ಅವರ ಬಾಯಿಂದಲೇ ಕೇಳುವುದು ಚೆನ್ನ. ಅದಕ್ಕೆ ಮುಂಚೆ ಅವರ ಕೋರಿಕೆಯ ಮೇರೆಗೆ ಇಲ್ಲಿನ ಸ್ಥಳಪುರಾಣವನ್ನು ನಿಮಗೆ ತಿಳಿಸುವೆ." ಎಂದು ಹೇಳುತ್ತಿದ್ದಂತೆ ಒಬ್ಬ ಪುಟ್ಟ ಹುಡುಗಿ ನಮಗೆಲ್ಲಾ ಕಾಫಿ ತಂದುಕೊಟ್ಟಳು. ದೇಶಿಕರು ತಮ್ಮ ಮಾತನ್ನು ಪ್ರಾರಂಭಿಸಿದರು.

"ಹದಿನೆಂಟನೆಯ ಶತಮಾನದ ಕೊನೆಯ ದಶಕದ ಕಾಲ. ಟೀಪು ಬ್ರಿಟಿಷರಿಗೆ ಸಡ್ಡು ಹೊಡೆದು ತನ್ನ ವಿಸ್ತಾರವಾದ ಸಾಮ್ರಾಜ್ಯವನ್ನು ಭದ್ರಪಡಿಸುತ್ತಿದ್ದ. ಸಕಲೇಶಪುರದ ಬಳಿ ಒಂದು ಆಯಕಟ್ಟಿನ ಜಾಗವನ್ನು ಆರಿಸಿ ಅಲ್ಲಿ ಭದ್ರ ಕೋಟೆಯೊಂದನ್ನು ಕಟ್ಟಲು ಟೀಪು ಫ್ರೆಂಚರ ಸಹಾಯವನ್ನು ಕೋರಿದ್ದ.

1792ರಲ್ಲಿ ಫ್ರೆಂಚ್ ತಜ್ಞರು ಕೋಟೆಯ ನಿರ್ಮಾಣದ ಕಾರ್ಯವನ್ನು ಮುಗಿಸಿದರು. ಅದನ್ನು ನೋಡಲು ಟೀಪು ಸಾಹೇಬ ಆಗಮಿಸಿದ್ದ ದಿನ ಬೆಟ್ಟದ ಮೇಲೆ ಕಟ್ಟಿದ್ದ ಆ ಕೋಟೆಯ ಸುತ್ತಲೂ ಮಂಜು ಕವಿದಿದ್ದು, ಇಡೀ ಕೋಟೆ ಮಂಜಿನ ಮೇಲೆ ತೇಲುತ್ತಿದ್ದಂತೆ ಕಾಣುತ್ತಿತ್ತು. ಆ ಮನಮೋಹಕ ದೃಶ್ಯವನ್ನು ನೋಡಿ ಭಾವಪರವಶನಾಗಿ ಟೀಪು ಆ ಕೋಟೆಗೆ ಮಂಜರಾಬಾದ್ ಎಂದೇ ನಾಮಕರಣ ಮಾಡಿದ. ಕೋಟೆ ಇದ್ದ ಆ ಸ್ಥಳ ಕೋಗರವಳ್ಳಿ ಪ್ರಾಂತ್ಯದ ಮಲ್ಲನಾಯಕನೆಂಬ ಪಾಳೆಯಗಾರನ ಅಧೀನದಲ್ಲಿತ್ತು. ಇವನು ಟೀಪುವಿನ ಸಾಮಂತನಾಗಿದ್ದರಿಂದ ಸಹಜವಾಗಿಯೇ ಈತ ಕೋಟೆ ಕಟ್ಟಲು ಬಂದ ಫ್ರೆಂಚ್ ಸೈನಿಕರಿಗೆ ಆಶ್ರಯ ಕೊಡುವುದೇ ಅಲ್ಲದೇ ಅವರನ್ನು ಗೌರವಾನ್ವಿತ ಅತಿಥಿಗಳಂತೆ ಕಾಣಬೇಕೆಂದು ಟೀಪು ಸಾಹೇಬ ಮಲ್ಲನಾಯಕನಿಗೆ ಆಜ್ಞಾಪಿಸಿದ್ದ.

ಮಲ್ಲ ನಾಯಕನ ಮನೆದೇವರು ಬೆಟ್ಟದ ಭೈರವೇಶ್ವರ. ತನ್ನ ನಾಡಿನ ಮೇಕನ ಗದ್ದೆ ಪ್ರದೇಶದಲ್ಲಿದ್ದ ಪಾಂಡವ ಗುಡ್ಡದ ಮೇಲೆ ಈ ಪುರಾತನ ಭೈರವೇಶ್ವರ ಗುಡಿ ಇತ್ತು. ಪ್ರತಿ ಸೋಮವಾರ ಮಲ್ಲನಾಯಕನ ಮನೆಯವರೆಲ್ಲಾ ಆ ಗುಡಿಗೆ ಹೋಗಿ ಪೂಜೆ ಸಲ್ಲಿಸುವುದು ಅವರ ಸಂಪ್ರದಾಯವಾಗಿತ್ತು. ಒಮ್ಮೆ ಪೂಜೆ ಸಲ್ಲಿಸಿ ಹಿಂದಕ್ಕೆ ಬರುತ್ತಿದ್ದಾಗ, ಮಲ್ಲನಾಯಕನ ಮಗಳು ಮಲ್ಲವ್ವ ಹತ್ತಿದಲ್ಲೇ ಕುದುರೆಯ ಮೇಲೆ ಹೋಗುತ್ತಿದ್ದ ಫ್ರೆಂಚ್ ಅಧಿಕಾರಿಯೊಬ್ಬನ ಕಣ್ಣಿಗೆ ಬಿದ್ದಳು. ಅಧಿಕಾರಿ ಅವಳನ್ನು ಪಡೆಯಲು ಟೀಪುವಿನ ಮೇಲಧಿಕಾರಿಗಳ ಸಹಾಯ ಕೋರಿದ. ಮಲ್ಲನಾಯಕನಿಗೆ ಇದರ ಸುಳಿವು ತಿಳಿದ ತಕ್ಷಣ, ಮಗಳನ್ನು ಕರೆದು, "ಕೇಡುಗಾಲ ಬಂದಿದೆಯವ್ವ. ನೀನು ಈ ರಾತ್ರಿಯೇ

ನಮ್ಮ ಬಂಧುಗಳಿರುವ ಜನ್ನಾಪುರಕ್ಕೆ ಹೋಗಬೇಕು. ನೀನು ಇಲ್ಲಿಂದ ತಪ್ಪಿಸಿಕೊಂಡು ಹೋದಮೇಲೆ ನನಗೇನು ಶಿಕ್ಷೆ ಕಾದಿದೆಯೋ ಆ ಶಿವನೇ ಬಲ್ಲ. ಏನೇ ಬರಲಿ, ನೀನು ಮಾತ್ರ ಪುನಃ ಇಲ್ಲಿಗೆ ಹಿಂದಕ್ಕೆ ಬರುವುದಿಲ್ಲವೆಂದು ಭಾಷೆ ಕೊಡು. ದೇವಸ್ಥಾನದಲ್ಲಿ ಉತ್ಸವ ಮೂರ್ತಿ ಬೆಟ್ಟದ ಭೈರವೇಶ್ವರನನ್ನು ತರಿಸಿದ್ದೇನೆ. ಅವನು ನಿನ್ನ ಬಳಿ ಇದ್ದು ನಿನ್ನನ್ನು ರಕ್ಷಿಸುತ್ತಾನೆ. "ಅಂತ ಹೇಳಿ ಉತ್ಸವ ಮೂರ್ತಿಯನ್ನು ಅವಳ ಕೈಯ್ಯಲಿಟ್ಟ. ಮಲ್ಲವ್ವ ಜನ್ನಾಪುರದಲ್ಲೇ ನೆಲೆಸಿದಳು."

ಎಲ್ಲರೂ ಮೂಕವಿಸ್ಮಿತರಾಗಿ ಈ ಐತಿಹ್ಯವನ್ನು ಕೇಳಿಸಿಕೊಂಡೆವು. ದೇವಯಾನಿ. "ಬೈಕೆರೆ ಪಕ್ಕದ ಗ್ರಾಮವೇ ಜನ್ನಾಪುರ. ನಮ್ಮ ಅನೇಕ ಬಂಧುಗಳು ಅಲ್ಲಿದ್ದಾರೆ" ಎಂದು ಉದ್ಗರಿಸಿದಳು.

ಶರಲೇಖ ತನ್ನ ವಿವರಣೆಯನ್ನು ಪ್ರಾರಂಭಿಸಿದ. "ಇದರಲ್ಲಿ ನನ್ನ ಪಾತ್ರ ಬಹು ಕಡಿಮೆ.. ಬೆಂಗಳೂರಿಗೆ ಹಿಂತಿರುಗಿದ ಮೇಲೆ ಪುರಾತತ್ವ ಇಲಾಖೆಯಲ್ಲಿರೋ ನನ್ನ ಗೆಳೆಯ ಖಾಲಿದ್ ನನ್ನು ಸಂಪರ್ಕಿಸಿ, ದೇವಯಾನಿ ಕೊಟ್ಟ ಫೋಟೋವನ್ನ ಅವನಿಗೆ ಕಳಿಸಿದೆ. ಅದು ಯಾವ ದೇವರೆಂದು ಮೊದಲು ಪತ್ತೆ ಹಚ್ಚಿ ಅನಂತರ ಆ ದೇವರ ದೇವಸ್ಥಾನಗಳೆಲ್ಲವನ್ನು ಒಂದೊಂದಾಗಿ ಭೇಟಿಮಾಡಿ ಈ ವಿಗ್ರಹದ ಮೂಲವನ್ನು ಪತ್ತೆ ಹಚ್ಚುವುದು ನನ್ನ ಹಂಚಿಕೆಯಾಗಿತ್ತು. ಪುರಾತತ್ವ ಇಲಾಖೆಗೆ ಕರ್ನಾಟಕದ ಶಿಲ್ಪಗಳ ಬಗ್ಗೆ ತಜ್ಞರಾಗಿರುವ ದೇಸಾಯರನ್ನು ಖಾಲಿದ್ ಭೇಟಿಮಾಡುವುದಕ್ಕೆ ಒಂದು ವಾರ ಹಿಡಿಯಿತು. ಆಮೇಲೆ ಅವರು ಫೋಟೋ ನೋಡಿ ಅದು ಭೈರವೇಶ್ವರನ ಪ್ರತಿಮೆಯೆಂದು ಖಚಿತವಾಗಿ ಹೇಳಿದರು. ಅಮೇಲೆ ನನ್ನ ಕೆಲಸ ಶುರುವಾಯಿತು. ಆದಿ ಚುಂಚನಗಿರಿಯೂ ಸೇರಿದಂತೆ ಕರ್ನಾಟಕದಲ್ಲಿ ಏಳು ಭೈರವೇಶ್ವವರ ದೇವಸ್ಥಾನಗಳಿವೆ. ನಾನು ಬೈಕೆರೆಗೆ ಹತ್ತಿರದಲ್ಲಿರುವ ದೇವಸ್ಥಾನದಿಂದ ಪ್ರಾರಂಭಿಸೋಣವೆಂದು ನಿರ್ಧರಿಸಿದಾಗ , ತೀರ ಹತ್ತಿರದ್ದೆಂದರೆ ಈ ಬೆಟ್ಟದ ಭೈರವೇಶ್ವರ ಅಂತ ಗೊತ್ತಾಯಿತು. ಸರಿ, ಕೈಯ್ಯಲ್ಲಿ ಫೋಟೋ ಹಿಡಿದು ದೇಶಿಕರನ್ನು ಭೇಟಿಮಾಡಿದೆ. ಫೋಟೋ ನೋಡಿದ ತಕ್ಷಣ ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ವಿಗ್ರಹ ಬೈಕೆರೆಯಲ್ಲಿದೆ ಎಂದಾಗ ಜನ್ನಾಪುರ ಅದರ ಪಕ್ಕದ ಗ್ರಾಮ ಎಂಬ ಅಂಶ ವಿಗ್ರಹದ ಮೂಲವನ್ನು ಶತಾಂಶ ಖಚಿತಪಡಿಸಿದಂತೆಯೇ ಆಯಿತು ಎಂದು ಅವರು ಅಭಿಪ್ರಾಯ ಪಟ್ಟರು. ಮಲ್ಲವ್ವನ ವಂಶಜರು ಸಿಕ್ಕಿದಂತಾಯಿತಲ್ಲಾ ಎಂದು ದೇಶಿಕರು ಬಹು ಸಂಭ್ರಮಪಟ್ಟರು ಕೂಡಾ. ಆಮೇಲೆ ನಾನು ಅವರೊಂದಿಗೆ ದೇವಸ್ಥಾನಕ್ಕೆ ಹೋಗಿ  ಅಲ್ಲಿನ ಉತ್ಸವ ಮೂರ್ತಿಯನ್ನು ನೋಡಿದೆ. ಈ ವಿಗ್ರಹದ ತದ್ವತ್ ಪ್ರತಿರೂಪ ಅದು. ಈಗ ದೇವಸ್ಥಾನಕ್ಕೆ ಹೋಗೋಣ " ಎಂದು ಶರಲೇಖ ಹೇಳಿದ ನಂತರ ಕಾರಿನಲ್ಲಿ ಪಾಂಡವಗುಡ್ಡಕ್ಕೆ ಹೊರಟೆವು. ದೇವಸ್ಥಾನದ ವರೆಗೂ ದಾರಿ ಇತ್ತು. ಆರುನೂರು ವರ್ಷಗಳಷ್ಟು ಹಳೆಯ ದೇವಸ್ಥಾನ ಇದು. ದೇಶಿಕರು ಬಹು ಉತ್ಸಾಹದಿಂದ ದೇವಯಾನಿಗೆ ಎಲ್ಲವನ್ನು ವಿವರಿಸಿದರು.

ದೇವಯಾನಿಗೆ ಮನಸ್ಸು ತುಂಬಿ ಬಂದಿತ್ತು. ಧ್ಯಾನಮಗ್ನಳಾಗಿ ದೇವಸ್ಥಾನದ ಮೊಗಸಾಲೆಯಲ್ಲಿ ಬಹು ಹೊತ್ತು ಕುಳಿತಿದ್ದಳು.  ಭೈರವೇಶ್ವರ ತನ್ನ ಭಕ್ತಳ ವಂಶಜೆಯನ್ನು ತನ್ನ ಸನಿಹಕ್ಕೆ ಕರೆಸಿಕೊಂಡಿದ್ದ. ಶರಲೇಖನ ಮುಖದಲ್ಲಿ ಸಾರ್ಥಕತೆಯ ಭಾವವಿತ್ತು. ಮದನನೊಡನೆ ನಾನು ಸುತ್ತಣ ಪ್ರಕೃತಿ ಸೌಂದರ್ಯವನ್ನು ಸವಿಯಲು ಹೊರಗೆ ಕಾಲಿಟ್ಟೆ.

■

● ದಂನಳ

(ಕನ್ನಡ ರಾಜ್ಯೋತ್ಸವ ನಿಮಿತ್ತ ಸ್ಪೆಷಲ್)

- ನಿಮಗೆ ಡಿಫೀಟೇ ಇಲ್ಲ ಎಂದಾದರೆ ನಿಮ್ಮ ಡ್ರೀಂಸ್ ಎಷ್ಟು ದೊಡ್ಡದಿರುತ್ತದೆ?
- ನಿಮ್ಮ ಬಳಿ ಇರುವುದನ್ನು ಲೆಸ್ ಎಂದು ಭಾವಿಸದಿರಿ. ಹಾಗೆಯೇ ಬೇರೆಯವರ ಬಳಿ ಇರುವುದನ್ನು  ಮೋರ್ ಎಂದು ತಿಳಿಯದಿರಿ.
- ಎ ಮ್ಯಾನ್ ಕೆನ್ ಕನ್‌ವಿನ್ಸ್ ಎನಿಒನ್ ದಟ್ ಹಿ ಈಸ್ ಸಂಬಡಿ ಎಲ್ಸ್ ಬಟ್ ನೆವರ್ ಹಿಮ್‌ಸೆಲ್ಫ್.
- ನಮ್ಮ ಫೇಟ್ ನಿರ್ಧರಿಸುವುದು ನಮ್ಮ ವಾಕು. ನಾವು ಧರಿಸುವ ಫುಟ್‌ವೇರ್ ಅಲ್ಲ.
- ಕೆಲವೊಮ್ಮೆ ಸೈಲೆಂಟಾಗಿ ಇರುವುದೇ ಹೆಚ್ಚು ಸೂಕ್ತ. ಏಕೆಂದರೆ ಮೌನವನ್ನು ಟ್ವಿಸ್ಟ್ ಮಾಡಿ ಹೇಳಲು ಯಾರಿಗೂ ಸಾಧ್ಯವಿಲ್ಲ.
- ನಾವು ಎಲ್ಲಿಂದ ಬರುತ್ತೇವೆ ಎಂಬುದು ಚೂಸ್ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಅಲ್ಲಿಂದ ವೇರ್ ಟು ಗೊ ಎಂಬುದನ್ನು ಚೂಸ್ ಮಾಡಿಕೊಳ್ಳಲು ಸಾಧ್ಯ.
- ನಿಮ್ಮ ನೋವನ್ನು ನೊಬಡಿ ಕೆನ್ ಟೇಕ್ ಅವೆ. ಆದುದರಿಂದ ಡೋಂಟ್ ಲೆಟ್ ಎನಿಒನ್ ಟೇಕ್ ಅವೆ ಯುವರ್ ಸುಖ.
- ನಮ್ಮ ಇನೆಬಲಿಟಿ ಟು ಸೀ ಮಹಿಳೆಯರನ್ನು ವಿತ್ ಫುಲ್‌ನೆಸ್ ಈಸ್ ವೈ ವಿ ಯಾವಾಗಲೂ ಸ್ಪೀಕ್ ಅಬೌಟ್ ವಿಮೆನ್ಸ್ ಅಚೀವ್‌ಮೆಂಟ್ಸ್  ಅಸ್ ಎಕ್ಸೆಪ್ಷನ್ಸ್ ಅಂಡ್ ಉದಾಹರಣೆ.
- ಡಿಫೀಟೇ ಅಂತಿಮವಲ್ಲ. ಡಿಫೀಟನ್ನೇ ಅಂತಿಮ ಎಂದು ಭಾವಿಸಿದಾಗ ಮಾತ್ರ ಅದು ಡಿಫೀಟಾಗುತ್ತದೆ.
- ದಿ ಬಿಗ್ಗೆಸ್ಟ್ ಆಶ್ಚರ್ಯ ಇನ್ ಲೈಫ್ ಈಸ್ ಯು ಡು ನಾಟ್ ನೊ ಹು ಈಸ್ ಪ್ರಾರ್ಥನೆ ಮಾಡ್ತಿದ್ದಾರೆ ನಿಮಗೆ ಆರ್ ಹು ಈಸ್ ಪ್ಲೇಯಿಂಗ್ ವಿತ್ ಯುವರ್ ಲೈಫ್.
- ಈಗ ಜನಗಳು ಮನೇಲಿ ಪಿಕ್ಚರ್ ನೋಡ್ತಾರೆ ಲಂಚ್ ಅಥವಾ ಡಿನ್ನರ್‌ಗೆ ಹೊರಗೆ ಹೋಗ್ತಾರೆ.
- ಫೇಟ್‌ಗಿಂತ  ಅದನ್ನು ಹೇಗೆ ಮ್ಯಾನೇಜ್ ಮಾಡ್ತೀರಿ ಎಂಬುದು ಹೆಚ್ಚು ಇಂಪಾರ್ಟೆಂಟ್ ಆಗುತ್ತದೆ.
- ನೃತ್ಯ ಈಸ್ ದಿ ಆರ್ಟ್ ಡ್ರಾಯಿಂಗ್ ಮ್ಯೂಸಿಕ್.
- ಅನುಭವ ಎಂಬ ಕಾಲೇಜಿನಿಂದ ಗ್ರಾಜುಯೇಟ್ ಆದೆ ಎಂದು ನೀವು ಭಾವಿಸುತ್ತಿದ್ದಾಗಲೇ ಹೊಸ ಕೋರ್ಸ್ ಆರಂಭವಾಗಲಿರುವ ಅನೌನ್ಸ್‌ಮೆಂಟ್ ಬರುತ್ತದೆ.

■

# ಸತ್ಯನಾರಾಯಣನ ಬೇಸತ್ತ ವಿಷಯ

**●ದೊಡ್ಡರಂಗೇಗೌಡ**

ಜೀವನದಲ್ಲಿ ಹಲವು ವಿಶೇಷ ಸಂಗತಿಗಳು ಇರುತ್ತವೆ. ಅವುಗಳನ್ನು ನಾವು ಆಮೂಲಾಗ್ರವಾಗಿ ನೋಡುವುದೇ ಇಲ್ಲ. ನಾನು ಒಂದು ಖಾಸಗೀ ಕಾಲೇಜಿನಲ್ಲಿ ಪ್ರಾಂಶುಪಾಲನಾಗಿದ್ದೆ. ಆಗಲೇ ನಾನು ಈ ಸಂಗತಿಯನ್ನು ತೀವ್ರವಾಗಿ ಗಮನಿಸಿದ್ದು. ಅಧ್ಯಾಪಕರುಗಳೂ, ಗುಮಾಸ್ತರೂ, ನಾಲ್ಕನೇ ದರ್ಜೆ ನೌಕರರೂ ಸಾಮಾನ್ಯವಾಗಿ ವಿಪರೀತ ಸುಳ್ಳು ಹೇಳುವುದನ್ನು ಕೇಳಿ ಕೇಳಿ ರೋಸಿಹೋಗಿದ್ದೆ. ಎಷ್ಟೋ ಸಾರಿ ಇಷ್ಟು ಚಿಕ್ಕ ವಿಷಯಗಳಿಗೆಲ್ಲಾ ಜನ ಯಾಕೆ ಸುಳ್ಳು ಹೇಳುತ್ತಾರೆ ಎಂದು ಯೋಚಿಸಿದ್ದೆ. ಅದಕ್ಕೆ ನನಗೆ ಉತ್ತರ ಸಿಕ್ಕಿರಲಿಲ್ಲ, ಇಂದಿಗೂ ಸಿಕ್ಕಿಲ್ಲ, ಮುಂದೂ ಸಿಗುವುದಿಲ್ಲ ಎಂದು ಖಾತರಿಯಾಗಿದೆ.

ನಮ್ಮಲ್ಲಿ ನಿತ್ಯಾನಂದ ಎಂಬ ಒಬ್ಬ ನೌಕರ ಇದ್ದ. ನನಗೂ ಅವನು ಆತ್ಮೀಯನೇ. ನನಗೆ ಕಾಫಿ ತಿಂಡಿ ತಂದು ಕೊಡುವುದರಲ್ಲಿ ವಿಶೇಷ ಆಸಕ್ತಿ ತೋರುತ್ತಿದ್ದ. ಹೀಗಾಗಿ ನನಗೂ ಅವನಲ್ಲಿ ಎಂಥದೋ ಒಂದು ಸಲಿಗೆ ಬೆಳೆದಿತ್ತು. (ಅವನ ಮೂಲ ಹೆಸರು ಸತ್ಯನಾರಾಯಣ) ಸಾಮಾನ್ಯವಾಗಿ ಅವನು ಸುಳ್ಳು ಹೇಳುವವನೇ ಅಲ್ಲ. ಆದರೂ ನಿತ್ಯಾನಂದ ಕೆಲವೊಮ್ಮೆ ಸುಳ್ಳು ಹೇಳುತ್ತಾನೆ ಅಂತ ನನಗೆ ಅನಿಸುತ್ತಿತ್ತು.

ನಿತ್ಯಾನಂದನಿಗೆ ರಜೆ ಬೇಕಾದಾಗ ಆಂಗ್ಲ ಭಾಷೆಯಲ್ಲೇ ಅರ್ಜಿ ಬರೆದುಕೊಂಡು ಬರುತ್ತಿದ್ದ. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯೆಂದು ಅವನಿಗೂ ಗೊತ್ತು. ಅದರೂ ತನ್ನ ಹರಕು ಮುರುಕು ಆಂಗ್ಲ ಭಾಷೆಯಲ್ಲಿ ಅರ್ಜಿ ಬರೆದುಕೊಂಡು ಬರುತ್ತಿದ್ದ. ಅದೆಲ್ಲಾದರೂ ಹೋಗಲಿ ಇವನನ್ನು ತಿದ್ದುವುದು ಸಾಧ್ಯವಿಲ್ಲ ಎಂದು ಬೇರೆ ವಿಷಯಗಳ ಕಡೆಗೆ ಗಮನ ಕೊಡುತ್ತಿದ್ದೆ. ಪ್ರತೀ ಸಾರಿಯೂ ಅವನು ಮಾಡುತ್ತಿದ್ದ ತಪ್ಪು ಎಂದರೆ ಎಷ್ಟೋ ವರ್ಷಗಳ ಹಿಂದೆಯೇ ಸತ್ತು ಹೋಗಿರುವ ಅವನ ಅಜ್ಜಿಯನ್ನು ಮತ್ತೆ ಮತ್ತೆ ಸಾಯಿಸುತ್ತಾ ಬಂದಿರುವುದು (ಸತ್ಯನಾರಾಯಣ )

ಹೀಗೇ ಒಂದು ಸಾರಿ ತನ್ನ ಅಜ್ಜಿ ಸತ್ತರೆಂದು ರಜಾಕ್ಕೆ ಅರ್ಜಿ ಬರೆದುಕೊಂಡು ಬಂದ ನಿತ್ಯಾನಂದನಿಗೆ ನಾನು ಅಲ್ಲಯ್ಯಾ ನಿನಗೆ ನಿಜವಾಗ್ಲೂ ಎಷ್ಟು ಜನ ಅಜ್ಜಿಯರು ಇದಾರೆ, ಸತ್ಯ ಹೇಳು, ಸುಳ್ಳು ಹೇಳಬೇಡ ಎಂದು ಗದರಿದೆ. ಆಗ ಬಾಯಿ ಬಿಟ್ಟ ಪುಣ್ಯಾತ್ಮ. ಇದ್ದೊಬ್ಬ ಅಜ್ಜಿ ಸತ್ತು ಹೋಗಿ ಹತ್ತು ವರ್ಷಗಳಾಗಿವೆ. ಸರ್ ಯಾಕೆ ಹಾಗೆ ಕೇಳಿದಿರಿ ಸರ್ ಅಂತ ಕೇಳಿದ. ಅಲ್ಲ ನಿತ್ಯಾನಂದ ನಿನಗೆ ಪ್ರತೀ ಸಾರಿಯೂ ರಜ ಬೇಕಾದಾಗ ಎಂದೋ ಸತ್ತು ಹೋಗಿರುವ ಅಜ್ಜಿಯನ್ನೇ ಮತ್ತೆ ಮತ್ತೆ ಸಾಯಿಸುತ್ತೀಯಲ್ಲ, ಬೇರೆ ಯಾರನ್ನಾದರೂ ನೀನು ಸಾಯಿಸಬಹುದಲ್ಲ ಅಂತ ಕೇಳಿದೆ. ಅದಕ್ಕೆ ನಿತ್ಯಾನಂದ ಅಲ್ಲಾ ಸಾರ್ ನಾನು ಹೆಂಡತಿ ಸತ್ತಳು ಅಥವಾ ಅತ್ತೆ ಸತ್ತಳು ಅಂತ ಬರೆದರೆ ಅವರು ನಿಜವಾಗಿ ಸತ್ತುಹೋದರೆ ಅಂತ ಭಯ. ಅಜ್ಜಿ ಆದರೆ ಪರವಾಗಿಲ್ಲ, ಹೇಗೂ ಹತ್ತು ವರ್ಷದ ಹಿಂದೆ ಸತ್ತುಹೋಗಿದ್ದಾರೆ. ಅದಕ್ಕೇ ಅಜ್ಜಿಯನ್ನೇ ಸಾಯಿಸುತ್ತಾ ಬಂದಿದ್ದೀನಿ. ಅದೂ ಅಲ್ಲದೇ ನೀವು ಎಲ್ಲಿ ರಜಾ ಕೊಡೋಲ್ಲವೋ ಅಂತ ಹೀಗೆ ಮಾಡುತ್ತಿದ್ದೇನೆ. ಈ ಹಿಂದಿನ ಪ್ರಾಂಶುಪಾಲರ ಕಾಲದಲ್ಲೂ ಹೀಗೇ ಮಾಡಿಕೊಂಡು ಬಂದಿದ್ದೀನಿ. ಅದೂ ಅಲ್ಲದೇ ಸಾವು ಅಂದರೆ ಜನ ಅನುಕಂಪ ತೋರಿಸುತ್ತಾರೆ, ಬೇರೆ ಕಾರಣಗಳಿಗೆ ಅನುಕಂಪ ಸಿಗೋದಿಲ್ಲ, ರಜಾನೂ ಕೊಡೋದಿಲ್ಲ ಎಂದು ಸತ್ಯವನ್ನೇ ನುಡಿದ ನಿತ್ಯಾನಂದ. ಅವನ ತರ್ಕವನ್ನು ಕಂಡು ಮತ್ತು ಸುಳ್ಳು ಹೇಳೋ ವಿಧಾನವನ್ನು ಕಂಡು ನಗಬೇಕೋ ಅಳಬೇಕೋ ತಿಳಿಯಲಿಲ್ಲ.

ಅಂತೂ ಅಜ್ಜಿಯನ್ನು ಪುನ: ಪುನ: ನೆನಪು ಮಾಡಿಕೊಳ್ಳುತ್ತಾನಲ್ಲಾ ಅದೇ ದೊಡ್ಡ ವಿಷಯ ಅನಿಸಿತು ನನಗೆ. ■

# ಬೀದಿ ಜಗಳಗಳು

● **ಕೆ. ಸತ್ಯನಾರಾಯಣ**

ಸಮಾಜ ವಿಜ್ಞಾನದ ಹಿನ್ನೆಲೆಯಿಂದ ಬಂದ ನನಗೆ ವಿದ್ಯಾಭ್ಯಾಸ ಮುಗಿದ ಕೆಲ ವರ್ಷಗಳ ವರೆಗೆ ಸಂಶೋಧನೆಯಲ್ಲೂ ಆಸಕ್ತಿಯಿತ್ತು. ಎರಡು ಮೂರು ಸಂಸ್ಥೆಗಳಿಗೆ ನಾನು "ಬೀದಿ ಜಗಳ"ವನ್ನು ಕುರಿತು ಸಾಂಸ್ಕೃತಿಕ ಸಂಶೋಧನೆ ಮಾಡುತ್ತೇನೆಂದು ಬರೆದುಕೊಟ್ಟೆ. ಕೆಲವರು ನಕ್ಕರು. ಇನ್ನು ಕೆಲವರು ತಿರಸ್ಕಾರದಿಂದ ನೋಡಿದರು. ದೇಶ ದೇಶಗಳ ನಡುವಿನ ಜಗಳ, ಜಾತಿಗಳ ಜಗಳ, ವರ್ಗ ಸಂಘರ್ಷ, ಧಾರ್ಮಿಕ ಕಲಹ ಇದೆಲ್ಲ ನಮ್ಮನ್ನು ವ್ಯಾಪಿಸಿಕೊಂಡಿರುವಾಗ ಬೀದಿ ಜಗಳಗಳಂತ ವಿಷಯವನ್ನು ಏಕೆ ಆರಿಸಿಕೊಳ್ಳುವೆ ಎಂದು ಯಾರೊಬ್ಬರೂ ಒಪ್ಪಲಿಲ್ಲ. ಈಗ ನಲವತ್ತು–ನಲವತ್ತೈದು ವರ್ಷಗಳ ನಂತರ ಸಂಶೋಧನಾ ಪ್ರಬಂಧದ ಬದಲು ಕೇವಲ ಪ್ರಬಂಧ ಬರೆಯಲು ಕುಳಿತಿದ್ದೇನೆ. ನಿಜ ಹೇಳಬೇಕೆಂದರೆ, ಮನೆ ಒಳಗಿನ ಜಗಳಕ್ಕೆ ಕಾರಣವಾದ ಸಂಗತಿಗಳು ಬೀದಿಗೆ ಬಂದಾಗಲೇ ಸ್ವಾರಸ್ಯ ಇರುವುದು, ಸೊಗಸು ಹೆಚ್ಚುವುದು. ನನ್ನನ್ನು ತುಂಬಾ ಪ್ರಭಾವಿಸಿದ ಮೊದ ಮೊದಲ ಬೀದಿ ಜಗಳಗಳು ಈ ಸ್ವರೂಪದವು.

ಬೀದಿ ಜಗಳ ಮಾತಿನಲ್ಲಿ ನಡೆಯಬೇಕೋ, ಕೈ ಕೈ ಮಿಲಾಯಿಸಬೇಕೋ ಎಂಬ ಪ್ರಶ್ನೆ ಬಂದಾಗ, ನಾಗರಿಕರಾದ ನೀವು ಮಾತಿನ ವರಸೆಗೇ ಓಟು ಕೊಡುತ್ತೀರಿ ಎಂದು ನನಗೆ ಗೊತ್ತು. ಏನೇ ಆದರೂ ಮಾತಿನ ಜಗಳ ಮಾತಿನ ಜಗಳವಷ್ಟೇ! ಅದು ಫಲ ನೀಡಿದರೆ ಕೈ ಮಿಲಾಯಿಸಲು ಯಾರು ಹೋಗುತ್ತಾರೆ? ಜಗಳ ಕಾಯುವುದೇ ಪರಿಣಾಮಕ್ಕಾಗಿ. ನಾಲ್ಕು ಜನರ ಎದುರಿಗೆ ನಮ್ಮ ಶಕ್ತಿ ಪ್ರದರ್ಶಿಸುವುದಕ್ಕಾಗಿ. ಹಾಗಾಗಿ, ಕೈ ಕೈ ಮಿಲಾಯಿಸಿದರೆ ಇನ್ನೂ ಶೋಭಾಯಮಾನವಾಗಿರುತ್ತದೆ. ಮಾತಿನ ಬೀದಿ ಜಗಳಗಳೆಲ್ಲ ನನಗೆ ಮರೆತೇ ಹೋಗಿವೆ. ಕೈ ಕೈ ಮಿಲಾಯಿಸಿದ ಜಗಳಗಳೆಲ್ಲ ವಿವರವಿವರವಾಗಿ ನೆನಪಿನಲ್ಲಿವೆ. ಯಾರ ಸೊಂಟ ಮುರಿಯಿತು, ಯಾರ ಮೊಣಕೈ ದೇಹದಿಂದ ಭಿನ್ನವಾಗಿ ನೇತಾಡಿತು, ಎಷ್ಟು ದಿನ ಕಾಲು ಉಳುಕಿತ್ತು, ಎಂಬುದೆಲ್ಲಾ ನೆನಪಿನಲ್ಲಿ ಚೆನ್ನಾಗಿ ಊರಿದೆ.

ಬೀದಿ ಜಗಳಗಳಲ್ಲಿ ತಕ್ಷಣದ ಮತ್ತು ವಿಶೇಷ ಪರಿಣಾಮ ಮುಖ್ಯ. ಕೇವಲ ಮಾತು ಮತ್ತು ಹೊಡೆದಾಟದಿಂದಲೇ ಸಿಗುವುದಿಲ್ಲ. ರಂಗೇರಬೇಕಾದರೆ ಪಾದರಕ್ಷಾ ಪ್ರಯೋಗ, ಕ್ಯಾಕರಿಸಿ ಉಗಿಯುವುದು ಕೂಡ ಅನಿವಾರ್ಯವಾಗುತ್ತದೆ. ಸಭ್ಯರೊಬ್ಬರು ಬೀದಿ ಜಗಳವನ್ನು ಈ ಹಂತಕ್ಕೂ ತಂದಾಗ ನಾನು ಆಶ್ಚರ್ಯಚಕಿತನಾಗಿ ಪ್ರಶ್ನಿಸಿದೆ. ಆಗ ಅವರು, "ನನಗೂ ಬೇಕಿರಲಿಲ್ಲ. ಆದರೆ ಊರಿನಲ್ಲಿ ಬೀದಿ ಜಗಳ ಮಾಡುವವರೆಲ್ಲ ಈ ಹಂತಕ್ಕೆ ಬಹುಬೇಗ ತಲುಪುತ್ತಾರೆ. ನಾನೊಬ್ಬ ಮಾತ್ರ ಮಾತಿನ ವರಸೆಯಲ್ಲೇ ಉಳಿದರೆ ನನ್ನ ಗ್ರೇಡು, ಸಾಂಸ್ಕೃತಿಕ ಮಹತ್ವ ಕಡಿಮೆ ಆಗಬಹುದಲ್ಲವೇ?" ಎಂದು ಉತ್ತರಿಸಿದರು.

ಈ ಕಾರಣಕ್ಕಾಗಿ ನನಗೆ ನಾಟಕಕಾರ ಸಂಸರ ಬಗ್ಗೆ ತುಂಬಾ ಗೌರವ. ಇಂತಹ ದಿನ, ಇಂತಹ ಕಡೆ, ಇಂತಹ ಶಾಸ್ತ್ರಿಗಳಿಗೆ ಪಾದರಕ್ಷಾ ಪ್ರಯೋಗವೆಂದು ಮಾನ್ಯರು ಪ್ರಕಟಣೆಯನ್ನು ಹೊರಡಿಸಿಬಿಡುತ್ತಿದ್ದರಂತೆ. ಈ ರೀತಿಯ ಹಂತದ

ಜಗಳವನ್ನು ಅವರು ದಾಯಾದಿ ಬಂಧುಗಳಿಗೆ ಮಾತ್ರ ಮೀಸಲಿಟ್ಟಿದ್ದರು ಎಂಬುದು ನಿಜ. ಆದರೆ ಒಬ್ಬ ಸಾಹಿತಿಯ ವಿಷಯದಲ್ಲಿ ಮನೆ ಮುಂದೆ ನಿಂತು ಧಮಕಿ ಹಾಕಿದಾಗ ಆ ಸಾಹಿತಿ ವರ್ಷಾನುಗಟ್ಟಲೆ ಮನೆಯಿಂದ ಈಚೆಗೇ ಬರಲಿಲ್ಲವಂತೆ. ಇದನ್ನು ತಿಳಿಸಿದ ಮರಿ ಸಂಸರೊಬ್ಬರು ನನ್ನನ್ನು ಕರೆದುಕೊಂಡು ಹೋಗಿ ಆ ಸಾಹಿತಿ ವಾಸವಾಗಿದ್ದ ಮನೆ, ಬೀದಿಗಳನ್ನೆಲ್ಲಾ ಪವಿತ್ರ ಯಾತ್ರಾ ಸ್ಥಳಗಳೆಂಬಂತೆ ತೋರಿಸಿದರು. ಈ ಮರಿ ಸಂಸರು ಸಂಸರನ್ನು ಅನುಕರಿಸಲು ಪ್ರಯತ್ನಪಟ್ಟರೂ ಅದಕ್ಕೆ ಬೇಕಾದ ಸೂಕ್ತ ತರಬೇತಿ ಸಿಗದೆ ಮಾತಿನಲ್ಲೇ ಪಾದರಕ್ಷಾ ಪ್ರಯೋಗ, ಕಪಾಳಮೋಕ್ಷ ಪ್ರವೀಣ ಇಂತಹ ಪದಗಳನ್ನು ನಿರಂತರವಾಗಿ ಬಳಸುತ್ತಿದ್ದರು. ಏನೇ ಆದರೂ ಸಂಸರು ಮತ್ತು ಆ ಸಾಹಿತಿಗಳ ಬೀದಿಯಲ್ಲಿ ಈಗ ಓಡಾಡುವಾಗಲೂ ನನ್ನ ಮೈಯೆಲ್ಲಾ ಬಿಸಿಯಾಗುತ್ತದೆ. ಒಂದು ಸಲ ಧಾರವಾಡದಲ್ಲಿ ನಾನು ಕೂಡ ವೇದಿಕೆಯ ಮೇಲಿದ್ದಾಗ ಸಭಿಕರೊಬ್ಬರು ಪಾದರಕ್ಷೆಯನ್ನು ಕೈನಲ್ಲಿ ತೋರಿಸಿದರು. ನಾನು ಮುಂದಿನ ಹಂತವನ್ನು ಸಂಭ್ರಮದಿಂದ ನಿರೀಕ್ಷಿಸಿದೆ. ಸಂಸರು ಸ್ವರ್ಗದಿಂದ ಬಂದು ನೋಡಬಾರದೆ ಎಂದು ಪ್ರಾರ್ಥಿಸಬೇಕು ಎಂದುಕೊಂಡರೆ, ಕೆಲವು ತಿಳಿಗೇಡಿಗಳು, ಸಾಹಿತಿಗಳು ಈ ರೀತಿ ವರ್ತಿಸುವುದು ಸಂವಿಧಾನಕ್ಕೆ ವಿರುದ್ಧ ಎಂದು ಎಲ್ಲವನ್ನೂ ಶಾಂತಿಗೆ ತಂದುಬಿಟ್ಟರು.

ಬೀದಿ ಜಗಳಗಳ ಬಗ್ಗೆ ಮುಂಚಿತವಾಗಿ ಪ್ರಕಟಣೆ ನೀಡಿದ್ದರೆ, ಪ್ರೇಕ್ಷಕರು ಸಿಗುತ್ತಾರೆ. ಪಕ್ಷ, ಪೂರ್ವಪಕ್ಷ, ತೀರ್ಪುಗಾರರು, ಮಾಧ್ಯಮದವರು ಎಲ್ಲರೂ ಬರುತ್ತಾರೆ. ಪರಿಣಾಮವೂ ಇರುತ್ತದೆ. ಪ್ರಚಾರವೂ ಇರುತ್ತದೆ. ಆದರೆ ಜಗಳದ ಸಾಧ್ಯತೆಯ ಬಗ್ಗೆ ಮುಂಚಿತವಾಗಿಯೇ ಪ್ರಕಟಿಸಿಬಿಟ್ಟರೆ ಎದುರು ಪಾರ್ಟಿ ತಲೆತಪ್ಪಿಸಿಕೊಂಡು ಹೋಗಿಬಿಡಬಹುದು. ಆದರೆ ಆವಾಗ ನೀವು ಅವನನ್ನು ಹುಡುಕಿಕೊಂಡು ಓಡಾಡುವ ರೀತಿ ಕೂಡ ಬೀದಿ ಜಗಳದ ಭಾಗವಾಗಬಲ್ಲದು. ಬೀದಿ ಜಗಳ ರಂಗೇರಬಹುದು. ಎದುರಾಳಿಯನ್ನು ಹುಡುಕಲು ಪತ್ತೇದಾರಿ ಕೆಲಸ ಕೂಡ ಮಾಡಬೇಕಾಗಬಹುದು.

1857ರಲ್ಲಿ ಸಿಪಾಯಿ ದಂಗೆ ನಡೆದಾಗ ಆ ದಂಗೆಯ ಸಾಕಷ್ಟು ಭಾಗ ಬೀದಿ ಜಗಳದ ಸ್ವರೂಪದ್ದೇ ಆಗಿತ್ತಂತೆ. ಸೈನಿಕರ ಮಾತು ಬಿಡಿ, ಪುಡಿ ಪುಂಡರು, ನಿರುದ್ಯೋಗಿಗಳು, ಸಣ್ಣಪುಟ್ಟ ಪುಢಾರಿಗಳು ಕೂಡ ಈ ಸಮಯ ಸಂದರ್ಭವನ್ನು ಉಪಯೋಗಿಸಿಕೊಂಡು ದಿಲ್ಲಿಯ ಎಷ್ಟೋ ಭಾಗಗಳಲ್ಲಿ ಬೀದಿ ಜಗಳಗಳನ್ನು ಹುಟ್ಟುಹಾಕಿ ಸಾಕಷ್ಟು ಆಸ್ತಿ, ಒಡವೆಗಳನ್ನು ಕಬಳಿಸಿದರಂತೆ. ಬ್ರಿಟಿಷರು ಹೆಚ್ಚಾಗಿ ಹೆದರಿದ್ದು ದಂಗೆಯ ಈ ಬೀದಿ ಜಗಳದ ಆವೃತ್ತಿಗಳಿಗಂತೆ. ಬಾಲಗಂಗಾಧರ ತಿಲಕರು ಲೋಕಮಾನ್ಯರು ಎಂಬುದನ್ನು ನಾನು ಕೂಡ ನಿಮ್ಮಂತೆ ಒಪ್ಪಿ ಗೌರವಿಸುತ್ತೇನೆ. 1907ರಲ್ಲಿ ನಡೆದ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ ಇವರ ಅನುಯಾಯಿಗಳು ನಡೆಸಿದ ಬೀದಿ ಜಗಳದಿಂದಲೇ ಅಂತೆ ರಾಜಕೀಯ ಸಾಹಿತ್ಯ ಸಮ್ಮೇಳನದಲ್ಲಿ ಬೀದಿ ಜಗಳದ ಪರಂಪರೆ ಶುರುವಾದದ್ದು.

ಬೀದಿ ಜಗಳಗಳು ನಡೆಯುವುದಕ್ಕೆ ಪ್ರಶಸ್ತವಾದ ಸ್ಥಾನಗಳು ಇರುತ್ತವೆಯೇ? ಹೌದು ಇರುತ್ತವೆ, ಖಂಡಿತವಾಗಿ. ಆದರೆ ಈ ಸ್ಥಾನಗಳಲ್ಲಿ ವೈವಿಧ್ಯವಿದೆ. ಪಂಚಾಯತಿ ಕಟ್ಟೆ ಮುಂದೆ, ಬಸ್ ಸ್ಟ್ಯಾಂಡಿನ ಸಣ್ಣ ಭಾಗ, ತೇರು ನಿಂತಿರುವ ಮುಂಭಾಗ, ಸೊಸೈಟಿ ಎದುರು, ಆಲದ ಮರದ ಕೆಳಗೆ, ಬೀದಿ ಕೊನೆಯಾಗುವ ಭಾಗ, ತರಕಾರಿ

ಅಂಗಡಿ ಮುಂದೆ, ಟ್ರಾಫಿಕ್ ಸಿಗ್ನಲ್ ಬಳಿ, ಜಮೀನ್ದಾರರ ಮನೆಯ ಅಂಗಳ, ಕಂಭದ ಮನೆಗಳ ತೊಟ್ಟಿ ಒಳಗೆ, ಇಸ್ಪೀಟ್ ಕಟ್ಟೆಯ ಕೆಳಗಡೆ, ಹೀಗೆ. ಆದರೆ ಬೀದಿ ಜಗಳ ತನ್ನ ಸ್ವಭಾವದಲ್ಲೇ ಚಲನಶೀಲವಾದ್ದರಿಂದ ಯಾವ ಕ್ಷಣದಲ್ಲಿ ಯಾವ ಕಡೆಯಾದರೂ ನಡೆಯಬಹುದು. ವೈಯಕ್ತಿಕವಾಗಿ ನನ್ನ ಒಲವಿರುವುದು ಪೆಟ್ಟಿ ಅಂಗಡಿ ಮುಂಭಾಗದಲ್ಲಿ, ಹುಡುಗಿಯರ ಕಾಲೇಜುಗಳ ಎದುರು ನಡೆಯುವ ಜಗಳಗಳಲ್ಲಿ. ನಿಮ್ಮ ಕಲ್ಪನೆ ಸರಿಯಾಗಿದೆ, ಏಕೆಂದರೆ ನಾನು ಬೀದಿ ಜಗಳಗಳನ್ನು ಕಾದಿರುವುದು ಈ ಸ್ಥಳಗಳಲ್ಲೇ! ನಾನು ಪ್ರತಿ ಊರಿಗೆ ಹೋದಾಗಲೂ ಉತ್ತರ ಭಾರತದ ಪ್ರಸಿದ್ಧ ನಗರಗಳಾದ ಲಕ್ನೋ, ಅಯೋಧ್ಯೆ, ಪ್ರಯಾಗ, ಕಲ್ಕತ್ತದಂತಹ ನಗರಗಳು, ದೆಲ್ಲಿಯ ಜಮ್ಮಾ ಮಸೀದಿ ಆವರಣ, ಇಲ್ಲೆಲ್ಲ ಬೀದಿ ಜಗಳಗಳು ನಡೆದ ಸ್ಥಳಗಳನ್ನು ತೋರಿಸಿ ಎಂದು ಸ್ನೇಹಿತರನ್ನು ಗೋಳು ಹೊಯ್ದುಕೊಳ್ಳುತ್ತೇನೆ. ಅಯೋಧ್ಯೆಗೆ ಹೋಗಿದ್ದಾಗ ಬಜಾರಿನಲ್ಲಿ ತೆಂಗಿನಕಾಯಿ ಅಂಗಡಿ ಮತ್ತು ಟೈಲರ್ ಅಂಗಡಿ ಹಾಗೂ ಸಲೂನು ಒಂದೇ ಕಟ್ಟಡದಲ್ಲಿದ್ದವು. ಆ ಕಟ್ಟಡದ ಮುಂದೆ ಕೂಡ ಒಂದು ಸಣ್ಣ ಮಾರಾಮಾರಿ ಇಪ್ಪತ್ತು ನಿಮಿಷ ನಡೆಯಿತು. ಭಾಷೆ ಅರ್ಥವಾಗದಿದ್ದರೂ ಕೂಗಾಟ, ಚೀರಾಟ, ಪಟ್ಟುಗಳು, ಆಂಗಿಕ ಭಾಷೆಯೆಲ್ಲ ನಮ್ಮ ಮಂಡ್ಯ ಜಿಲ್ಲೆಯ ಬೀದಿ ಜಗಳಗಳಂತೇ ಇದ್ದುದರಿಂದ ನನಗೆ ಕಳೆದುಹೋದ ಭಾವನೆ ಬರಲಿಲ್ಲ. ಕರಾಚಿಯಲ್ಲಿ ಕೂಡ ಪುರಾತನ ಗುಜರಿ ಅಂಗಡಿಗಳ ಮುಂದೆ ನಡೆಯುವ ಬೀದಿ ಜಗಳಗಳು ಪ್ರಸಿದ್ಧವಂತೆ. ಕಾಶ್ಮೀರದ ಪ್ರಸಿದ್ಧ ಉದ್ಯಾನವನಗಳಲ್ಲಿ, ಬಾಗ್ಗಳಲ್ಲಿ ಸಾಲು ಸಾಲು ಗುಲಾಬಿ ಹೂ ಗಿಡಗಳ ಎದುರಿಗೆ ಜನರು ಗಡ್ಡ ನೀವಿಕೊಂಡು ಜುಬ್ಬದ ತೋಳು ಮಡಿಚಿಕೊಂಡು ಬೀದಿ ಜಗಳ ಕಾಯವುದನ್ನು ನೋಡಿದ್ದು ಮರೆಯಲಾಗದ ನೆನಪುಗಳಲ್ಲಿ ಒಂದು.

ವಿದೇಶಗಳಿಗೆ ಹೋದಾಗಲೂ ಇಂತಹ ಪವಿತ್ರ ಸ್ಥಳಗಳನ್ನು ಹುಡುಕುವ ನನ್ನ ಬಯಕೆ ಕಂಡು ಕೆಲವರು ನಕ್ಕರು. ನ್ಯೂಜೆರ್ಸಿ, ವಾಷಿಂಗ್ಟನ್ ಹೆದ್ದಾರಿಯುದ್ದಕ್ಕೂ ಪೋಲೀಸರು ಮತ್ತು ವಾಹನ ಚಾಲಕರು ನಡೆಸುವ ಕೋಳಿ ಜಗಳಗಳು ಒಂದು ಹಂತದ ನಂತರ ಬೀದಿ ಜಗಳದ ಸ್ವರೂಪ ಪಡೆದವು. ನಿಯಂತ್ರಿತ ವೇಗದಲ್ಲಿ ಕಾರು ಓಡಿಸಬೇಕೆಂಬ ನಿಯಮದ ಬಗ್ಗೆ ಪೋಲೀಸರಿಗೂ, ಚಾಲಕರಿಗೂ ಮನದುಂಬಿದ ಕಣ್ಣು ಮುಚ್ಚಾಲೆಯಾಟ. ಯಾರಿಗೆ ಯಾರೂ ಕಡಿಮೆಯಿಲ್ಲ. ಒಬ್ಬರನ್ನು ಹಿಡಿಯಲು ಹೋದರೆ, ನಾಲ್ಕು ಜನ ತಪ್ಪಿಸಿಕೊಳ್ಳುತ್ತಿದ್ದರು. ತಪ್ಪಿಸಿಕೊಂಡವರದೇ ಒಂದು ಗುಂಪು. ಪೋಲೀಸರದು ಇನ್ನೊಂದು ಗುಂಪು.

ಇನ್ನೊಮ್ಮೆ ಜಗತ್ತಿನ ಸುಸಂಸ್ಕೃತ ನಗರಗಳಲ್ಲಿ ಒಂದಾದ ಹೇಗ್ ಪಟ್ಟಣ. ಅಂತರರಾಷ್ಟ್ರೀಯ ನ್ಯಾಯಾಲಯ ಇರುವ ನಗರ. ಅಲ್ಲಿಂದಾಚೆಗೆ ಮೂರು ಮೈಲಿ ದೂರದಲ್ಲಿ ಮಗಳ ಮನೆ. ಅಲ್ಲಿಯ ಜನ ನಾಗರಿಕರು, ಸಭ್ಯರು, ಶಾಂತಿಪ್ರಿಯರು, ಜೊತೆಗೆ ಕರೋನಾ ಲಾಕಡೌನ್ ಬೇರೆ. ನಾಗರಿಕರು ಹೊಸ ವರ್ಷದ ಸಂಭ್ರಮವನ್ನು ಬೀದಿಗೆ ಬಂದು ಆಚರಿಸಬಾರದೆಂಬ ಸರ್ಕಾರದ ಹುಕುಂ. ನಾಗರಿಕರು ಸೋಲುವರೇ? ನಾಗರಿಕರಿರಲಿ, ಪ್ರವಾಸಿಯಾದ ನಾನೇ ಒಂದು ರೈಲು ನಿಲ್ದಾಣದ ಹತ್ತಿರ ನಿಂತುಕೊಂಡೆ. ಸತ್ಯದರ್ಶನವಾಗುವ ಮುಂಚಿನ ಉತ್ಸುಕತೆ, ತವಕ ನನ್ನ ನರನಾಡಿಯಲ್ಲಿ ಹರಿದಾಡುತ್ತಿದೆ. ಪೋಲೀಸರು ಬಂದರು. ಗದರಿಸಿದರು. ಜನ ಕೂಡ ಚದುರಿದಂತೆ

ಕಂಡರು, ಮರೆಯಾದರು, ಮರೆಯಾದಂತೆ ಕಂಡರು. ಪೋಲೀಸರು ಹೋದರು. ಮತ್ತೆ ಜನರ ಗುಂಪು ಸೇರಿತು. ಪಟಾಕಿ ಹೊಡೆಯಿತು. ನೃತ್ಯ ನಡೆಯಿತು. ಅಗೋ ಬಂದರು ಮತ್ತೆ ಪೋಲೀಸರು. ಮತ್ತೆ ಗದರಿಸಿದರು. ಧ್ವನಿವರ್ಧಕದಲ್ಲಿ ಡಚ್ ಭಾಷೆಯಲ್ಲಿ ಬೈದಾಡಿದರು. ಜನರ ಗುಂಪು ಪೋಲೀಸರ ಕಡೆಗೆ ನುಗ್ಗಿದಂತೆ ಮಾಡಿ, ನೃತ್ಯ ಮಾಡಿ, ಪಟಾಕಿ ಹೊಡೆಯಿತು. ಪೋಲೀಸರು ನಕ್ಕಂತೆ ಕಂಡರು. ಮತ್ತೆ ಗದರಿಸಿದರು. ಗುಂಪು ಕೂಡ ಚದುರಿದಂತೆ ಕಂಡಿತು. ಈ ಬೀದಿ ಜಗಳ ಕಣ್ಣು ಮುಚ್ಚಾಲೆ ಮತ್ತು ತುಂಟಾಟದ ನೆಲೆಗಳಲ್ಲೇ ಬೀದಿ ಜಗಳವಾಗಿ ಪರಿವರ್ತನೆಗೊಂಡು, ಪರಿವರ್ತನೆಗೊಳ್ಳದೆ ನಡೆಯುತ್ತಲೇ ಹೋಯಿತು.

ಹೆಂಗಸರ ನಡುವಿನ ಬೀದಿ ಜಗಳಗಳನ್ನು ಕಂಡರೆ ನನಗೆ ತುಂಬಾ ಇಷ್ಟ. ಇದಕ್ಕೆ ಅವರು ಜಗಳ ಕಾಯುವ ವಿಶಿಷ್ಟ ರೀತಿಯೇ ಕಾರಣ. ನಲ್ಲಿ ನೀರಿಗಾಗಿ ಅವರು ಬೀದಿ ಜಗಳ ಕಾಯುವುದನ್ನು, ರೇಷನ್ ಅಂಗಡಿ ಮುಂದೆ ಪರಸ್ಪರ ಬಡಿದಾಡುವುದನ್ನು ನಾವು ಗೌರವಿಸಬೇಕು. ಸರಾಯಿ ಅಂಗಡಿಗಳ ಮುಂದೆ ಗಂಡಸ್ತನದಿಂದ ನಿಂತು ಬೀದಿ ಜಗಳ ಕಾದು, ಮಾಲೀಕರ ಮಾನವನ್ನು ಹರಾಜಿಗೆ ಹಾಕಿ ಗಂಡಂದಿರನ್ನು ಎಲ್ಲರೆದುರಿಗೆ ದರದರ ಎಳೆದುಕೊಂಡು ಹೋದವರನ್ನು ನೋಡಿದ್ದೇನೆ. ಗಂಡಂದಿರು ಇಟ್ಟುಕೊಂಡವಳ ಮನೆಯಲ್ಲಿ ಸುಖದಿಂದ ನಲುಗುವಾಗ, ಮಕ್ಕಳ ಸಮೇತ ಅಲ್ಲಿಗೇ ಹೋಗಿ ಇಬ್ಬರನ್ನೂ ದರದರನೆ ಈಚೆಗೆ ಎಳೆದುಕೊಂಡು ಬಂದು ಬೀದಿಯಲ್ಲಿ ಜಗಳ ಕಾದು ನ್ಯಾಯ ಪಡೆದುಕೊಂಡದ್ದನ್ನು ನೋಡಿದ್ದೇನೆ. ಅತ್ತಿಗೆ–ನಾದಿನಿಯರು ಒಡವೆಗಾಗಿ ಮುಂದೆಲೆ ಹಿಡಿದುಕೊಂಡು ಬೀದಿಯಲ್ಲಿ ಜಗಳವನ್ನಲ್ಲ ರಂಪ ಮಾಡುವುದನ್ನು ನೋಡಿದ್ದೇನೆ.

ಒಬ್ಬ ಭ್ರಷ್ಟ ದುರಹಂಕಾರಿ ಸ್ತ್ರೀ ವ್ಯಸನಿ ಅಧಿಕಾರಿ ಇದ್ದ. ನಮ್ಮ ಕಮೀಷನರ್ಗೆ ಆಪ್ತ ಸಹಾಯಕ ಅವನು. ಎರಡನೆ ಸಂಬಂಧವೂ ಇತ್ತು ಅವನಿಗೆ. ಮೊದಲನೆ ಹೆಂಡತಿ ಪದೇ ಪದೇ ಬಂದು ಜಗಳ ಕಾಯುತ್ತಿದ್ದಳು. ಸರ್ಕಾರಿ ಸಂಬಳದಲ್ಲಾಗಲೀ, ಲಂಚದ ಮೊಬಲಿಗನಲ್ಲಾಗಲೀ ಒಂದೇ ಒಂದೇ ಕಾಸು ಕೂಡ ಎರಡನೆ ಹೆಂಡತಿಗೆ ಕೊಡಬಾರದೆಂದು ರಂಪ ಮಾಡುತ್ತಿದ್ದಳು. ಭ್ರಷ್ಟ ಅಧಿಕಾರಿಗೆ ಒಂದು ಅಭ್ಯಾಸ ಇತ್ತು. ಕೆಲಸ ಮಾಡಿಸಿಕೊಳ್ಳಲು ಬಂದ ತೆರಿಗೆದಾರರಿಗೆ ಕೆಲಸವಾದ ಮೇಲೆ ಒಂದು ಚೀಟಿ ಬರೆದುಕೊಡುತ್ತಿದ್ದ. ಆ ಚೀಟಿಯಲ್ಲಿ ಲಂಚದ ಮೊಬಲಗನ್ನು ನಮೂದಿಸಲಾಗುತ್ತಿತ್ತು. ಚೀಟಿ ಸಮೇತ ತೆರಿಗೆದಾರರು ಅಧಿಕಾರಿಯ ಸಿಬ್ಬಂದಿಯನ್ನು ಭೇಟಿ ಮಾಡಿ ಕಾಣಿಕೆ ಸಲ್ಲಿಸಬೇಕಾಗುತ್ತಿತ್ತು.

ಮನೆಯಲ್ಲಿ ಏನು ರಾಮಾಯಣವಾಗಿತ್ತೋ ಏನೋ, ಹೆಂಡತಿ ಒಂದು ಮಟ ಮಟ ಮಧ್ಯಾಹ್ನ ಚಂಡಿಯ ಅವತಾರದಲ್ಲಿ ಕಛೇರಿಗೆ ನುಗ್ಗಿದಳು. ಮಾರಾಮಾರಿ ಜಗಳ. ಎರಡನೆ ಸಂಬಂಧದವಳನ್ನು ಹಂಗಿಸಿದಳು. ಈವತ್ತು ಎಲ್ಲ ಒಂದು ನಿಗದಿಗೆ ಬರಲೇಬೇಕು, ಇಲ್ಲದೇ ಹೋದರೆ ನಿನ್ನನ್ನು ಪೋಲೀಸಿನವರಿಗೆ, ಸಿ.ಬಿ.ಐ.ನವರಿಗೆ ನಾನೇ ಹಿಡಿದುಕೊಡುತ್ತೇನೆ ಎಂದು ಬೆದರಿಕೆ ಹಾಕಿದಳು. ಒಂದು ಹಂತದ ನಂತರ ಕಮೀಷನರ್ ರೂಮಿಗೆ ನುಗ್ಗಿದಳು. ಅಧಿಕಾರಿ ತೆರಿಗೆದಾರರಿಗೆ ಬರೆದುಕೊಡುತ್ತಿದ್ದ ಚೀಟಿಗಳ ಕಟ್ಟನ್ನು ಅವರ ಮುಂದೆ ಎಸೆದಳು. ನಿನ್ನ ಆಪ್ತ ಸಹಾಯಕನನ್ನು ನಿಯಂತ್ರಿಸಲಾಗದ ನೀನು ಯಾವ ಸೀಮೆಯ ಮೇಲಧಿಕಾರಿ ಎಂದು ಚೀರಾಡಿದಳು.

ಸಾಹೇಬರಿಗೂ ರೇಗಿತು. ಕೂಗಾಡಲು ಪ್ರಾರಂಭಿಸಿದರು. ನಮಗೆಲ್ಲ ಮನರಂಜನೆ. ಇನ್ನೂ ಮುಂದಿನ ಹಂತದಲ್ಲಿ ಅಧಿಕಾರಿಯ ಧರ್ಮಪತ್ನಿ ಕಮೀಷನರ್ ಸಾಹೇಬರಿಗೆ ಅವರ ಮನೆಗೆಲಸದವಳ ಜೊತೆ ಇರುವ ಸಂಬಂಧವನ್ನು ಪ್ರಸ್ತಾಪಿಸಿ, ಅದನ್ನು ಪ್ರಸ್ತಾಪಿಸುವಾಗ ಜಡೆಯ ಕೂದಲನ್ನೆಲ್ಲ ಬಿಚ್ಚಿ ಹರಡಿಕೊಂಡು ಉಗ್ರರೂಪ ತಾಳಿದಳು. ಕಂತೆಗೆ ತಕ್ಕ ಬೊಂತೆ ಎನ್ನುವ ರೀತಿಯಲ್ಲಿ ನಿನ್ನ ಸಹಾಯಕನೂ ನಿನ್ನ ಹಾದಿಯನ್ನೇ ಹಿಡಿದಿದ್ದಾನೆ ಎಂದು ಹಂಗಿಸಿದಳು. ಸಾಹೇಬರಿಗೆ ರೋಸಿಹೋಗಿ ರೂಲುದೊಣ್ಣೆ ತೆಗೆದುಕೊಂಡು ಅವಳನ್ನು ಹೊಡೆಯಲು ಮುನ್ನುಗ್ಗಿದರು.

ಬೀದಿ ಜಗಳಗಳನ್ನು ಲಘುವಾಗಿ ನೋಡಬಾರದು. ಈ ಜಗಳಗಳಿಂದ ಸಾಮಾಜಿಕ ಶಾಂತಿ, ಸ್ಥಿರತೆ ಕೂಡ ಕಾಪಾಡಲ್ಪಡುತ್ತದೆ. ಬೀದಿ ಜಗಳಗಳು ಮನೆಯೊಳಗೆ, ಸ್ನೇಹಿತರ ನಡುವೆ, ಕುಟುಂಬಗಳ ನಡುವೆ, ನಿರಂತರವಾಗಿ ನಡೆಯುತ್ತಲೇ ಇರುವುದರಿಂದ ಜೀವನದಲ್ಲಿ ತುಂಬಿರುವ ಹಿಂಸೆ, ಕರಬುವಿಕೆ, ಸಿಟ್ಟು ಎಲ್ಲವೂ ಆಗಾಗ್ಗೆ ಹೊರಬರುತ್ತಿರುತ್ತದೆ. ಬೀದಿ ಜಗಳಗಳೇ ಇಲ್ಲದೆ ಹೋದರೆ, ಎಲ್ಲವೂ ಒಂದು ದಿನ ಒಟ್ಟಿಗೇ ಭುಗಿಲೆದ್ದು ಸಮಾಜದಲ್ಲಿ ಕ್ಷೋಭೆ, ಕ್ರಾಂತಿ ಉಂಟಾಗುತ್ತದೆ. ಈ ಕಾರಣಕ್ಕಾಗಿಯಾದರೂ ನಾವೆಲ್ಲರೂ ಆಗಾಗ್ಗೆ ಬೀದಿ ಜಗಳಗಳಲ್ಲಿ ತೊಡಗುವುದು ಒಳ್ಳೆಯದು.

■



**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



ಸಿನಿಮಾ ಮ್ಯಾನೇಜರ್ :
**ಇವತ್ತು ಕಲೆಕ್ಷನ್ ವಾಸಿ.!**

# ಗುಂಡ್ಯಾನ ಪಾದುಕಾ ಫಜೀತೀ..

**●ಸಿ.ಎ.ವಿಲಾಸ ನಾ ಹುದ್ದಾರ**

ರವಿವಾರದ ಮುಂಜಾನೆಯ ಶಾಂತ ವಾತಾವರಣ. ಬಳವಂತ ಉರ್ಫ ಬಾಳ್ಯಾ ಹೆಂಡ್ತಿಕೊಟ್ಟ ಬ್ರೆಕ್‌ಫಾಸ್ಟ ಮಾಡಿ ಶಾಂತತೆಯಿಂದ ಪೇಪರ್ ಒದ್ಕೋತ ಕೂತಿದ್ದಾ. ಮನೀ ಮುಂದ ಗುಂಡೂರಾವ್ ಉರ್ಫ ಗುಂಡ್ಯಾನ ಕಾರ್ ಬಂದ ನಿಂತು. ಬಾಳ್ಯಾ ಇಂವ್ಯಾಕಪಾ ಇಷ್ಟೊತ್ತಿನಾಗ ವಕ್ರಿಸಿದ ಅಂತ ಮನಸ್ಸಿನಾಗ ಅನ್ಕೋತಿರಬಾಕಾದ್ರ, " ಏ ಬಾಳ್ಯಾ...." ಒದರಿಕೋತ ಬಿರುಗಾಳಿ ಹಂಗ ಒಳಗ ಬಂದಾ. ಆ ಅವಾಜಿಗೆ ಬಾಳ್ಯಾನ ವಿದ್ಯಾ ಹೊರಗ ಬಂದು, " ಬರ್ರೀ ಭಾವಜೀ...ನಿಮ್ಮ ಕರೋನಾ ಡಯಟ್ ಮುಗೀತಿಲ್ಲೋ?"

"ವೈನೀ, ಕರೋನಾ ಮುಗದ್ರೂ ನನ್ನ ಹೇಂಣ್ತಿ ಡಯಟ್ ಮಾತ್ರ ಮುಂದುವರೆಸ್ಯಾಳ.....ಏ ಬಾಳ್ಯಾ ಏಳಲೇ...ಏನ್ ನೋಡ್ಕೋತಕೂತಿ...ಸ್ವಲ್ಪ ಹೊರಗ ಹೋಗಿ ಬರೋಣು ನಡೀ..."

"ಒಂದು ಮಿನೀಟ್..ಪ್ಯಾಂಟ್, ಶರ್ಟ ಹಾಕ್ಕೊಂಡರೇ ಬರ್ತೀನೀ..."

"ಏನರೇ ಒಂದ ಹಾಕ್ಕೊಂಡ ಬಾ ಲಗೂನ..." ಅನ್ಕೋತ ಕಾರಿನಾಗ ಹೋಗಿ ಕೂತು ಸ್ಟಾರ್ಟ್ ಮಾಡಿದಾ.

ಬಾಳ್ಯಾ ರೆಡಿ ಆಗಿ ಕಾರನ್ಯಾಗ ಕೂಡೋತ್ಲೆ ಏನೂ ಮಾತಾಡದ ವೇಗವಾಗಿ ತೊಗೊಂಡ ಹೋವಿ ದೇವಿ ಪ್ರಸಾದ ಹೊಟೆಲ್ ಮುಂದೆ ನಿಲ್ಲಿಸಿದಾ. ಅಂದ್ರ ಗುಂಡ್ಯಾಗ ಸಿಕ್ಕಾಪಟ್ಟೆ ಹಸೀವೀ ಆಗೇದ. ಬಾಳ್ಯಾ ಸುಮ್ನ ಅವನ ಹಿಂದ ಹೋಗಿ ಅಂವಾ ಹೊಟ್ಟಿತುಂಬ ತಿನಬೇಕಾದ್ರ ಒಂದ ಚಹಾ ಕುಡದಾ. ಹೊಟ್ಟಿತುಂಬ ತಿಂದು ಕಾರಿನೊಳಗ ಬಂದ ಕೂತ ಗುಂಡ್ಯಾನ ಮಾರೀ ಮ್ಯಾಲೆ ಪ್ರಸನ್ನತೆ ಬಂತು. ಅಷ್ಟರೊಳಗ ಬಾಳ್ಯಾನ ಲಕ್ಷ್ಯ ಹಿಂದಿನ ಸೀಟಿನ ಮ್ಯಾಲೆಇದ್ದ ಶೂ ಡಬ್ಬಿ ಮ್ಯಾಲೆ ಹೋತು. ಅದನ್ನ ತೊಗೊಂಡು ತಗೀತಾನ ಅದರೊಳಗ ಒಂದ ಶೂ ಅದ. "ಏನ್ಲೇ ಗುಂಡ್ಯಾ, ಒಂದ ಶೂ ಅದ, ಇನ್ನೊಂದ ಎಲ್ಲಿಲೇ...."

" ಅದನ್ನ ತರ್ಲಿಕ್ಕೇ ಈಗ ಹೋಂಟೀವಿ...ಸ್ವಲ್ಪ ತಡಕೋಎಲ್ಲಾ ಹೇಳ್ತೇನಿ..." ಕಾರ್ ಮುಖ್ಯರಸ್ತೆಕ್ಕ ತೊಗೊಂಡ ಬಂದ ಮುಂದುವರೆಸಿದ," ನಿನ್ನೆ ಸಂಜೀಕ ನಾನು ನನ್ನ ಅರ್ಧಾಂಗಿ ಮಾರ್ಕೆಟಿಗೆ ಹೋಗಿದ್ವಪಾ. ಎಲ್ಲಾ ಮಾರ್ಕೆಟಿಂಗ್ ಮುಗದು ನನ್ನ ಕಿಸೆ ಖಾಲೀ ಆಗ್ತ ಬಂದ್ಹಂಗ ನನ್ನ ಧರ್ಮಪತಿ ಕಣ್ಣಿಗೆ ಶೂ ಅಂಗಡಿ ಕಾಣಿಸ್ತು. ನಿಮ್ಮ ಶೂ ಹಳೇವ ಆಗ್ಯಾವ, ಹೊಸಾವ ತೊಗೋಳೋಣು ಅಂತ, ನಾ ಎಷ್ಟ ತಡದ್ರೂ, ಅನ್ಕೋತ ಅಂಗಡಿ ಹೊಕ್ಕ ಬಿಟ್ಲು..."

"ನೀ ಯಾಕ ತಡದೀ...ನಿನಗೂ ಶೂ ಹೊಸಾವ ತೊಗೋಬೇಕು ಅಂತ ಅಂತಿದ್ದಿ..." ಬಾಳ್ಯಾನ ಪ್ರಶ್ನೆ.

" ಸ್ವಲ್ಪ ಸಮಾಧಾನದಿಂದ ನಾ ಹೇಳೋದು ಪೂರ್ಣ ಕೇಳಲೇ.....ಏಳರೊಳಗ ಹುಟ್ಟೀ ಏನ ಮಗನ....ಅಂಗಡಿ ಒಳಗ ಹೋಗೋದಕ್ಕ ಈ ಶೂ ಆಕೀ ಕಣ್ಣಿಗೆ ಬಿತ್ತೇನಪಾ...ನೋಡ್ಲಿಕ್ಕೂ ಛಂದ ಕಾಣಸ್ತಾವ...ನನಗೂ ಭಾಳ ಲೈಕ್‌ಆದವು. ಇಂಥಾವು

ಒಂದ ಜೋಡಿ ಇತ್ತು.. ಏನೋ ಸ್ಪೇಷಲ್ ಶೂ ಅಂತ...ನಾ ರೇಟ್ ನೋಡಿದೆ ರೂ.3000 ಇತ್ತು. .ಆದ್ರ ಬೇರೇಎಲ್ಲಾ ಮಾರ್ಕೆಟಿಂಗ್ ಮಾಡಿ ನನ್ನಕಡೇ ಒಳದದ್ದು ಬರೇ ರೂ.2000. ಅದಕ್ಕಇವತ್ತ ಬ್ಯಾಡಾಅಂತತಡೀಲಿಕ್ಕೆ ಪ್ರಯತ್ನ ಮಾಡಿದ್ದು. ಇದನ್ನ ಧರ್ಮಪತ್ನಿಗೆ ಹೇಳೀದ್ರ ಬಯ್ತಿದ್ಲು...ಯಾಕಂದ್ರ ಯಾವಾಗಲೂ ಮಾರ್ಕೆಟಿಂಗ್ ಹೋಗಬೇಕಾದ್ರ ಮನ್ಯಾಗಿನಎಲ್ಲಾರೊಕ್ಕಾತೊಗೊಂಡ ಬಾ ಅಂತ ಹೇಳ್ತಿದ್ಲು.. ನಾ ಮರತಿದ್ದೆ. ಈ ಪರಿಸ್ಥಿತಿಯಿಂದ ಹೇಗಪ್ಪಾ ಬಚಾವ ಆಗೋದು ಅಂತ ಸ್ವಲ್ಪ ವಿಚಾರ ಮಾಡಿದೆ. ಒಂದಐಡಿಯಾ ಹೊಳೀತು. ಅಲ್ಲಿ ಸೇಲ್ಸಮನ್‌ಗ ಹೇಳಿದೆ ಈಗ ರೂ.2000 ಕೊಡ್ತೇನಿ ನೀ ನನಗ ಒಂದ ಡಬ್ಬಿಯೊಳಗ ಒಂದ ಶೂ ಹಾಕಿ ಕೊಡು...ನಾಳೆ ಮುಂಜಾನೆ ಬಂದು ಬಾಕಿ ರೂ.1000 ಕೊಟ್ಟು ಇನ್ನೊಂದು ಶೂ ತೊಗೊಂಡು ಹೋಗ್ತೇನಿ..ಅಂವಾ ಸ್ವಲ್ಪ ಹಿಂದೆ ಮುಂದೆ ನೋಡಿದಾ... ಅಂವಾ ನನ್ನ ಪರಿಸ್ಥಿತಿ ಅರ್ಥ ಮಾಡಿಕೊಂಡ.. ಅಲ್ಲೇ ಅಡ್ಯಾಡ್ತಿದ್ದ ಮಾಲೀಕನಿಗೆ ಹೇಳಿ ರೂ 2000 ಇಸ್ಕೊಂಡ ಶೂ ಡಬ್ಬಿಯೊಳಗ ಒಂದ ಶೂ ಹಾಕಿಕೊಟ್ಟ. ನನ್ನ ಹೇಣ್ತಿ ಲೇಡೀಜ್ ಚಪ್ಪಲ ನೋಡೋದರೊಳಗ ಮಗ್ನಆಗಿದ್ಲು...ಪುಣ್ಯಾಕ್ ಆಕೀಗೆ ಯಾವದೂ ಸೇರಿ ಬರಲಿಲ್ಲಾ..ಮನೀಗೆ ಹೋದಾಗ ಮರತ್ಹಂಗ ಮಾಡಿ ಶೂ ಡಬ್ಬಿಕಾರ್‍ನ್ಯಾಗಇಟ್ಟೆ. ಹೊಸಾ ಶೂ ಯಾಕ ಹಾಕ್ಕೊಂಡಿಲ್ಲಾ ಅಂತ ಕೇಳ್ತಾಳಂತ ಮುಂಜಾನೆ ವಾಕಿಂಗೂ ಹೋಗ್ಲಿಲ್ಲಾ. ನನ್ನ ಪುಣ್ಯಾಕತನ್ನತಮ್ಮನ ಮನೀಗೆ ಹೋಗಿ ಬರ್ತೇನಿ ಅಂತ ಹೋದ್ಲು. ಆಕೀ ಬರೋದರೊಳಗ ಇನ್ನೊಂದು ಶೂ ತೊಗೊಂಡ ಹೋಗಿ ಬಚಾವ ಆಗಬೇಕು."

ಇಬ್ಬರೂ ಶೂ ಅಂಗಡೀಗೆ ಹೋದ್ರು. ಸೇಲ್ಸಮನ್ ಗುಂಡ್ಯಾನ ನೋಡಿ, "ಯಾಕ್ರೀ ಸರ್, ಮತ್ತ ಬಂದ್ರಿ?".

ಗುಂಡ್ಯಾ ಘಾಬರೀಲೇ ಕೇಳಿದ, "ಏ ಮಹಾರಾಯ, ಇನ್ನೊಂದು ಶೂ ತೊಗೊಂಡ ಹೋಗ್ಲಿಕ್ಕೆ ಬಂದೇನಿ, ತೊಗೊ ಇದು ರೂ. 1000, ಕೊಡು ಇನ್ನೊಂದು ಶೂ...".

"ಎಲ್ಲಿಂದ ಕೊಡ್ಲೀರೀ ಸರ್, ನಿಮ್ಮ ಮನೀಯವರು ಆಗಲೇ ಬಂದು ರೂ.1000 ಕೊಟ್ಟು ತೊಗೊಂಡ ಹೋದ್ರು...".

ಗುಂಡ್ಯಾನ ಮಾರೀ ನೋಡ್ಬೇಕ...ಇಂಗು ತಿಂದ ಮಂಗನ್ಹಂಗ ಆತು.

"ಘಾತ ಆತ್ಲೇ ಬಾಳ್ಯಾ...ಇನ್ನ ಎಷ್ಟ ದಿವಸ, ಯಾವದ್ಯಾವದಕ್ಕ ಉಪವಾಸ ಬೀಳಸ್ತಾಳೋ.....ಏನ ಮಾಡೋದ್ಲೇ ಬಾಳ್ಯಾ...".

ಬಾಳ್ಯಾ ಏನ ಹೇಳ್ತಾನ.... " ಏನ್ ವಾಡೋದು, ನಿನ್ನ ಕರ್ಮ ಅನುಭೋಗಿಸು....".

ಅಂಗಡಿಯಿಂದ ಹೊರಗ ಬರಬೇಕಾದ್ರ ಬಾಳ್ಯಾ ಆ ಸೇಲ್ಸಮನ್ ಕಡೆ ದೃಷ್ಟಿ ಹಾಕಿದ್ರ ಅಲ್ಲೆ ತುಂಟ ನಗೆರಾರಾಜಿಸುತ್ತಿತ್ತು.

( ನನ್ನ ಮಿತ್ರರಾದ ಬಿ.ಕೆ.ಜಯಪ್ಪಾ ಹೇಳಿದ ಘಟನೆ ಆಧಾರಿತ)

■

# ಪದಕುಲುಮೆ

**● ಎಸ್‌ಎನ್ ಗಣನಾಥ**

**ಲೀಕೋಪಕಾರಿ** :ಆಯುಕಟ್ಟಿನ ಸ್ಥಳದಲ್ಲಿ ಇದ್ದುಕೊಂಡು ಜನರಿಗೆ ಅನುಕೂಲವಾಗುವ ವಿಷಯಗಳನ್ನು ಗುಪ್ತವಾಗಿ ಹಂಚುವವ ಉದಾ : ಜೂಲಿಯಅಸಾಂಜ್

**ಗಂಡಬೇರುಂಡ** : ಮೂಲಿಕೆಗಳನ್ನು ತಿಂದ ಪತಿ

**ಎತ್ತಂಗಡಿ** : ಹೋರಿಗಳನ್ನು ಮಾರುವ ಸ್ಥಳ

**ಧ್ಯಾನತರಗತಿ** : ವರ್ಕ್ ಫ್ರಂಮ್ ಓಂ

**ಪ್ರತಿವ್ರತೆ** : ಒಂದನ್ನೂ ಬಿಡದೆ ಎಲ್ಲಾ ವ್ರತಗಳನ್ನು ಮಾಡುವ ಸಾಧ್ವಿ

**ಅಂದಾನುಕರಣೆ** : ಸುಂದರಿಯರನ್ನು ನೋಡಿ ಅವರಂತೆಯೇ ವರ್ತಿಸುವವರು

**ಹಭಿಪ್ರಾಯ** : ಪತಿಯ ಅನಿಸಿಕೆ

**ಸೋಲಂಕಿ** : ಗೆಲ್ಲಲು ಸಾಕಷ್ಟು ಅಂಕಗಳು ಸಿಕ್ಕದೆ ನೊಂದ ವ್ಯಕ್ತಿ

**ಬಾಲಪರಾದಿ** : ಕ್ರಿಕೆಟ್ನಲ್ಲಿ ಚಂಡನ್ನು ವಿರೂಪಗೊಳಿಸಿ ಸಿಕ್ಕಿಕೊಂಡ ವ್ಯಕ್ತಿ

**ಹಲೋಪತಿ** : ಟೆಲೆ ಮೆಡಿಸಿನ್

**ಭೂಕಂಪ** : ಹುಬ್ಬು ಹಾರಿಸುವ ಪ್ರಕ್ರಿಯೆ

**ಕ್ರಿಮಿ–ನಲ್** : ವೈರಸ್ ಫ್ರೀ

**ಚಟ್ಟೋಪಾಧ್ಯಾಯ** : ಅಂತ್ಯಕರ್ಮಗಳನ್ನು ಕಲಿಸುವ ವ್ಯಕ್ತಿ

ವೆಲ್ ರೆಡ್ : ಬಾವಿಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವವ

**ಆಟಿಸಂ** : ಎಲ್ಲವನ್ನು ಕ್ರೀಡೆಯ ಮೂಲಕವೇ ನೋಡುವ ದೃಷ್ಟಿ

**ಹೆಗಲುದರೋಡೆ:** ಭುಜದ ಮೇಲೆ ಹೊತ್ತುಕೊಂಡಿದ್ದ ಲಗೇಜನ್ನು ಕಿತ್ತುಕೊಂಡು ಹೋಗುವುದು

**ಡಯಟಿಂಗ್‌ಫಾರ್ಡುಮ್‌ಮೀಸ್ :** ತೂಕ ಇಳಿಸುವ ಕುರಿತಾಗಿ ಮಹಿಳೆಯರಿಗಾಗಿಯೇ ಇರುವ ಪುಸ್ತಕ.

**ಫೀಲಿಂಗ್ ಲೋನ್ಲೀ :** ತುಂಬ ಹೆಚ್ಚು ಇ.ಎಮ್.ಐ.ಗಳನ್ನು ಕಟ್ಟುತ್ತಿರುವ ವ್ಯಕ್ತಿ ■

# ಬಕಾಸುರನ ಮರಿಮಕ್ಕಳು

● **ನಾಗರತ್ನ ಸಾಲಗಾಮೆ**

ಕುರುಡ ಧೃತರಾಷ್ಟ್ರ ಪಾಂಡವರ ಪ್ರಗತಿಗೆ ಮತ್ಸರವನ್ನು ತಾಳಿ ಅರಗಿನ ಮನೆಯಲ್ಲಿ ಸುಡಿಸಲು ಯತ್ನಿಸಿದ್ದು ತಿಳಿದಿದೆ. ಪಾಂಡವರು ಅಲ್ಲಿಂದ ಹೇಗೋ ಪಾರಾಗಿ ಏಕಚಕ್ರನಗರಕ್ಕೆ ಬಂದು ಭಿಕ್ಷೆ ಬೇಡಿ ತಂದದ್ದನ್ನು ಅವರಮ್ಮನಿಗೆ ಕೊಟ್ಟರೆ 'ಅರ್ಧಪಾಲು ವೃಕೋದರಂಗೆ'. ಆದರೆ ವೃಕೋದರನಿಗೋ ಅದು ಏನೇನೂ ಸಾಲದೆ ಸದಾ ಕಾಲ ಅವನಿಗೆ ಅರೆಹೊಟ್ಟೆಯೇ ಆಗಿದ್ದಾಗ ಬಕಾಸುರನಿಗಾಗಿ ಕಳಿಸಿದ್ದ ರಾಶಿ ಆಹಾರವನ್ನು ತಿಂದನೆಂದರೆ ಸೋಜಿಗಪಡಲೇನಿದೆ. ಈ ನಮ್ಮ ಕತೆ ಕೇಳಿ.

ನಮ್ಮ ತಂದೆಗೆ ಹಾಸನದಿಂದ ವರ್ಗವಾಗಿ ನಾವು ಹರಿಹರಕ್ಕೆ ಬಂದಮೇಲೆ ಅಲ್ಲಿಯ ಜೋಳದ ರೊಟ್ಟಿ, ನಮ್ಮನ್ನು ಬಹಳ ಆಕರ್ಷಿಸಿತು. ಬಕ್ರಿ ಜತೆಗೆ ತುಂಬ್ಗಾಯಿ, ಗುರೆಳ್ಳು ಚಟ್ನಿಪುಡಿ, ಕಾಳುಪಲ್ಯ ಜೊತೆಗೆ ತಾಜಾಮೆಂತ್ಯದ ಸೊಪ್ಪು, ಮೂಲಂಗಿ ಸೊಪ್ಪು ಹೆಸ್ರುಬೇಳೆ ಕೋಸಂಬ್ರಿ, ಹಸಿ ಮೂಲಂಗಿ, ಈರುಳ್ಳಿ, ಸೌತೆಕಾಯಿ, ಗಟ್ಟಿ ಮೊಸರು ಇವನ್ನು ಸ್ನೇಹಿತರ ಮನೇಲಿ ಮೊದಲಿಗೆ ತಿಂದು ಆಹಾ! ಅದರ ರುಚಿಗೆ ಮಾರು ಹೋಗಿದ್ದೆ. ಆದ್ರೇನು ರೊಟ್ಟಿ ನಮ್ಮನ್ನ ಬಲವಾಗಿ ತಟ್ಟಲಿಲ್ಲ. ಯಾಕಪ್ಪಾಂದ್ರೆ ಭಕ್ರಿ ಬಡಿಯೋದನ್ನ ಕಲಿಯಲು ಸಾಧ್ಯವೇ ಆಗಲಿಲ್ಲ. ಈಗ್ಲೂ ಜೋಳದ ರೊಟ್ಟಿ ಅಂದ್ರೆ ಬಾಯಲ್ಲಿ ನೀರ್ ಬರುತ್ತೆ ಆದ್ರೆ ಮಾಡಿ ತಿಂದು ತೃಪ್ತಿಪಡುವಷ್ಟು ರೊಟ್ಟಿ ಬಡಿಯುವುದನ್ನು ಕರಗತ ಮಾಡಿಕೊಳ್ಳೋಕೆ ಆಗಿಯೇ ಇಲ್ಲ.

ಇನ್ನು ಚಪಾತಿ ಸಹ ಆಗಲೋ ಈಗಲೋ. ಅಷ್ಟಕ್ಕಷ್ಟೆ. ಯಾಕೇಂದ್ರೆ ನಾವು ಅನ್ನದ ನಾಡಿನಿಂದ ಬಂದವರು. ನಮ್ಮದು ಆ *ಅನ್ನಗತಃ ಪ್ರಾಣ*

ಹರಿಹರದಿಂದ ದಾವಣಗೆರೆ ಕಾಲೇಜಿಗೆ ಓಡಾಡುತ್ತಾ ಬಿ ಎಸ್ ಸಿ ಮುಗಿಸಿ ಕಿರ್ಲೋಸ್ಕರ್ ಇಂಗ್ಲೀಷ್ ಮೀಡಿಯಂ ಸ್ಕೂಲ್ನಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿ ಎರಡು ವರ್ಷ ಆಗಿತ್ತು. ನಮ್ಮಕ್ಕ ವಿಜಯಲಕ್ಷ್ಮಿ ಕನ್ನಡ ಮೀಡಿಯಮ್ನಲ್ಲಿ ನನಗಿಂತ ಮೊದಲೇ ಟೀಚರ್ ಆಗಿದ್ಲು.

ನಮ್ಮಕ್ಕನ ಸಹೋದ್ಯೋಗಿಗಳೆಲ್ಲ ಸೇರಿ ಬಿಜಾಪುರ ಬಾದಾಮಿ ಐಹೊಳೆ ಪಟ್ಟದಕಲ್ಲು ಆ ಕಡೆ ಒಂದು ಸಲ ಪ್ರವಾಸದ ಯೋಜನೆ ಹಾಕಿದರು. "ನೀವೂ ಬನ್ನಿ ರತ್ನ ಹಾಡು ಗೀಡು ಹೇಳ್ತಾ ಪ್ರಯಾಣ ಮಾಡೋಕೆ ಚೆನ್ನಾಗಿರುತ್ತೆ" ಎಂದು ಕರೆದರು. ಸರಿ. ನಾನು ನಮ್ಮಕ್ಕ ವಿಜಯಾ, ಇರೆಗಾರ್ ಮೇಷ್ಟ್ರು ಕೇಶವಮೂರ್ತಿ, ಶ್ರೀಪಾದ ಭಟ್ರು, ಸಾವಿತ್ರಿ ಮೇಡಮ್, ಚಂಪಾವತಿ ಬಾಪಟ್ ಹೀಗೆ ಒಂದು ಹತ್ತುಜನರ ಗುಂಪು ಪ್ರವಾಸ ಸನ್ನದ್ಧರಾಗಿ ಟ್ರೈನು ಹತ್ತಿದೆವು. ರಾತ್ರಿ ಪವಡಿಸಿ ಬೆಳಿಗ್ಗೆ ಎದ್ದು ಎಲ್ಲರೂ ಕಾಫಿ ಟೀ ಕುಡಿದರು. ನನ್ನದು ಕಾಫಿ ಟೀ ಕುಡಿಯದ ಸನ್ಯಾಸ. ತಂದಿದ್ದ ತಟ್ಟೆಗಳಿಗೆ ಮೂರು ಮೂರು ಚಪಾತಿ ಚಟ್ನಿಪುಡಿ ಹಾಕಿಕೊಂಡು ತಿಂದು ನಾಶ್ತಾ ಮುಗಿಸಿ ತಟ್ಟೆ ತೊಳೆದುಕೊಂಡು ಬಂದೆವು.

ಹರಟೆ ಹೊಡೆದು ಸಾಕಾಗಿ ಮೊದಲ ದಿನದ ಉಮೇದು ಬಹಳ ಜೋರಾಗಿದ್ದುದರಿಂದ, ನಮ್ಮ ಖಂಜಿರ ತಾಳ ಗೆಜ್ಜೆ ಎಲ್ಲಾ ಹೊರ ತೆಗೆದು ಬಾರಿಸುತ್ತಾ ದಂಡಿಯಾಗಿ ಬರುತ್ತಿದ್ದ ಜನಪದಗೀತೆಗಳನ್ನು ಇಹಲೋಕದ ಪರಿವೆ ಇಲ್ಲದೆ ನಾವು ಕೆಲವರು ಹಾಡತೊಡಗಿದೆವು. ಉಳಿದವರು ಹಾಗೆಯೇ ಆಲಿಸುತ್ತಾ ಹುರಿದುಂಬಿಸುತ್ತಿದ್ದರು. ನಮ್ಮ ಗಾಯನದ ಏಕಾಗ್ರತೆಗೆ ಭಂಗತಂದುದು 'ಠಣ್ ಠಣ್ ಠಣ್' ಎಂಬ ಶಬ್ದದಿಂದ.

ಕಣ್ಬಿಟ್ಟು ಇಹಲೋಕಕ್ಕೆ ಬಂದು ಸುತ್ತ ಕಣ್ಣಾಡಿಸಿದರೇ.... ಒಳಗಿಡುವುದನ್ನು ಮರೆತಿದ್ದ ಒಂದು ತಟ್ಟೆಗೆ ಕಾಸುಗಳು ಬೀಳುತ್ತಿದ್ದವು. ನಮ್ಮ ಉಳಿದ ಸಹೋದ್ಯೋಗಿಗಳೇ ಫಕಫಕನೆ ನಗುತ್ತಾ,

"ಹಾಡ್ಕೋತಾ ಬೋಗಿಲಿ ಓಡಾಡಿಬಿಡಿ. ಟ್ರೈನ್ ಚಾರ್ಜನ್ನಂತೂ ಸಂಪಾದಿಸ್ಕೊಬಹುದು ನೋಡಿ" ಎಂದು ಗೇಲಿ ಮಾಡುವುದೇ? ಅಪಮಾನಕ್ಕೆ ಹಾಡು ಕಂಠದೊಳಗೇ ಹುಗಿದುಹೋಗಿ, ಖಂಜಿರ ತಾಳಗಳು ಕಿಟ್ಬ್ಯಾಗ್ನಲ್ಲಿ ಮುಖಮುಚ್ಚಿಕೊಂಡವು. ಮನೆಯಿಂದಲೇ ಎಲ್ಲರೂ ಶಕ್ತ್ಯಾನುಸಾರ ರೊಟ್ಟಿ ಚಪಾತಿ ಚಟ್ನಿಪುಡಿ ಮಾಡಿಕೊಂಡು ತಂದಿದ್ದೆವು. ರೈಲ್ ಚೊಂಬು, ಗಾಜಿನ ಬಾಟಲಲ್ಲಿ ನೀರು ತುಂಬಿಕೊಂಡಿದ್ದೆವು. ಸೊರಗಿದ್ದ ನಮ್ಮ ಬಕ್ಕಣಕ್ಕೆ ಹೊಂದುವ ಲಾಡ್ಜಿಂಗ್ ಅಥವಾ ಛತ್ರದಲ್ಲೇ ಉಳಿದುಕೊಂಡು ಹುಬ್ಬಳ್ಳಿ, ಧಾರವಾಡ, ಐಹೊಳೆ ಪಟ್ಟದಕಲ್ಲು ಬಾದಾಮಿ ಇಲ್ಲೆಲ್ಲಾ ಅಲೆದೆವು.. ನಮ್ಮ ಕಾಲೇ ನಮಗೆ ಜಟಕಾ. ನಮ್ಮ ಉತ್ಸಾಹವೇ ನಮ್ಮ ಕುದುರೆ. ಆಟೋ ಎಂಬುದೊಂದು ಬರುತ್ತದೆ ಎಂಬ ಕಲ್ಪನೆಯೂ ಇರದ ಕಾಲ. ಆದರೇನು... ಪ್ರಾಯದ ಕಸುವಿನ ನಮ್ಮನ್ನು ಭಾದಿಸುವ ಎದೆಗಾರಿಕೆ ಆ ಕ್ಷುದ್ರ ಬಿಸಿಲು ಮತ್ತು ದೂರಕ್ಕೆ ಇರಲು ಸಾಧ್ಯವೇ??

ಕಟ್ಟಿಕೊಂಡು ಹೋಗಿದ್ದ ಚಪಾತಿ ರೊಟ್ಟಿ ಚಟ್ನಿಪುಡಿಗಳಲ್ಲೇ ನಾಲ್ಕೈದು ದಿನ ದೂಡಿದೆವು. ಅಷ್ಟೊತ್ತಿಗಾಗಲೇ ನಾಲಿಗೆ ಸಂಪು ಹೂಡಿ "ನಾನೊಲ್ಲೆ ನಾನೊಲ್ಲೆ" ಎನ್ನುತ್ತಿತ್ತು. ಅನ್ನಕ್ಕಾಗಿ ಹಪಹಪಿಸುತ್ತಿತ್ತು. ರೊಟ್ಟಿ ಚಪಾತಿ ಗಂಟು ಖಾಲಿಯಾದಾಗ ನಮಗೊಂಥರಾ ಸಂತೋಷವೇ ಆಯಿತು. ಅಷ್ಟು ಹೊತ್ತಿಗೆ ವಿಜಾಪುರ ಮುಟ್ಟಿದ್ದೆವು. ನಾವು ಪ್ರವಾಸ ಹೊರಟಿದ್ದು ಬೇಸಿಗೆ ರಜವಾದ್ದರಿಂದ ಆಹಾ– ಪ್ರತಿದಿನ ಉರಿಬಿಸಿಲ ವಿಹಾರವೇ. ಗೋಲಗುಂಬಜ್ ಇತ್ಯಾದಿ ನೋಡಿ ದಣಿದ ಕಾಲುಗಳನ್ನೆಳೆದುಕೊಂಡು ಬಹಳ ನಿರೀಕ್ಷೆಯಿಂದಲೇ ಒಂದು ಸಾಧಾರಣ ಹೋಟೆಲ್ಗೆ ನುಗ್ಗಿದೆವು. ಅಲ್ಲಿಯೂ ಮೊದಲು ಚಪಾತಿಯೇ ಬರಬೇಕೇ?? ಆನಂತರವಾದರೂ ಅನ್ನ ಹುಳಿ ಸಾರು ಸಿಗುತ್ತೆ ಅಂದ್ಕೊಂಡ್ರೆ ಕೊಟ್ಟಿದ್ದು ಒಂದು ಸಣ್ಣ ಬಟ್ಟಲು ಅನ್ನ, ತುಸು ಮೊಸರು. ವಿಚಾರಿಸಿದರೆ "ನಮ್ಕಡಿ ಮಂದಿ ಜಾಸ್ತಿ ಅನ್ನ ಬೇಡೂದಿಲ್ರಿ. ಅದಕ್ಕ ಮೊಸರಕ್ಕಷ್ಟ ಸೊಲೂಪ ಅನ್ನ ಕೊಡ್ತೀವಿ" ಅಂದ್ರು. ಹೊಟ್ಟೆ ತುಂಬಿದ್ದರೂ ಸಿಟ್ಟಿನಿಂದ ಮ್ಯಾನೇಜರನಿಗೆ ಗೊತ್ತಾದರೂ ಆಗದಂತೊಮ್ಮೆ ಅವನನ್ನು ಕೆಕ್ಕರಿಸಿ ನೋಡಿ ಧುಮುಗುಡುವ ಅತೃಪ್ತಿಯಿಂದಲೇ ದುಡ್ಡು ತೆತ್ತು ಹೊರಬಂದೆವು. ಹೊಟ್ಟೆ "ಶಿವಪ್ಪಾ ಕಾಯೊ ತಂದೆ. ಅನ್ನವಿರದೆ ನಾವಿರಲಾರೆವು, ಎಲ್ಲಿಂದಲಾದರು ಭರ್ತಿ ಅನ್ನವ ಕೊಡಿಸೊ ದೇವನೇ" ಎಂದು ಬೇಡುತ್ತಿತ್ತು ಮುಂದೆ ಕಾರವಾರದಲ್ಲಿ ಇಳಿದಾಗ ರಾತ್ರಿ ಹತ್ತು ದಾಟಿತ್ತು. "ಮೀನು ವೆಜಿಟೇರಿಯನ್ ಅಲ್ಲವಾ"? ಎನ್ನುವ ಕರಾವಳಿಯ ಈ ಊರಿನಲ್ಲಿ ಮೀನಿರದ ವೆಜಿಟೇರಿಯನ್ ಹೋಟೆಲ್ಗಾಗಿ ವಿಚಾರಿಸುತ್ತಾ ಅಲೆದಲೆದು ಅಲೆದಲೆದು ಅಂತೂ ಇಂತೂ ಒಂದನ್ನು ಪತ್ತೆ ಮಾಡಿದೆವು. ಸ್ವರ್ಗವೇ ಕೈಗೆಟುಕಿದಷ್ಟು ಖುಷಿಯಿಂದ ಎದುರು ನಿಂತರೇ...... ನಮ್ಮನ್ನು ಸ್ವಾಗತಿಸಿದ್ದು ಅಚ್ಚುಕಟ್ಟಾಗಿ ತೊಳೆಸಿಕೊಂಡು ಲಕಲಕಿಸುತ್ತಿದ್ದ ಖುರ್ಚಿ ಮೇಜುಗಳು, ನೆಲ ಮತ್ತು ಬೋರಲು ಹಾಕಿಸಿಕೊಂಡಿದ್ದ ದೊಡ್ಡ ದೊಡ್ಡ ಪಾತ್ರೆಗಳು!

"ತಿನ್ನಲು ಏನೂ ಸಿಗಲಿಲ್ಲ ನಿಜ . ಹಂಗಾದರೂ ಉಪವಾಸ ಮಾಡಿದೀವಲ್ಲ.. ಅದಕ್ಕೆ ಒಂದಿಷ್ಟು ಉಪವಾಸದ ಪುಣ್ಯವನ್ನಾದರೂ ನಮ್ಮ ಅಕೌಂಟಿಗೆ ಸೇರಿಸಪ್ಪಾ ಶಿವನೇ" ಎಂದು ಬೇಡಿಕೊಂಡು ಪುಣ್ಯಾತ್ಮ ಲಾಡ್ಜಿಂಗ್ನವನೊಬ್ಬ ಕೊಟ್ಟ ರೂಮುಗಳಲ್ಲಿ ಗಂಟು ಮೂಟೆ ಸಮೇತ ಮಲಗಿದೆವು.

ಮಾರನೆಯ ದಿನ ತುಂಬಾ ನಿರೀಕ್ಷೆಯಿಂದ ಸೇರಿದ್ದು ಗೋಕರ್ಣ. ಯಾಕೆಂದರೆ ನಮ್ಮ ಸಹೋದ್ಯೋಗಿ ಚಂಪಾವತಿ, ತಮ್ಮ ಸೋದರಮಾವ ವಾಮನರಾವ್ ಎನ್ನುವವರ ಮನೆಯಲ್ಲಿ ತಿಂಡಿ ಊಟ ಎರಡಕ್ಕೂ ವ್ಯವಸ್ಥೆ ಮಾಡಲು ಹೇಳಿದ್ದರು. ಬೆಳಿಗ್ಗೆ ಸ್ನಾನ ಮುಗಿಸಿ ನಾವು ಕಾತರಿಸಿದ್ದು ತಿಂಡಿಗಾಗಿ. ಆದರೆ 'ಮೊದಲು ಮಹಾಬಲೇಶ್ವರನ ದರ್ಶನ ಮಾಡಿಬಿಡೋಣ' ಎಂದು ವಾಮನರಾವ್ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಇನ್ನೇನು ಮಾಡೋದು! "ಸಿವ್ನೇ ಕಾಪಾಡಪ್ಪಾ" ಎಂದು ದಿಂಡುಗಡೆದು ಎಲ್ಲಾದೇವರ ದರ್ಶನ ಮಾಡುವಾಗ್ಲೂ ಗಮನವೆಲ್ಲಾ...... ಬೇಡ.ಬಿಡಿ.

ವಾಪಸ್ಸಾಗಿ ಅವರ ಮನೆ ಹೊಕ್ಕಾಗ ಸಾಲಾಗಿ ಇಟ್ಟ ಬಾಳೆಲೆ, ನೀರಿನ ಲೋಟ ನಮಗಾಗಿ ಶಿಸ್ತಿನಿಂದ ಕಾಯುತ್ತಿದ್ದವು. ಉಪ್ಪಿಟ್ಟು ಚಟ್ನಿ ಅವರೇ ಬಡಿಸಿ ಬಡಿಸಿ ಕೈ ಸೋಲುವವರೆಗೂ ತಿಂದು ಉದರ ಬ್ರಹ್ಮನನ್ನು ತೃಪ್ತಿ ಪಡಿಸಿದರೂ ಮುಂದಿನ ಊಟಕ್ಕೂ ನಾಲಿಗೆ ಹೊಟ್ಟೆ ಎರಡೂ ಕಾತರಿಸುತ್ತಿದ್ದವು. ಉಪಹಾರ ಮುಗಿಸಿ ಗೋಕರ್ಣದ ದರ್ಶನಕ್ಕೆ ಹೊರಟು ಗೋಕರ್ಣದ ಪೇಟೆ, ಸಮುದ್ರದ ದಂಡೆ ಎಲ್ಲಾ ಸುತ್ತಿಕೊಂಡು ಬರುವ ಹೊತ್ತಿಗೆ ಬಿಸಿಲು ಬ್ರಹ್ಮರಾಕ್ಷಸನಾಗಿ, ಹೊಟ್ಟೆ ಹಸಿದ ತೋಳನಂತಾಗಿತ್ತು ಹಿತ್ತಿಲಿಗೆ ಹೋಗಿ ಕೈಕಾಲು ತೊಳೆದುಕೊಂಡು ಊಟದ ಮನೆಗೆ ಬಂದೆವು. ಕುಡಿ ಬಾಳೆಲೆಯ ಎಡತುದಿಯಲ್ಲಿ ಉಪ್ಪು, ಅದರ ಪಕ್ಕದಲ್ಲಿ ಮಿಡಿ ಉಪ್ಪಿನ ಕಾಯಿ, ಮಾವಿನಕಾಯಿ ಚಟ್ನಿ, ಒಂದು ಪಲ್ಯ. ನೋಡಿದ ತಕ್ಷಣ ಕೆರಳಿದ ರಸನೆ ನಮ್ಮ ಮರ್ಯಾದೆ ಕಳೆಯದಂತೆ ತುಟಿ ಹಲ್ಲಿನ ಬಿಗಿ ಸೆರೆಯಲ್ಲಿ ದೂಡಿ ಎಲೆಯ ಮುಂದೆ ಕುಳಿತೆವು.

ಶುರುವಾಯಿತು ನೋಡಿ ಮೊದಲು ತಂಬೂಳಿ, ಆನಂತರ ಮಿಡಿ ಉಪ್ಪಿನಕಾಯಿ ರಸ ಅದಕ್ಕೆ ಎಣ್ಣೆ, ಮಾವಿನಕಾಯಿ ಚಟ್ನಿ ಎಣ್ಣೆ, ಸರದಿಯ ಮೇಲೆ, ಅಲ್ಲದೆ ಸರದಿಯನ್ನೂ ಮೀರಿಯೂ ಮತ್ತೆ ಮತ್ತೆ ನಮ್ಮ ಎಲೆಯ ಕಡೆ ಹರಿದು ಬರುತ್ತಲೇ ಇದ್ದವು. ಒಬ್ಬೊಬ್ಬರೂ ಒಂದೊಂದನ್ನೂ ಅದೆಷ್ಟು ಸಲ ಕಲೆಸಿಕೊಂಡು ತಿಂದೆವೋ?! ಎಣಿಸುವುದು ಆ ಸಾವಿರ ಜಿಹ್ವೆಯ ಆದಿಶೇಷನಿಗೂ ಸಾಧ್ಯವಿರಲಿಲ್ಲ."ಬದನೆ ಕಾಯಿ ಹುಳಿ ಇದೆ" ಎಂದರು. ತುಂಬಿತೇನೋ ಎನಿಸುತ್ತಿದ್ದ ಹೊಟ್ಟೆ ತಕ್ಷಣ "ಇನ್ನೂ ಜಾಗವಿದೆ ಹಾಕು ಹಾಕು" ಎಂದರೆ, ನಾಲಿಗೆ ಮತ್ತೆ ಕೆರಳಿ "ಸವಿಯಲು ಸಿದ್ಧವಾಗಿದ್ದೇನೆ ಬರಲಿ ಬರಲಿ" ಎಂದು ಹಾರೈಸಿತು. ಧಾರಾಳವಾಗಿ ತೆಂಗಿನಕಾಯಿ ತಿರುವಿ ಹಾಕಿದ ಹುಳಿ. ಅಮರರ ಸುಧೇಯೇಂ?! ತೆಗಿ ಥೀ! ಈ ಹುಳಿಂಗೆ ಸಾಟಿಯೇಂ? ಮತ್ತೊಂದು ಸುತ್ತಿನ ಕೈ ಬಾಯ್ಗಳ ಪೈಪೋಟಿ ಶುರುವಾಯಿತು. ಕಡೆಯಲ್ಲಿ ಕೊತ್ತಂಬರಿ ಸೊಪ್ಪು ಒಗ್ಗರಣೆ ಹಾಕಿದ್ದ ಮಜ್ಜಿಗೆಯನ್ನ ತಿಂದು. ತೃಪ್ತಿಯಿಂದ ತೇಗಿ, ಸ್ವರ್ಗದೊಳಗೇ ಊಟ ದೊರೆವುದೇನು? ಆ ಮಹಾತಾಯಿಯದು ಅಕ್ಷಯ ಪಾತ್ರೆ ಇರಬೇಕು. ಅದೆಷ್ಟು ಸೇರು ಅಕ್ಕಿಯ ಅನ್ನ ಮಾಡಿದ್ದರೋ?! ಅದಿನ್ನೆಷ್ಟು ಮಾವಿನಕಾಯಿ ಚಟ್ನಿ ತಿರುವಿ, ಅದಿನ್ನೆಂಥಾ ದೊಡ್ಡ ಕೊಳಗದಲ್ಲಿ ಬದನೆಕಾಯಿ ಹುಳಿ ಮಾಡಿದ್ದರೊ,?! ಬಕಾಸುರನ ಊಟ ಕಿತ್ತುಕೊಂಡ ಭೀಮನೂ ನಮ್ಮ ಊಟ ನೋಡಿ ಬೆರಗಾಗುತ್ತಿದ್ದನೇನೋ! ಈಗ ಹೇಳಿ ಅವತ್ತು ನಾವು ಬಕಾಸುರನ ಮರಿಮಕ್ಕಳಂತಾಗಿದ್ದು ಸುಳ್ಳೇನು??

ಸಾಕ್ಷಾತ್ ಅನ್ನಪೂರ್ಣೇಶ್ವರಿಯಂತಹ ಆ ಮಹಾತಾಯಿ ಬಡಿಸಿದ ಊಟವನ್ನು ಎಂದಾದರೂ ಮರೆಯಲು ಶಕ್ಯವೇನು?

ವಾಮನರಾವ್ ದಂಪತಿಗಳಿಗೆ ಇಂದಿಗೂ ನನ್ನ ಹೃದಯದಲ್ಲಿ ಇರುವ ಸ್ಥಾನವನ್ನು ಬೇರೆಯವರು ಆಕ್ರಮಿಸಲು ಸಾಧ್ಯವಾಗಿಲ್ಲ.

■

# ಅಂತ್ಯ ಕಾಣುತ್ತಿರುವ ಅಂತ್ಯಾಕ್ಷರಿ

**● ಶ್ರೀಲಕ್ಷ್ಮಿ ಎಸ್. ಗುರುಪ್ರಸಾದ**

ಈಗಿನ ಚಿಕ್ಕ ಮಕ್ಕಳಿಗೆ ಅಂತ್ಯಾಕ್ಷರಿ ಎಂದರೆ ಏನು? ಅಂತ ಒಮ್ಮೆ ಕೇಳಿ. ಸುಮಾರು ಮಕ್ಕಳಿಗೆ ಇದು ಯಾವ ಆಟ ಅಂತ ಖಂಡಿತ ಗೊತ್ತಿರಲ್ಲ. ಒಟ್ಟಾಗಿ ಕೂತು ಮಾತಾಡೋದೆ ಕಷ್ಟ. ಇನ್ನು ಹಾಡಿಗೆ ಹೋದ್ರಿ. ಅಂತೀರ? ಸರಿ ಬಿಡಿ, ಈ ಆಟವನ್ನು ಆಡಿ, ಖುಷಿ ಪಟ್ಟಿರುವ ನಾವೇ ಈ ಆಟದ ಬಗ್ಗೆ ಒಂದಿಷ್ಟು ಮೆಲುಕು ಹಾಕೋಣ.

ಶಾಲಾ ಕಾಲೇಜುಗಳ ಪ್ರವಾಸದ ಸಮಯದಲ್ಲಿರಬಹುದು, ಮದುವೆಗೆ ಒಟ್ಟಾಗಿ ನೆಂಟರೊಂದಿಗೆ ಹೋಗುವ ಬಸ್ಸಿನಲ್ಲಿರಬಹುದು, ಆತ್ಮೀಯರೆಲ್ಲರು ಸೇರಿದ ಹಬ್ಬ ಅಥವ ಸಮಾರಂಭಗಳಲ್ಲಿ, ಅಷ್ಟು ಏಕೆ? ಕರೆಂಟ್ ಹೋದ ಸಮಯದಲ್ಲೂ ಕೂತು ಆಡುವ ಆಟಗಳಲ್ಲಿ ಅಂತ್ಯಾಕ್ಷರಿಯು ಒಂದಾಗಿರುತ್ತಿತ್ತು. 'ಹಮ್ ಆಪ್ಕೆ ಹೇ ಕೌನ್' ಚಲನಚಿತ್ರದಲ್ಲಿ ವಧು ವರರ ಮನೆಯವರು ಆಡುವ ಅಂತ್ಯಕ್ಷರಿಯನ್ನು ತೆರೆಯ ಮೇಲೂ ನೋಡಿ ಆನಂದಿಸಿದೆವು. ಕಾಲೇಜು, ಆಫೀಸಿನಲ್ಲಿ ನಡೆಸುತ್ತಿದ್ದ ಸ್ಪರ್ಧೆಗಳಲ್ಲೂ ಅಂತ್ಯಾಕ್ಷರಿ  ಹಾಡಿನ ಸ್ಪರ್ಧೆ ಇರುತ್ತಿತ್ತು. ಅಂತಾಕ್ಷರಿ ಎಂಬ ಟಿವಿ ಕಾರ್ಯಕ್ರಮವು ಸಹ ಎಲ್ಲಾ ಪ್ರಾದೇಶಿಕ ಚಾನೆಲ್‌ಗಳಲ್ಲಿ ಬಹಳ ಕಂತುಗಳು ಪ್ರಸಾರವಾಗಿ ಜನಪ್ರಿಯವಾಗಿತ್ತು. ಇವೆಲ್ಲಾ ಈಗಿನ ರಿಯಾಲಿಟಿ ಶೋಗಳ ಕಾಲದ ಹಿಂದಿನ ಮಾತು. ಎಲ್ಲರ ಒಳಗು ಒಬ್ಬ ಗಾಯಕ ಅಥವ ಗಾಯಕಿ ಇರ್ತಾರಂತೆ. ಅವರು ಹೊರಹೊಮ್ಮಲು ಒಂದು ವೇದಿಕೆಯಾಗಿತ್ತು ಈ ಆಟ ಹಾಗು ಎಷ್ಟೋ ಬಾತ್ ರೂಮ್ ಸಿಂಗರ್ಸ್ ಗಳಿಗೆ ಈ ಅಂತ್ಯಾಕ್ಷರಿಯೇ ತಮ್ಮ ಗಾಯನ ಪ್ರದರ್ಶನಕ್ಕೆ ಸಿಗುತ್ತಿದ್ದ ಒಂದು ಅವಕಾಶ. ಆಟದಲ್ಲಿ ಯಾವುದಾದರೋ ಗುಂಪಿನಲ್ಲಿ ಚೆನ್ನಾಗಿ ಹಾಡು ತಿಳಿದವರಿದ್ದರೆ ಅವರಿಗೆ ಎಲ್ಲಿಲ್ಲದ ಡಿಮ್ಯಾಂಡ್. ಬರೀ ಕನ್ನಡ ಚಿತ್ರಗೀತೆಗಳೋ? ಅಥವ ಹಿಂದಿ ಗೀತೆಗಳನ್ನು ಹಾಡಬಹುದಾ ಅನ್ನುವ ಡಿಸ್ಕಶನ್ ಮೊದಲಿಗೆ. ಅದಾದ ಮೇಲೆ ಮೊದಲು ಯಾವ ಗುಂಪಿನವರು ಹಾಡುವರು? ಎಂಬುದಕ್ಕೆ ಟಾಸ್ ಹಾಕುವ ಹಾಗೆ ಒಂದೊಂದು ಗುಂಪನ್ನು ಬೆರಳು ಮಾಡಿ ತೋರಿಸುತ್ತಾ 'ಬೈಟೆ ಬೈಟೆ ಕ್ಯಾ ಕರೆ? ಕರ್ನಾ ಹೆ ಕುಚ್ ಕಾಮ್. ಶುರು ಕರೋ ಅಂತ್ಯಾಕ್ಷರಿ, ಲೇಕೆ ಪ್ರಭು ಕ ನಾಮ್' ಅಂತ ಹೇಳಿ ಕೊನೆಗೆ ಯಾವ ಗುಂಪಿನ ಬಳಿ ನಿಲ್ಲುತ್ತದೆಯೋ ಅವರಿಂದಲೇ ಅಂತ್ಯಾಕ್ಷರಿಯ ಶುಭಾರಂಭ. ಒಂದು ಗುಂಪಿನವರು ಹಾಡುತ್ತಿರುವಾಗಲೇ ಆ ಹಾಡಿನ ಕೊನೆಯ ಅಕ್ಷರ ಯಾವುದು? ಎಂದು ಕಂಡುಹಿಡಿದುಕೊಂಡು ಆ ಅಕ್ಷರದಿಂದ ಪ್ರಾರಂಭಗೊಳ್ಳುವ ಹಾಡನ್ನು ಮನಸ್ಸಿನಲ್ಲೇ ಲೆಕ್ಕಾಚಾರ ಮಾಡಿಟ್ಟುಕೊಂಡು ಅವರು ಹಾಡಿ ಮುಗಿಸುತ್ತಿದಂತೆ ಮುಂದಿನ ತಂಡದವರಿಂದ ಮುಂದಿನ ಗೀತೆ ಶುರು. ಹಾಡಿನ ಒಂದು ಸಾಲು ಅಥವಾ ಪಲ್ಲವಿ ಬಂದರಾಯ್ತು, ಆಮೇಲೆ ಲಾ ಲಾ ಲಾಲ ಲಾಲ.... ಎಂದು ಆ ಹಾಡಿನ ರಾಗವನ್ನು ಗುನುಗುತ್ತಾ ಹಾಡಿ ಮುಗಿಸಿ ಕಷ್ಟವಾಗಿರುವ ಒಂದು ಕೊನೆಯ ಅಕ್ಷರವನ್ನು ಮುಂದಿನ ತಂಡದವರಿಗೆ ಕೊಟ್ಟುಬಿಟ್ಟರೆ ಆ ಕ್ಷಣಕ್ಕೆ ದೊಡ್ಡದೊಂದು ಸಾಧನೆ ಮಾಡಿದಂತೆಯೇ ಖುಷಿ. ಕೊಟ್ಟ ಅಕ್ಷರದಿಂದ ಅವರೇನಾದರೋ ಹಾಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂದರೆ, ಬಾಯಲ್ಲಿಯೆ ಸ್ಟಾಪ್ ವಾಚ್ ಕೌಂಟಿಂಗ್

ಶುರು. ಟಿಕ್ ಟಿಕ್ ಒನ್, ಟಿಕ್ ಟಿಕ್ ಟು,.... ಎನ್ನುತ್ತಾ ಯೋಚಿಸಲು ಸಮಯ ಕೊಡದೆ, 'ನಿಮಗೆ ತಿಳಿಯದಿದ್ರೆ ಪಾಸ್ ಎಂದುಬಿಡಿ, ನಾವೇ ಹಾಡ್ತೀವಿ' ಅನ್ನೋ ಚಿಕ್ಕ ಪುಟ್ಟ ಗದ್ದಲ ಗಲಾಟೆಗಳ ನಡುವೆಯೇ ಹಾಡಿನ ಸವಾರಿ ಮುಂದೆ ಸಾಗುತ್ತಿತ್ತು. 'ಣ' ಅಕ್ಷರ ಬಂದಾಗ 'ನ ' ಎಂದು, 'ಳ' ಬಂದಾಗ 'ಲ' ಅಕ್ಷರ ಅಂತೆಲ್ಲಾ ನಾವೇ ಆಟೋ ಕರೆಕ್ಟ್ ಮಾಡಿಕೊಂಡು ಹಾಡುತ್ತಿದ್ದುದು ಎಷ್ಟು ಚೆನ್ನಾಗಿತ್ತು. ಇದರ ಮಧ್ಯೆ ಕೆಲವು ಅಕ್ಷರಗಳಿಗೆ ಒಂದಿಷ್ಟು ಫಿಕ್ಸೆಡ್ ಸಾಂಗ್ ಗಳು ಇರುತ್ತಿದ್ದವು. ಆಡುವಾಗ ಯಾರಾದರೋ ಹಿರಿಯರು ಅಥವ ತಿಳಿದವರಿದ್ದರೆ ಹಾಡು ಯಾವ ಚಿತ್ರದ್ದು? ಯಾರ ಸಂಗೀತ? ಯಾರ ಸಾಹಿತ್ಯ? ಯಾವ ವರ್ಷ ತೆರೆಕಂಡ ಚಿತ್ರ? ಅಂತೆಲ್ಲಾ ಮಾಹಿತಿ ಕೊಡುತ್ತಿದ್ದುದು ಉಂಟು. ಕೆಲವು ಸರಿ ಚಿತ್ರಗೀತೆಗಳೊಂದಿಗೆ ಭಾವಗೀತೆ, ಭಕ್ತಿಗೀತೆ, ದೇಶ ಭಕ್ತಿಗೀತೆ ಎಲ್ಲವನ್ನು ಹಾಡುತ್ತಿದ್ದೆವು. ಈ ಆಟದಿಂದ ಮರೆತು ಹೋದ ಎಷ್ಟೋ ಹಾಡುಗಳು ನೆನಪಿಗೆ ಬರುತ್ತಿತ್ತು, ತಲೆಗೆ ನೆನಪಿಸಿಕೊಳ್ಳುವ ಕೆಲಸ ಹಚ್ಚಿ ಅದನ್ನು ಚುರುಕುಗೊಳಿಸುತ್ತಿದ್ದೆವು, ಒಟ್ಟಾಗಿ ಎಲ್ಲರು ಕೂಡಿ ಆಡುತ್ತಿದುದರಿಂದ ಎಲ್ಲರ ನಡುವೆ ಭಾಂದವ್ಯ ಬೆಳೆಯುತ್ತಿತ್ತು.

ಚಿತ್ರಗೀತೆಗಳು ಎಂದಾಗ ಸಿನಿಮಾದ ಹಾಡುಗಳಷ್ಟೆ ಇರುತ್ತಿದ್ದವು ಆಗ. ನಂತರ ಆಲ್ಬಮ್ ಗೀತೆಗಳು ಶುರುವಾದವು. ಆನಂತರ ರೀಮಿಕ್ಸ್ ಗೀತೆಗಳು ಹೀಗೆ ಹಾಡುಗಳಲ್ಲು ರೆಟ್ರೋ ಸಾಂಗ್ಸ್, ಐಟಮ್ ಸಾಂಗ್ಸ್ ಅಂತೆಲ್ಲಾ ವಿಂಗಡಣೆಗಳಾದವು. ಈಗ ಬರುವ ಎಷ್ಟೋ ಹಾಡುಗಳ ಸಾಹಿತ್ಯವನ್ನು ನೋಡಿದರೆ ಹಾಡದೆ ಸುಮ್ಮನಿರುವುದು ಒಳ್ಳೆಯದು ಅನ್ನಿಸುವುದುಂಟು. ಎಲ್ಲರ ಕೈಗು ಬಂದ ಮೊಬೈಲ್ ಎಂಬ ಮಾಯಾವಿ ವಸ್ತುವು ನಮ್ಮಿಂದ ಎಲ್ಲವನ್ನು ಕಸಿದುಕೊಳ್ಳುತ್ತಿದೆ. ಈ ಆಟವು ಆದರಿಂದ ಹೊರತಲ್ಲ. ಹಿಂದೆ ಚಿತ್ರಗೀತೆಗಳನ್ನು ಕೇಳಲು ಸಿಗುತ್ತಿದ್ದ ರೇಡಿಯೋ, ಟೇಪ್ ರೆಕಾರ್ಡರ್, ನಿಯಮಿತ ಟಿವಿ ಕಾರ್ಯಕ್ರಮದಲ್ಲಿಯೇ ಕೇಳಿ ಎಷ್ಟೋ ಹಾಡುಗಳನ್ನು ಕಲಿಯುತ್ತಿದ್ದೆವು. ಈಗ ಎಲ್ಲವೂ ನಮ್ಮ ಬೇರೆಳಂಚಿನಲ್ಲಿಯೆ ಇದ್ದರು ಯಾವೊಂದು ಹಾಡನ್ನು ಪೂರ್ತಿಯಾಗಿ ಕಲಿಯುವುದಿಲ್ಲ. ರೇಡಿಯೋದಲ್ಲೇ ಹಲವು ಫ್ರೀಕ್ವೆನ್ಸಿಗಳು, ಟಿವಿಯಲ್ಲಿ ನೂರಾರು ಚಾನೆಲ್ಗಳು, ಮೊಬೈಲ್ನಲ್ಲಿ ಲೆಕ್ಕವಿಲ್ಲದಷ್ಟು ಆಪ್ ಗಳು, ವೆಬ್ಸೈಟ್ ಗಳು ಹೀಗೆ ಮೊಬೈಲ್ ಫೋನ್ ಎಲ್ಲರ ಸಮಯವನ್ನು ತಿಂದುಹಾಕುತ್ತಿರುವಾಗ ಅಂತ್ಯಾಕ್ಷರಿ ಅಂತ್ಯಾ ಕಾಣುವುದರಲ್ಲಿ ಸಂಶಯವೇ ಇಲ್ಲ! ■



# ತಿರುಪತಿ ವೆಂಕಟರಮಣ ಗೋವಿಂದಾ

**●ವಸುಮತಿ ಉಡುಪ**

'ತಿರುಪತಿ ವೆಂಕಟರಮಣ ಗೋವಿಂದಾ.. ಗೋವಿಂದ..' ಶ್ರಾವಣ ಶನಿವಾರ ಮನೆ ಗೇಟಿನ ಬಳಿ ಬಂದು ನಿಂತು ದೇವರ ಹೆಸರಲ್ಲಿ ಕಾಣಿಕೆ ಸಂಗ್ರಹಿಸುವವರ ಸಂಖ್ಯೆ ಈಗ ಬಹಳಷ್ಟು ಕಮ್ಮಿಯಾಗಿ ಕೊನೆಯ ಘಟ್ಟಕ್ಕೆ ಬಂದು ನಿಂತಿದೆ. ಹೀಗೆ ಮನೆ ಮನೆಯಿಂದ ಸಂಗ್ರಹಿಸಿದ ದುಡ್ಡನ್ನು ತಿರುಪತಿ ದೇವರ ಹುಂಡಿಗೆ ಹಾಕಲು ಮುಡಿಪಾಗಿಡುವುದೋ ಅಥವಾ ದೇವರ ಸೇವೆಗೆ ಬಳಸಿಕೊಳ್ಳುವುದೋಸಂಪ್ರದಾಯ ಎಂದು ಕೇಳಿ ಬಲ್ಲ ಸಂಗತಿ. ನಂಬುವುದು, ಬಿಡುವುದು ಅವರವರ ಮರ್ಜಿಗೆ ಬಿಟ್ಟಿದ್ದು. ಗಣಪತಿ ಹಬ್ಬಕ್ಕೆ ತಿಂಗಳಿರುವಾಗಲೇ ಚೋಟುದ್ದದ ಮಕ್ಕಳು ಕೂಡಾ ಕೈಲೊಂದು ತೂತು ಕೊರೆದ ಡಬ್ಬಿ ಹಿಡಿದು, ಗುಂಪು ಕಟ್ಟಿಕೊಂಡು ಮನೆಯ ಬಳಿ ಬಂದು ಗೌಜು ಹಾಕುತ್ತಾರೆ. 'ಎಲ್ಲಿಯೋರು ನೀವು? ಎಲ್ಲಿ ಗಣಪತಿ ಕೂರಿಸ್ತೀರಿ?' ಅಂದರೆ ಹತ್ತಿರದ ಏರಿಯಾದ ಹೆಸರು ತುದಿನಾಲಿಗೆಯಲ್ಲಿರುತ್ತದೆ. ಮಸಾಲೆದೋಸೆಗೋ, ಪಾನಿಪೂರಿಗೋ ಇದೊಂದು ನೆವ ಎಂದು ಗೊತ್ತಿದ್ದರೂ 'ಪಾಪ, ಮಕ್ಕಳು..' ಎಂದು ಒಂದಿಷ್ಟು ಚಿಲ್ಲರೆಕಾಸು ಡಬ್ಬಿಗೆ ಹಾಕುವವರು ಇರುತ್ತಾರೆ. ಬೈದು ಓಡಿಸುವವರೂ ಇರುತ್ತಾರೆ. ಎಲ್ಲರೂ ಹೀಗೇ ಎಂದು ಸಾರಾಸಗಟಾಗಿ ಹೇಳಲು ಬರುವುದಿಲ್ಲ. ಅವರವರ ಆರ್ಥಿಕ ಸಂಪಾದನೆಗೆ ತಕ್ಕಂತೆ ಸಣ್ಣದೊಂದು ಗಣಪತಿ ಖರೀದಿಸಿ, ಹೂವೇರಿಸಿ, ಊದುಬತ್ತಿ ಸುತ್ತಿಸಿ, ಪುಟಾಣಿಹಿಟ್ಟಿನ ಚರ್ಪು ಹಂಚಿ ಸಡಗರಿಸುವ ಉತ್ಸಾಹಿಗಳೂ ಇರುತ್ತಾರೆ. ಬಡಾವಣೆಯಲ್ಲಿ ಗಣಪತಿ ಕೂರಿಸುವ ಹುಮ್ಮಸ್ಸಿನ ಕಟ್ಟಾಳು ಯುವಕರು ಕೈಲೊಂದು ರಸೀದಿ ಪುಸ್ತಕ ಹಿಡಿದು ಹಣ ಸಂಗ್ರಹಣೆಗೆ ಬಂದರೆ ಅವರ ಆಕೃತಿ ನೋಡಿಯೋ, ಅಥವಾ ಕೈಲಿರುವ ರಸೀದಿ ಪುಸ್ತಕಕ್ಕೆ ಅವಮಾನಿಸಬಾರದೆಂದೋ ಒಂದಿಷ್ಟು ದೊಡ್ಡ ಮೊತ್ತದ ದೇಣಿಗೆ ಕೊಡಮಾಡಲ್ಪಡುತ್ತದೆ. ಮುಗ್ಧ ಮಕ್ಕಳಿಗೆ ಬೈದು ಓಡಿಸಿದಂತೆ ಇವರಿಗೆ ಬಾಯಿ ಮಾಡುವುದು ಕಷ್ಟ ಅಥವಾ ಹಿಂಜರಿಕೆ. ಹೀಗೆನ್ನುವಾಗ ಹಳೆಯದೊಂದು ಪ್ರಸಂಗ ನೆನಪಾಗುತ್ತಿದೆ. ಮಲೆನಾಡಿನ ನಮ್ಮ ಹಳ್ಳಿ ಮನೆಗೆ, ಊರಿಗೆ ಆರೇ ಮನೆ ಅನ್ನುವಂತಿದ್ದರೂ ಆಗಾಗ ತಿರಿಯಲು ಬರುವ ಭಿಕ್ಷುಕರಿದ್ದರು. ಮನೆಗೆ ಸೇರಿದ ಗದ್ದೆಯಲ್ಲಿ ಸಧ್ಯದಲ್ಲೇ ರಕ್ತಪಾತ ನಡೆಯುತ್ತದೆ ಎನ್ನುವಂತಾ ಎದೆಬಡಿತ ಏರಿಸುವ ಭವಿಷ್ಯ ಹೇಳುವ, ಅದಕ್ಕೆ ಸೂಕ್ತ ಪರಿಹಾರ ಮಾಡುತ್ತೇವೆನ್ನುವ ಬುಡುಬುಡಿಕೆಯವರು, ಹಾಂವುಗೊಲ್ಲರು, ಗಿಣಿಶಾಸ್ತ್ರದವರು, ಮಂಗನನ್ನು ಆಡಿಸುವವರು, ಬಸವನನ್ನು ಕರೆತರುವವರು, ಸಂಸಾರ ಸಮೇತ ಲಗ್ಗೆ ಹಾಕುವ ತಿರುಕರು, ಎಷ್ಟುದ್ದ ಬೇಕಾದರೂ ಬೆಳೆಸಬಹುದಾದ ಪಟ್ಟಿ. ಹೀಗೆ ತಿರಿಯಲು ಬಂದವರನ್ನು ಯಾವತ್ತೂ ಬರಿಗೈಲಿ ಕಳಿಸುವ ಪದ್ಧತಿ ಇರಲಿಲ್ಲ. ದುಡ್ಡು ಕೊಟ್ಟು ಅಂಗಡಿಯಿಂದ ಅಕ್ಕಿ ತರಬೇಕಾದ ಪ್ರಮೇಯವಿಲ್ಲದೆ ಸ್ವಯಂ ಕೃಷಿಕರಾಗಿದ್ದರಿಂದ ಕೈ ಹಿಡಿತ ಮಾಡಬೇಕಾದ್ದೂ ಇರಲಿಲ್ಲ. ಒಂದೇಕುಟುಂಬದ ನಾಲ್ಕೈದು ಜನ ಬೇಡಲು ಬಂದರೆ ಮೊರದಲ್ಲಿ ಒಟ್ಟಿಗೆ ಅಕ್ಕಿ ಹಾಕಿ ತಂದು ಕೊಡುವಂತಿಲ್ಲ.

"ಐದು ಜನ ಇದೀವಿ. ಮೊರದಾಗೆ ಐದು ಪಾಲು ಮಾಡ್ಕೊಡು.." ಅನ್ನುವ ಬೇಡಿಕೆ. ಬೇರೆ ಬೇರೆಯಾಗಿ ಪಾಲು ಮಾಡಿಕೊಟ್ಟರೆ ಜಾಸ್ತಿ ದಕ್ಕುತ್ತದೆ ಎನ್ನುವುದೇನೋ

ಅವರ ಲೆಕ್ಕಾಚಾರ. ಹೀಗೆ ಬಂದಿದ್ದ ಸಂಸಾರವೊಂದರ ರಗಳೆ ತಡೆಯಲಾಗದೆ ನನ್ನ ತಮ್ಮ ಹಳೆಯ ಶರ್ಟೊಂದನ್ನು ಧಾರಾಳವಾಗಿ ಕೊಡಮಾಡಿದ್ದ. ಇಬ್ಬರು ಗಂಡಸರಿದ್ದ ಕುಟುಂಬ, 'ಇಬ್ರಿದೀವಿ. ಇನ್ನೊಂದು ಅಂಗಿ ಕೊಡು' ಎಂದು ವರಾತ ತೆಗೆದು ಅಂಗಳದಲ್ಲಿ ಅಂಡೂರಿ ಕೂತಿತ್ತು. 'ಇಬ್ರಿಗೂ ಸೇರ್ಸಿ ಕೊಟ್ಟಿದ್ದು..' ಎಂದು ಸಾಗ ಹಾಕಲು ನೋಡಿದ್ದ ತಮ್ಮ. ಒಂದೇ ಅಂಗಿಯನ್ನು ಇಬ್ಬರಿಬ್ಬರು ಒಟ್ಟಿಗೆ ಹಾಕಿಕೊಳ್ಳುವ ಕಲ್ಪನೆಯಿಂದಲೇ ನಮಗೆಲ್ಲಾ ನಗು. ನಗುವುದಕ್ಕೆ ಸಕಾರಣವೇ ಬೇಕಿಲ್ಲದ ಮುಗ್ಧ ವಯಸ್ಸಿನ ನಗು. ಈ ಮುಂಚೆ ಇದನ್ನೇನಾದರೂ ಹೇಳಿದ್ದೀನಾ? ಹೇಳಿದ್ದರೆ ಕ್ಷಮಿಸಿ. 'ತಿರುಪತಿ ವೆಂಕಟರಮಣ..' ನಿಂದ ಶುರುವಾದ ಗಾಡಿ ಹಳಿ ತಪ್ಪಿತು. ಕೈಲೊಂದು ಫಳ್ಳನೆ ಬೆಳಗಿದ ತಾಮ್ರದ್ದೋ, ಹಿತ್ತಾಳೆಯದ್ದೋ ಚೊಂಬು ಹಿಡಿದು, ಹಣೆಗೂ ನಾಮ, ಚೊಂಬಿಗೂ ನಾಮ ಎಳೆದು, ಮಡಿಯಾದ ಬಟ್ಟೆ ತೊಟ್ಟು, ಶ್ರಾವಣ ಶನಿವಾರ ಮನೆ ಬಾಗಿಲಿಗೆ ಬಂದು ದನಿ ಎತ್ತಿದರೆ ಆಸ್ತಿಕರಿರಲಿ, ನಾಸ್ತಿಕರೂ ಕೂಡಾ ಚೊಂಬಿಗೆ ಅಕ್ಕಿಯೋ, ದುಡ್ಡೋ ಹಾಕಿ ಕಳಿಸುತ್ತಾರೆ. ವೆಂಕಟರಮಣನ ವಕ್ಕಲನ್ನು ಗೌರವಿಸುತ್ತಾರೆ. ಹೀಗೆ ಬರುತ್ತಿದ್ದವರಲ್ಲಿ ಮಕ್ಕಳೇ ಜಾಸ್ತಿ, ದೊಡ್ಡವರು ಕಡಿಮೆ ಎಂದು ನನ್ನ ಅನುಭವ. ಸಂಪ್ರದಾಯದ ಒಂದು ಕ್ರಮವೇ ಆಗಿರಲಿ, ಈಗ ಮಕ್ಕಳೂ ಕೂಡಾ ಮನೆ ಬಾಗಿಲಿಗೆ ಬರುವುದು ಕಮ್ಮಿಯಾಗಿದೆ. ನಿಂತೇ ಹೋಗಿದೆ ಅನ್ನುವ ಹಂತವನ್ನು ತಲುಪಿದೆ. ಗಣೇಶೋತ್ಸವದ ವಂತಿಗೆಯಂತೆ ಹೊತ್ತಲ್ಲದ ಹೊತ್ತಲ್ಲಿ ಬರಬಹುದಾದ ಸಂದರ್ಭ ಅಲ್ಲದಿರುವುದರಿಂದಲೋ, ಶನಿವಾರದ ಬೆಳಗಿನ ಸ್ಕೂಲಿಗೆ ಹಾಜರಿ ಹಾಕಬೇಕಾದ ಅನಿವಾರ್ಯತೆಯಿಂದಲೋ ಹೀಗಾಗಿರಬಹುದು. ಮೊದಲಿನ ಕಾಲದಲ್ಲಿ ಶನಿವಾರ ಬೆಳಗಿನ ಸ್ಕೂಲು ಇರುತ್ತಿರಲಿಲ್ಲವೇ ಎಂದು ಅಡ್ಡ ಬಾಯಿ ಹಾಕಬೇಡಿ. ಗೊತ್ತಿಲ್ಲದ ವಿಷಯದಲ್ಲಿ ಊಹಾಪೋಹ ಯಾಕೆ?

ಈ ಬಾರಿಯ ಶ್ರಾವಣಮಾಸದ ಮೊದಲನೇ ಶನಿವಾರ. ಅಂದಾಜು ಬೆಳಗಿನ ಒಂಭತ್ತು ಘಂಟೆ. ಗೇಟಿನ ಬಳಿ, 'ತಿರುಪತಿ ವೆಂಕಟರಮಣ ' ಕೇಳಿಸಿತು. ರೂಪಾಯಿಯ ನಾಣ್ಯ ಹಿಡಿದು ಬಾಗಿಲು ತೆಗೆದೆ. ಬಂದಿರುವುದು ಸಣ್ಣ ಹುಡುಗನಲ್ಲ, ಬೆಳೆದ ಗಡವ. ಬಿಳಿ ಮುಂಡು, ಹೆಗಲಮೇಲೊಂದು ಉತ್ತರೀಯ. ಯಥಾಪ್ರಕಾರ ಚೊಂಬಿಗೆ, ಹಣೆಗೆ ಉದ್ದ ನಾಮ. ಎಲ್ಲೋ ನೋಡಿದ ಮುಖ ಅಂದುಕೊಳ್ಳುವಾಗ ಆ ಮುಖವೂ ಹಲ್ಲು ಕಿರಿಯಿತು. ಅರೇ, ಮಾದೇಶ. ಮನೆ ಎದುರು ನೆಟ್ಟ ಗಿಡಗಳು ಮೇಲಿನ ವಿದ್ಯುತ್ ತಂತಿಗೆ ತಗುಲುವ ಹಂತಕ್ಕೆ ಬೆಳೆದಾಗ ಕಡಿದು ಒಪ್ಪ ಮಾಡಿ ಕೊಡುತ್ತಿದ್ದವನು. ಮನೆ ಎದುರಿನ ಹುಲ್ಲು ಕೆತ್ತಿ ಕೊಡುತ್ತಿದ್ದವನು. ಕೆಲಸವಿಲ್ಲದಿದ್ದಾಗಲೂ ಆಗೀಗ ಮನೆ ಬಾಗಿಲಿಗೆ ಬಂದು ತಲೆ ತುರಿಸುತ್ತಾ ನಿಲ್ಲುತ್ತಿದ್ದವನು.

"ಇದೇನೋ ವೇಷ? ಕುಡಿಯೋಕೆ ಹೀಗೂ ದುಡ್ಡು ಒಟ್ಟು ಮಾಡ್ತೀಯಾ?" ಅಂದೆ. ಹುಳ್ಳಗೆ ನಕ್ಕ. ಪ್ರತಿ ವಾದಿಸಲೂ ಗೊತ್ತಿಲ್ಲದ ಅಮಾಯಕ. ಅವನ ಮುಗ್ಧತೆಗೆ 'ಅಯ್ಯೋ ಪಾಪ..' ಅನಿಸಿದರೆ ತಪ್ಪಾ? ಅನಿಸಬಾರದಿತ್ತಾ? ಕುಡಿತದ ಚಟಕ್ಕೆ ಸಪೋರ್ಟ್ ಮಾಡಬಾರದಿತ್ತಾ? ಒಳಗೆ ಬಂದು ಇನ್ನೊಂದಷ್ಟು ದುಡ್ಡು ತೆಗೆದುಕೊಂಡು ಹೋಗಿ ಕೊಡಬಾರದಿತ್ತಾ? ಏನೋ ಗೊತ್ತಾಗುತ್ತಿಲ್ಲ..

■

# ಇಂತಿ ನಿಮ್ಮ ರಶ್ಮಿ!

● ಹಿರಿಯೂರು ರಾಘವೇಂದ್ರ

"ನಿನ್ನ ಅದ್ಭುತವಾದ ಟ್ಯಾಲೆಂಟ್‌ನ ಸುಮ್ಮನೆ ವೇಸ್ಟ್ ಮಾಡ್ಕೋತಿದೀಯ. ಬರೀ ಒಂದು ಕಾದಂಬರೀನ ಬರಿ. ಓದುಗರು ಬಿದ್ದೂ ಬಿದ್ದೂ ಖರೀದಿ ಮಾಡಿ ಓದಬೇಕು ಹಾಗಿರಬೇಕು ನೀ ಬರೆದ ಕಾದಂಬರಿ"

ಡಿಂಗ ರನ್ನನಿಗೆ ಪ್ರೋತ್ಸಾಹದ ಬ್ಲೋನ ದಬಾಯಿಸಿ ಹೊಡೀತಾ ಇದ್ದ.

"ಬಿದ್ದೂ ಬಿದ್ದೂ ಓದಿದರೆ ಗಾಯ ಆಗೋದಿಲ್ವಾ ?"

ಅಮಾಯಕ ಗುನ್ನ ಮುಗ್ಧತೆಯೇ ಮೂರ್ತಿವೆತ್ತವನಂತೆ ಕೇಳಿದ.

"ಅದು ಕಾ'ದಮ್'ಬರೀ ಭಾಷೆ. ಅರ್ಥ ಆಗೋರಿಗೆ ಅರ್ಥ ಆಗುತ್ತೆ. ದಡ್ ಬಡ್ಡಿಮಕ್ಕಳಿಗೆ ಹೆಂಗ್ ಹೇಳಿದ್ರೂ ಅರ್ಥ ಆಗೋದಿಲ್ಲ" ಎಂದ ಡಿಂಗ.

ಅವನ ಪ್ರೋತ್ಸಾಹಕ್ಕೆ ದಾವಣಗೆರೆ ಬೆಣ್ಣೆ ಮಸಾಲೆ ದೋಸೇನೂ ಸಿಕ್ತು.

"ಆದರೆ ...!" ರನ್ನ ಮೂಗೆಳೆದ.

"ನೋ ಆದ್ರೆ ಗೀದ್ರೆ. ಜಸ್ಟ್ ಡೂ ಇಟ್"

ಕಾಫೀ ಕುಡೀತ ಡಿಂಗ ಲಾಸ್ಟ್ ಮಾತ್ ಒಗಾಯಿಸ್ದಾ .

ಹಗಲೂ ರಾತ್ರಿ, ಹಗಲೂ ರಾತ್ರಿ ರನ್ನ ಅದೇನನ್ನೋ ಬರೆದ್ ಬರೆದ್ ಬಿಸಾಕಿದರೂ ಅವನಿಗೆ ಬೇಕಾದ ಕ್ಲಾರಿಟಿ ಸಿಗಲಿಲ್ಲ.

ಫೈನಲಿ ಡಿಂಗ ಪರಿಚಯಿಸಿದ್ದ ಪ್ರಕಾಶಕಿ ರಶ್ಮಿ ವಿಳಾಸಕ್ಕೆ ಅದನ್ನು ಒಗಾಯಿಸಿ, ಒಂದು ಪತ್ರವನ್ನೂ ಬರೆದ.

"ನಾನು ಮೊಟ್ಟ ಮೊದಲ ಬಾರಿಗೆ ಈ ಕಾದಂಬರಿಯನ್ನು ಬರೆದಿದ್ದೇನೆ. ಆದರೆ ಎಲ್ಲೆಲ್ಲಿ ಕಾಮ, ಫುಲ್ ಸ್ಟಾಪ್ ಹಾಕಬೇಕೋ ಗೊತ್ತಾಗದೆ ಕನ್ಫ್ಯೂಸ್ ಆಗಿದೆ. ದಯವಿಟ್ಟು ಅದನ್ನು ನೀವೇ ಹಾಕಿಕೊಳ್ಳಿ" ಎಂದು ಪತ್ರ ಬರೆದು ಅವರಿಂದ ಬರಬಹುದಾದ ಉತ್ತರದ ನಿರೀಕ್ಷೆಯಲ್ಲಿ ವಾರಗಟ್ಟಲೆ ಒಣ ಪ್ರಸವದ ಸಂಕಟ ಅನುಭವಿಸಿದ.

ಅವನ ನಿರೀಕ್ಷೆಯಂತೆ ಒಂದೆರಡು ವಾರಕ್ಕೇ ಸಂಪಾದಕಿ ರಶ್ಮಿಯಿಂದ ಅವನು ಕಳುಹಿಸಿದ್ದ ಕಾದಂಬರಿ ಹಿಂತಿರುಗಿ ಬಂತು, ಅವನ ಪತ್ರಕ್ಕೆ ಅವರು ಉತ್ತರವನ್ನೂ ಲಗಾಯಿಸಿಲಾಗಿದ್ದಿತು.

"ಮಾನ್ಯರೆ, ನಿಮ್ಮ ಪ್ರೀತಿಗೆ ಶತವಂದನೆ.

ಇದರೊಂದಿಗೆ ತಮ್ಮ ಕಾದಂಬರಿಯನ್ನು ಹಿಂತಿರುಗಿ ಕಳುಹಿಸುತ್ತಿದ್ದೇವೆ.

ಮುಂದಿನ ಬಾರಿ ತಾವು ದಯವಿಟ್ಟು, ಕೃಪೆ ಇಟ್ಟು ಬರೀ ಕಾಮಾ, ಫುಲಿಸ್ಟಾಪ್ ಮಾತ್ರಾ ಹಾಕಿ ಕಳಿಸಿ, ಅದಕ್ಕೆ ತಕ್ಕಂತೆ ನಾವು ಕಾದಂಬರಿಯನ್ನು ಬರೆದುಕೊಳ್ತೇವೆ!"

ಇಂತಿ ನಿಮ್ಮ,

**ರಶ್ಮಿ, ಪ್ರಕಾಶಕಿ** ■

# ರಸಿಕ ರಾಯರು

**ಆರತಿ ಘಟಿಕಾರ್**

ನಿವೃತ್ತಿ ಆದ ಬಳಿಕ ಗೋವರ್ಧನ್ ರಾವ್ ಅವರಿಗೆ ಮನೆಯಲ್ಲಿ ಬೋರ್ ಆಗತೊಡಗಿತ್ತು . ಕಚೇರಿಯಲ್ಲಿ ದಿನವೂ ಸಹದ್ಯೋಗಿಗಳ (ಹೆಚ್ಚಾಗಿ ಮಹಿಳಾಮಣಿಗಳ) ಜೊತೆಗೇ ಹೆಚ್ಚು ಬೆರೆಯುತ್ತಾ ಯಾವ ಕೆಲಸದ ಒತ್ತಡಕ್ಕೂ ಒಳಗಾಗದೆ ಡ್ಯೂಟಿ ಜೊತೆಗೆ ಅಲ್ಲಿರುವ ಬ್ಯೂಟಿಗಳನ್ನೂ ಹೊಗಳುತ್ತ ಇಷ್ಟು ವರ್ಷಗಳು ಹೇಗೆ ಕಳೆಯಿತೋ ಗೊತ್ತೆ ಆಗಿರಲಿಲ್ಲ ! ತವರು ಮನೆಯಲ್ಲಿ ಮುಚ್ಚಟೆಯಲ್ಲಿ ಬೆಳೆದ ಮಡದಿ ಗೀತಾರಿಗಂತೂ ಮನೆ ಕೆಲಸ /ಅಡುಗೆ ಅಂದರೆ ಅಲರ್ಜಿ ! ಗಂಡನ ಹೊಟ್ಟೆ ಪೂಜೆ ಅವರ ಕಛೇರಿಯಲ್ಲೇ ಆಗುತಿದ್ದದ್ದರಿಂದ ಕಾಟಾಚಾರಕ್ಕೆ ಏನೋ ಬೇಯಿಸಿ ಆರತಿಗೊಬ್ಬ ಮಗಳು ಕೀರುತಿಗೊಬ್ಬ ಮಗ ಎಂಬಂತೆ ಕಾವ್ಯಾ ಕುಣಾಲ್ ಇಬ್ಬರು ಮಕ್ಕಳನ್ನೂ ಬೆಳಸಿ ಗಂಡನಂತೆಯೆ ತಲೆಯನ್ನು ಫ್ರಿಡ್ಜಿನಂತೆ ಕೂಲಾಗಿ ಇಟ್ಟುಕೊಂಡಿದ್ದರು !

ಗೋವರ್ಧನ್ ರಾವ್ ಮುಂಜಾನೆ ಕಂಪನಿಗೆ ಹಾಜರಿ ಹಾಕಿದ ಮರುಕ್ಷಣವೆ ಅವರ ನಡಿಗೆ ಚುರುಕಾಗಿ ಬ್ರೇಕ್ ಹಾಕುತಿದ್ದದ್ದು ಘಮ್ಮೆನ್ನುವ ತಿಂಡಿ ತಿನಸುಗಳ ಪರಿಮಳ ಬೀರುತಿದ್ದ ಕ್ಯಾಂಟೀನ್ ಕಂಡಾಗ . ಎಂಟರ ಸಮಯಕ್ಕೆ ಇಡ್ಲಿ ವಡೆ , ಘಮ್ಮೆನ್ನುವ ಘೀರೋಸ್ಟ್ , ಉತ್ತಪ್ಪ ಪೂರಿ ಮುಂತಾದ ರುಚಿಯಾದ ಉಪಹಾರಗಳ ಬ್ಯಾಟಿಂಗ್ ನಡೆಸಿ ಮೇಲೆ ಹಬೆಯಾಡುವ, ಸ್ಟ್ರಾಂಗ್ ಮಲ್ನಾಡು ಕಾಫೀ ಸ್ವಾಹಾ ಮಾಡಿದ ನಂತರ ತಮ್ಮ ಸೀನಿಯಾರಿಟಿಗೆ ಗೌರವ ಕೊಡುವ ಜೂನಿಯರ್ಗಳ "ಗುಡ್ಮಾರ್ನಿಂಗ್" ಗಳಿಗೆ ಸಣ್ಣದಾಗಿ ನಕ್ಕರೆ, ಮಹಿಳಾಮಣಿಗಳ ಶುಭೋದಯಗಳು ಸಿಹಿ 'ಸಕ್ಕರೆ'ಯಾಗಿ ಅವರ ಮುಖವರಳಿ ಏನಾದರೊಂದು ರೀತಿಯಲ್ಲಿ ತಮಾಷೆ ಮಾತುಗಳಿಂದ ಅವರನ್ನು ಕಿಚಾಯಿಸಿ ಒಟ್ಟಿನಲ್ಲಿ ಹೆಲ್ತಿ ಫ್ಲರ್ಟಿಂಗ್ ಮಾಡುತ್ತಾ ಈ ರಸಿಕ ಶಿಖಾಮಣಿ ತಮ್ಮ ಕ್ಯಾಬಿನ್ನಿನಲ್ಲಿ ಪ್ರತಿಷ್ಠಾಪನೆಯಾಗುತ್ತಿದ್ದರು! ಇನ್ನು ಮಹಿಳಾ ಸಹದ್ಯೋಗಿಗಳ ಕಷ್ಟ ಸುಖಗಳ ಮೂಟೆ ಅದೇಕೋ ಏನೋ ಇವರ ಮುಂದೆ ಸಲೀಸಾಗಿ ಇಳಿದು ಬಿಡುವಂತ ಸ್ನೇಹಪರ ವ್ಯಕ್ತಿತ್ವ ಇವರದು ! ಸಣ್ಣಪುಟ್ಟ ಕಿರಿಕಿರಿಗಳನ್ನು ಅವರ ಪತಿರಾಯರಗಿಂತಲೂ ಚೆನ್ನಾಗಿ ಕಿವಿ ಕೊಟ್ಟು ಆಲಿಸಿ ನಗಿಸುವ ಕಲೆ ಅವರಿಗೆ ಕರಗತವಾಗಿತ್ತು ! " ಅಂಕಲ್ ನಿಮ್ಮ ಹತ್ತರ ಮಾತಾಡೋಕೆ ತುಂಬಾ ಖುಷಿಯಾಗುತ್ತೆ" ಎಂದು ಯಂಗ್ ಹುಡುಗಿಯರು ನಾಚುತ್ತ ಹೇಳಿದರೂ ಇವರಿಗೆ ಹೃದಯ ಬಿರಿದು ನದಿಯೊಂದು ಓಡಿದಂತಾ ಫೀಲಿಂಗು !

ಮನೆಯಲ್ಲಿ ಬೆಳೆದು ನಿಂತ ಮಗಳ ವಿವಾಹದ ಕಿಂಚಿತ್ತು ಯೋಚನೆ ಇಲ್ಲದೆ ತಾವೇ ಕಚೇರಿಯಲ್ಲಿ ಹುಡುಗಾಟಿಕೆ ತಮಾಷೆ ಮಾಡಿಕೊಂಡು ಕಾಲ ಕಳೆಯುತ್ತಿದ್ದವರಿಗೆ ನಿವೃತ್ತಿ ಎಂಬ ಬೇಸರದ ಭೂತದ ಜೊತೆ ಇರಬೇಕಾಯಿತು .

ಈ ಸಮಯದಲ್ಲಿ ಮಗಳು ಕಾವ್ಯ ಅವರಿಗೆ ಫೇಸ್ಬುಕ್ ಅಕೌಂಟ್ ಮಾಡಿಕೊಟ್ಟಾಗ ಅವರಲ್ಲಿ ಮತ್ತೆ ಹೊಸ ಚೈತನ್ಯ ಜಾಗೃತವಾಗಿ ಅವರ ಸ್ನೇಹಿತರ ಪಟ್ಟಿಯಲ್ಲಿ ಹೆಚ್ಚಾಗಿ ಮಹಿಳೆಯರ ದಂಡೆ ದಾಂಗುಡಿಯಿಟ್ಟು ಅವರ ಸ್ವಾರಸ್ಯಕರ ವಿನೋದಮಯ ಪೋಸ್ಟುಗಳು ಇಂಥ ಅಭಿಮಾನಿಗಳ ಲೈಕು ಕಾಮೆಂಟುಗಳ ಮಹಾಪೂರದಿಂದ ಕೊಚ್ಚಿಕೊಂಡು ಹೋಯಿತು !

ಸದಾ ಫೇಸ್ಬುಕ್ಕಿನಲ್ಲೇ ಮುಳುಗಿ ತಾವು ತಿಂದಿದ್ದು, ಕುಡಿದಿದ್ದು, ಮಡದಿ ಗೀತಾ ರೊಟ್ಟಿ ಸೀದಿಸಿದ್ದು, ಹಿರಿ ಮಗಳು ಕಾವ್ಯ ಕಾಫೀ ಮಾಡಿದ್ದು ಮುದ್ದಿನ ಮಗರಾಯ

ಕುಣಾಲ್ ಕರಾಟೆ ಪಟ್ಟು ಹಾಕಿ ತಮ್ಮನ್ನು ಬೀಳಿಸಿದ್ದು !ಎಂದೆಲ್ಲ ಆಕರ್ಷಕ ಪಟ/ ವೀಡಿಯೋಗಳ ಸಮೇತ ಮುಖಪುಸ್ತಕಕ್ಕೆ ರವಾನಿಸಿ ಅದಕ್ಕೊಂದು ನಾಲ್ಕು ಸಾಲು ಹಾಸ್ಯದ ಆಶುಕವನ ಗೀಚಿ ಬಹು ಜನಪ್ರಿಯರಾಗಿದ್ದರು .

ಇಂತಿರ್ಪ ಒಂದು ಭಾನುವಾರ ನಮ್ಮ ಕಾವ್ಯಾಳನ್ನು ನೋಡೋಕೆಹುಡುಗನ ಮನೆಯವರು ಬರ್ತಾರಂತೆ . ನಾನಂತೂ ಊಟಕ್ಕೆ ಬರಲು ಹೇಳಿದ್ದೀನಿ " ಉತ್ಸಾಹದಿಂದ ಗೀತಾ ಹೇಳಿದಾಗ ಗೋವರ್ಧನ ರಾಯರಿಗೆ ಕೊಂಚ ಗಾಬರಿ! ನಿವೃತ್ತಿ ಆದಾಗಿನಿಂದ ಪ್ರತಿ ಭಾನುವಾರ ಬೆಳಿಗಿನ ತಿಂಡಿ ಅಡುಗೆ ಕಾರ್ಯಕ್ರಮ ಅವರದೇ ಅದ್ದರಿಂದ,ಇನ್ನು ಈ ಭಾನುವಾರ ವಿಶೇಷ ಅತಿಥಿಗಳಿಗೆ ವಿಶೇಷವಾಗಿ ಮಾಡಬೇಕಲ್ಲ ಎನ್ನುವ ಚಿಂತೆಯಲ್ಲಿ

" ಅಯ್ಯೋ ಗೀತಾ! ಊಟಗೀಟದ ಪ್ರೋಗ್ರಾಮ್ ಏನೂ ಬೇಡ ಕಣೆ ! ನಾನು ಹುಡುಗನ್ನ ಫೇಸ್ಬುಕ್ಕಿನಲ್ಲೇ ನೋಡಿ ಇಂಟರ್ವ್ಯೂ ಮಾಡ್ತೀನಿ ಬಿಡು , ನಾನು ಅಲ್ಲೇ ಹೆಚ್ಚು ಸಿಗ್ತೀನಲ್ಲ " ಎಂದು ಭರವಸೆ ನೀಡಿದರು .

" ಸರಿ ಹೋಯ್ತು ಬಿಡಿ ! ನೀವೊಬ್ಬರು ನೋಡಿದ್ರೆ ಸಾಕಾ? ನಾವು ನೋಡೋದುಬೇಡ್ವಾ?" ಗೀತಾ ದನಿ ಎತ್ತಿದರು! ಕೈಯಿಂದಲೇ ಪಟಪಟ ಗೋಲ್ ಹೊಡೆಯುತ್ತ ವೀಡಿಯೋ ಗೇಮಿನಲ್ಲಿ ಮುಳುಗಿದ ಮಗರಾಯ " ಅಮ್ಮ ನಾವಷ್ಟೇ ನೋಡುವುದು ಬಾಕಿ !ಕಾವ್ಯ ತನ್ನ ಆಫೀಸಿನಲ್ಲೇ ಹುಡುಗನ್ನ ನೋಡಿ ಮೆಚ್ಚಿ ಬಿಟ್ಟಿದ್ದಾಳಲ್ಲ" ಎಂದು ಕಣ್ಣು ಮಿಟುಕಿಸಿದಾಗಅಕ್ಕನ ಮುಖ ನಾಚಿಕೆಯಿಂದ ಪಿಂಕ್ಪಿಂಕು!

ಗೋವರ್ಧನ್ ರಾಯರು ಪಿಟೀಲಿನಂತೆ ಮತ್ತೆ ರಾಗ ಎಳೆದರು " ಗೀತಾ! ಈ ಭಾನುವಾರ ಊಟದ ಪ್ರೋಗ್ರಾಮ್ ಚೇಂಜ್ಮಾಡಕ್ಕಾಗಲ್ವೇನೆ " ಎನ್ನುತ್ತಿರುವಂತೆ ಕಾವ್ಯ ಎಂದಿನಂತೆ ಅಪ್ಪನ ಸಹಾಯಕ್ಕೆ ಬಂದಳು " ಅಪ್ಪ ! ಡೋಂಟ್ ವರಿ, ನಿಖಿಲ್ ಮನೆಯವರು ತುಂಬಾ ಒಳ್ಳೆಯವರು, ನಮ್ಮ ಊಟದ ಬಗ್ಗೆ ನೀವು ಏನೋ ತೊಂದರೆ ತೊಗೋಬೇಡಿ, ಅಂತ ನನ್ನ ಇಷ್ಟದ ಪಾಲಕ್ ಪನೀರ್, ರೋಟಿ, ಗೋಭಿ ಮಂಚೂರಿ ಎಲ್ಲ ಅವರು ಹೊಸದಾಗಿ ಶುರು ಮಾಡಿದ ಹೋಟಲ್ನಿಂದ ತರ್ತಿದ್ದಾರಂತೆ! ನಾವೇನಿದ್ರೂ ಅವರಿಗೆ ಬರೀ ನೀರು ಕುಡಿಸೋದು ಅಷ್ಟೇ !" ಎಂದಾಗ ಅಪ್ಪನ ಮುಖದಲ್ಲಿ ಸಂತಸದ ಗೆರೆಗಳು. " ಆಹಾ !ನನ್ನ ಮುದ್ದು ಮಗಳೇ" ಎಂದು ಕಾವ್ಯಾಳ ಕೆನ್ನೆ ಹಿಂಡಿ ನೆಮ್ಮದಿಯಿಂದ ಫೇಸ್ಬುಕ್ ಮುಂದೆ ಕುಳಿತರು . ಕಾವ್ಯ ಅವರನ್ನು ಹಿಂಬಾಲಿಸಿ " ಅಷ್ಟೇ ಅಲ್ಲ ಅಪ್ಪ ! ನಿಖಿಲ್ ಅಪ್ಪ – ಅಮ್ಮ ಕೂಡಾ ಪ್ರಾಣಿ ಪ್ರಿಯರು!ಅದರಲ್ಲೂ ನಾಯಿ ಅಂದ್ರೆ ತುಂಬಾ ಇಷ್ಟ, ನಮ್ಮ ಜಾನಿ ಫೋಟೋ ಒಮ್ಮೆ ತೋರ್ಸಿದ್ದೆ ಅವರಿಗೆ

" ಅಬ್ಬಾ ! ಎಷ್ಟು ಮುದ್ದಾಗಿದೆ ಅಂತ ತುಂಬಾ ಮೆಚ್ಚಿಕೊಂಡು ಈ ಭಾನುವಾರ ಅದನ್ನ ನೋಡೋಕೆ ಖಂಡಿತ ನಿಮ್ಮನೆಗೆ ಬರತೀವಮ್ಮ ಅಂದ್ರು " ಮುದ್ದಾಗಿ ನುಡಿದಳು!

" ಹೌದೇನೆ ಕಾವ್ಯ! ಒಳ್ಳೆದಾಯಿತು ಬಿಡು. ನಾವು ಇನ್ ಮುಂದೆ ಊರಿಗೆ ಹೊರಟರೆ ನಮ್ಮ ಜಾನಿ ನಿಮ್ಮ ಅತ್ತೆ ಮಾವನ ಕೇರ್ ಆಫ್ !ಅವರು ಜಾನಿಯನ್ನ ನೋಡಲಿ ,ನಾವು ಹುಡುಗನ್ನ ನೋಡ್ತೀವಿ ! ಅಲ್ವೇನೋ ಜಾನಿ !"ಅವರ ತಮಾಷೆಗೆ ಅದಕ್ಕೂ ಅರ್ಥವಾದಂತೆ ಯಜಮಾನನ ಕಾಲು ಪ್ರೀತಿಯಿಂದ ನೆಕ್ಕಿತು! ಅಂತೂ ರಾಯರಿಗೆ ತಕ್ಕ ಬೀಗರೇ ಗಂಟು ಬಿದ್ದಿದ್ದರು ಅನ್ನಿ!

ಆ ಭಾನುವಾರ ಗೋವರ್ಧನ ರಾಯರ ಮನೆಯಲ್ಲಿ ಸಂಭ್ರಮ ಎದ್ದು ತೋರುತ್ತಿತ್ತು. ಮನೆ ಮಂದಿಯೆಲ್ಲಾ ಬೆಳಿಗ್ಗೆ ಬ್ರೆಡ್ಬಟರ್ ತಿಂದು ರೆಡಿಯಾಗಿ ಮಧ್ಯಾನದ ಬೂರಿ ಭೋಜನಕ್ಕಾಗಿ ಹೊಟ್ಟೆಯಲ್ಲಿ ಜಾಗ ಉಳಿಸಿಕೊಂಡಿದ್ದರು.

ಕಾರಿನ ಹಾರನ್ ಪ್ರೀಮ್ ಎಂದಾಗ ತಮ್ಮ ಅಚ್ಚುಮೆಚ್ಚಿನ ಹಸಿರು ಶರ್ಟ ಜೀನ್ಸ್ ಹಾಕಿ ಘಮಘಮಿಸುವ ಸೆಂಟು ಪೂಸಿಕೊಂಡು ಕಾವ್ಯಳಗಿಂತಲೂ ಒಂದು ಕೈ ಜೋರಾಗಿ ತಯಾರಾಗಿದ್ದ ಗೋವರ್ಧನ್ ರಾಯರು ಬೀಗರನ್ನು ಸ್ವಾಗತಿಸುತ್ತಾ ಸುಂದರ ಭಾವಿ ಬೀಗಿತ್ತಿಗೆ ಲಘು ಹ್ಯಾಂಡ್ಶೇಕ್ ಕೊಡುತ್ತ ಮೈ ಮರೆತಿದ್ದವರನ್ನು ಗೀತಾ ಅವರೆ ಚಿವುಟಿ ಎಚ್ಚರಿಸಬೇಕಾಯಿತು. ನಿಖಿಲ್ ಕಾವ್ಯ ಕಣ್ಣಲ್ಲೇ ಮಾತನಾಡುತ್ತ ಕುಳಿತರೆ, ಅಂದು ಸ್ನಾನಾದಿಗಳನ್ನು ಮಾಡಿಕೊಂಡು ಪೌಡರ್ ಮೆತ್ತಿಕೊಂಡು ಜಾನಿ ಕಾವ್ಯಳ ಅತ್ತೆ ಮಾವರ ಅಕ್ಕರೆ ಪ್ರೀತಿಗಳನ್ನು ಅನುಭವಿಸುತ್ತ, ತನಗಾಗಿ ತಂದ ರುಚಿಯಾದ ಡಾಗ್ ಘುಡ್ಡುಗಳನ್ನು ಚಪ್ಪರಿಸಿ, ಫೋಟೋ ಶೂಟ್ ಮಾಡಿಸ್ಕೊಂಡು ಮೆರೆಯಿತು!

ಮೊದಲ ಬಾರಿ ತಮ್ಮ ಭಾವಿ ಅಳಿಯನನ್ನು ಕೂಲಂಕುಷವಾಗಿ ಕಣ್ಣ ತುಂಬಾ ನೋಡಿದ ಗೀತಾ ಗಂಡನ ಬಳಿ ಪಿಸುಗುಟ್ಟಿದರು "ರೀ ! ಹುಡುಗ ಸ್ಮಾರ್ಟ್ ಇದ್ದಾನೆ ಅಲ್ವಾ? " ಹೌದು ಕಣೆ ನಿಜಕ್ಕೂ ಸೂಪರ್ !ಎಂದು ನಿಖಿಲ್ ಅಮ್ಮನೆಡೆಗೆ ನೋಡುತ್ತಾ ಉದ್ಗರಿಸಿದಾಗಗೀತಾ ಗುರುಗುಟ್ಟಿ " ರೀ ! ಹುಡುಗ ಕುಳಿತಿರೋದು ಈ ಕಡೆಗೆ ಸರಿಯಾಗಿ ನೋಡ್ರಿ " ಹಾಂ ! ಹೌದು ಹೌದು ಅವನ ಬಗ್ಗನೇ ನಾನೂ ಹೇಳಿದ್ದು , ಅಮ್ಮ ಚಂದ, ನಿಖಿಲ್ ಅಮ್ಮನ ಹಾಗೆ ಥೇಟ್ "ಹಲ್ಕಿರಿದಾಗ ಗಂಡನ ರಸಿಕ ಬುದ್ದಿಗೆ ಒಂದು ಏಟ್ ಕೊಡುವಷ್ಟು ಸಿಟ್ಟೇರಿತು !

ಕುಣಾಲ್ ಬಂದವರಿಗೆಲ್ಲ ನೀರಿನ ಬದಲು ಕೋಕ್ ನೀಡಿ (ಭೋಜನಕ್ಕಿಂತಲೂ ಮೊದಲೇ) ಅತಿಥಿಗಳ ಹೊಟ್ಟೆಯ ಗ್ಯಾಸ್ ಖಾಲಿ ಮಾಡಿಸಿದರೆ, ಗೀತಾ ಅಡುಗೆ ಕೆಲಸ ತಪ್ಪಿದ್ದ ಖುಷಿಯಲ್ಲಿ ಬೀಗರೆ ತಂದ ಸ್ಪೆಷಲ್ ಖಾದ್ಯಗಳನ್ನು ಬಡಿಸಲು ತಟ್ಟೆ ಜೋಡಿಸಿಕೊಳ್ಳತೊಡಗಿದರು !

ಅವರೆಲ್ಲರ ಮಾತು ಕಥೆ ವೃತ್ತಿ –ಪ್ರವೃತ್ತಿ ಹವ್ಯಾಸಗಳಿಂದ ಸಾಗಿ ಫೇಸ್ಬುಕ್ಕಿನೆಡೆಗೆ ಹೊರಳಿತು "ಅಪ್ಪ ಫೇಸ್ಬುಕ್ಕಿನಲ್ಲಿ ಸದಾ ಆಕ್ಟೀವ್ . ಅವರ ಪೋಸ್ಟಳಿಗೆ ಸಾವಿರ ಲೈಕು ಐನೂರು ಕಾಮೆಂಟು!" ಕಾವ್ಯ ಹೆಮ್ಮೆಯಿಂದ ಅಪ್ಪನ ಕೀರ್ತಿ ಪತಾಕೆಯನ್ನು ಹಾರಿಸಿದಾಗ ಬೀಗರು ಮೆಚ್ಚುಗೆಯಿಂದ ಕಣ್ಣರಳಿಸಿದರೆ ಇಂಥ ಫೇಸ್ಬುಕ್ ಸೆಲೆಬ್ರಿಟಿಯ ಅಳಿಯ ತಾನಾಗುತ್ತಿರುವುದು ತನ್ನ ಅದೃಷ್ಟವೇ ಸರಿ ಎಂದು ನಿಖಿಲ್ ಬೀಗಿ ಭಾವಿ ಮಾವನವರ ಕಡೆಗೆ ಧನ್ಯನಾಗಿ ನೋಡಿದ !

ಗೋವರ್ಧನ್ ರಾಯರಾಗಲೇ ತಮ್ಮ ಫೇಸ್ಬುಕ್ ಸ್ಟೇಟಸ್ಗಳನ್ನು ಚೆಕ್ ಮಾಡುತ್ತಾ

ನಿಖಿಲ್ ಪಟವನ್ನು ಅಪಲೋಡ್ ಮಾಡಿ " ಹೇಗಿದ್ದಾನೆ ನಮ್ಮ ಕಾವ್ಯಾಳ ಗೆಳೆಯ ?

ನಮ್ಮ ಭಾವಿ ಅಳಿಯ!

ತನ್ನ ಪ್ರೀತಿಯಲ್ಲೇ

ಅರಳಿಸಿದ್ದಾನೆ ಮಗಳ ಕಳೆಯ

ಹಾರಿಸಿಕೊಂಡು ಹೋಗುವನು

ನಮ್ಮನೆಯ ಮುದ್ದಿನ ಗಿಳಿಯ !

ಎಂದು ಹನಿಗವನ ಗೀಚಿ ಲೈಕ್ ಕಮೆಂಟುಗಳ ದಾರಿ ಕಾಯುತ್ತಾ ಕುಳಿತೆ ಬಿಟ್ಟರು! ■

# ಜಾನಕಿ ನಗಲಿಲ್ಲ

**● ಸತ್ಯಬೋಧ**

ಜಾನಕಿ ನನ್ನ ನಾದಿನಿ; ನನ್ನ ಹೆಂಡತಿಯ ತಂಗಿ. ಇಪ್ಪತ್ತರ ಯುವತಿ. ವಯಸ್ಸಿಗೆ ತಕ್ಕ ಅಂದ ಮುಖದಲ್ಲಿತ್ತು. ಅಂದು ಒಂದು ರಾತ್ರಿ ಎಂಟರ ಸಮಯ. ಸೂರ್ಯ ಇಲ್ಲ. ಚಂದ್ರ ಇನ್ನೂ ಬಂದಿಲ್ಲ. ಕರೆಂಟ್ ಬಂದು ಹೋಗುತ್ತಿತ್ತು. ಬೀದಿ ದೀಪಗಳು ಅಷ್ಟೆ. ಸಿಗ್ನಲ್ ಇರಲಿಲ್ಲ. ಟಿವಿ ಬಂದ್ ಇತ್ತು. ನಾನು ನನ್ನ ಹೆಂಡತಿ ಟಿವಿ ಮುಂದೆ ಒಬ್ಬರ ಮುಖ ಒಬ್ಬರು ನೋಡುತ್ತ ಮೌನವಾಗಿ ಕುಳಿತಿದ್ದೆವು. ಮಳೆ ಇಲ್ಲದಿದ್ದರೂ ಮಳೆ ಮುನ್ಸೂಚನೆಯಾಗಿ ಗುಡುಗು ಮಿಂಚು ಬರುತ್ತಿತ್ತು. ಇಬ್ಬರ ಮುಖದಲ್ಲೂ ಆತಂಕ. ಹೊಸಪೇಟೆಗೆ ಹೋಗಿದ್ದ ಜಾನಕಿ ಇನ್ನೂ ಬಂದಿರಲಿಲ್ಲ. 'ಏಕೆ ತಡವಾಯ್ತೋ, ಮಳೆ ಬಂದರೆ..'

ಏನೂ ತೋಚದೆ ಹೀಗೆ ಕಾಯುತ್ತಾ ಇರುವಾಗ ದಬ ದಬ ಬಾಗಿಲು ಬಡಿಯುವ ಶಬ್ದ. ಅದು ಬಾಗಿಲನ್ನೇ ಒಡೆಯುವಂತಿತ್ತು. ನಮ್ಮನ್ನು ಬೆಚ್ಚಿ ಬೀಳಿಸಿತ್ತು.

'ಯಾರಿವರು?' ಎದ್ದು ಧಾವಿಸಿ ಬಾಗಿಲು ತೆಗೆಯಬೇಕು ಅಂದುಕೊಂಡೆ. ಕಣ್ಣು ಕೋರೈಸುವ ಮಿಂಚು. ಮತ್ತೆ ಕರೆಂಟ್ ಹೋಯ್ತು. ನಾಯಿ ಬೆನ್ನಟ್ಟಿ ಬಂದುದರಿಂದ ಯಾರೋ ರಕ್ಷಣೆಗೆ ಧಾವಿಸಿರಬಹುದು ಅನಿಸಿತು.

'ಯಾರು?' ಎಂದೆ ಬಾಗಿಲು ತೆಗೆಯದೆ.

'ನಾನು ಭಾವಾ'

'ಅರೇ ಜಾನಕಿ' ಅನ್ನುತ್ತಾ ಬಾಗಿಲು ತೆಗೆದೆ. 'ಏಕೇ ಏನಾಯ್ತು?' ಕೇಳಬೇಕು ಅನಿಸಿತು. ಏಕೆಂದರೆ ಜಾನಕಿ ಗಡ ಗಡ ನಡುಗುತ್ತಿದ್ದಳು.

ಜಾನಕಿ ಒಳಗೆ ಬಂದವಳೇ ಗಾಬರಿ ಮತ್ತು ಆತುರದಿಂದ 'ಭಾವ, ಬಾಗಿಲು ಹಾಕಿ' ಅಂತ ಕಿರುಚಿದಳು. ಒಳಗೆ ಧಾವಿಸಿದ ಜಾನಕಿ ಪೂರ್ತಿ ಹೆದರಿ ಹೋಗಿದ್ದಳು

'ಏನೇ ಇದು?'

'ಮೊದಲು ಬಾಗಿಲು ಹಾಕಿ' ಕೂಗಿದಳು.

'ಏಕೆ. ಏನಾಯ್ತು?', ಬಾಗಿಲು ಹಾಕುತ್ತಾ ಕೇಳಿದೆ. ನಾನೂ ಹೆದರಿದ್ದೆ.

ಒಳಗೆ ನಡೆದಳು. ಇನ್ನೂ ಭಯದಿಂದ ನಡುಗಿದ್ದಳು. ಹೆಂಡತಿಯೂ ಅವಳ ಸ್ಥಿತಿನೋಡಿ 'ಏಕೇ ಏನಾಯ್ತು ಸುಧಾರಿಸಿಕೋ' ಎಂದು ಅಕ್ಕರೆಯಿಂದ ಬೆನ್ನು ನೇವರಿಸಿದಳು.

'ಅಕ್ಕ..' ಅವಳ ಧ್ವನಿ ಅಳುವಾಗಿತ್ತು. 'ಅವನಾವನೋ ಫಾಲೋ ಮಾಡುತ್ತಿದ್ದಾನೆ' ಎಂದಳು ತೊದಲುತ್ತ.

'ಯಾವನೇ ಅವನೂ', ಬಾಗಿಲು ತೆಗೆದು ನೋಡಿದರೆ ಯಾರೂ ಇಲ್ಲ.

'ಏನಾಯ್ತೇ?', ಕೇಳಿದಳು.

'ಅಕ್ಕಾ, ನಾನು ಬಸ್ ಸ್ಟಾಂಡಿನಲ್ಲಿ ಬಸ್ಸಿಗೆ ಕಾಯುತ್ತಾ ಇರುವಾಗ.' ಎಂದು ಎಲ್ಲವನ್ನು ಚುರುಕಾಗಿ ವಿವರಿಸಿದಳು.

‘ದುರ್ಗದ ಬಸ್ ಬಂತು. ಅದರಿಂದ ಇಳಿದ ಒಬ್ಬ ನಮ್ಮ ಬಸ್ ಸ್ಟಾಂಡಿಗೆ ಬಂದ. ‘ಆತನೂ ಮುನಿರಾಬಾದ್ ಕಾಲೊನಿಗೆ ಹೋಗಬೇಕಿತ್ತೋ ಏನೋ’..

ಬಸ್ ಬರುವ ದಿಕ್ಕಿನತ್ತ ನೋಡುತ್ತ ನನ್ನ ಪಾಡಿಗೆ ನಿಂತಿದ್ದೆ. ಕಾಯುವ ಬಸ್ ಸದಾ ಲೇಟ್. ಅಕಸ್ಮಾತ್ ಹಿಂದಿರುಗಿ ನೋಡಿದೆ. ಮತ್ತೆ ಆತನೇ ಕಂಡ. ನನ್ನತ್ತಲೇ ನೋಡುತ್ತಿದ್ದ.

‘ಯಾರೋ. ಅದೂ ವಯಸ್ಸಾದಾತ..’ ಎಂದು ಕೊಳ್ಳುತ್ತಿರುವಾಗ ನನ್ನನ್ನು ಮಾತಾಡಿಸಲು ನನ್ನ ಕಡೆಯೇ ಆತ ಬರುವಂತೆ ಕಂಡಿತು. ಯಾವ ಹುತ್ತದಲ್ಲಿ ಯಾವ ಹಾವೋ ಯಾವ ಗಂಡಸು ಹೇಗೋ.

ಸಹಜ ಭಯ. ಬ್ರೆಡ್ ಮರೆತಿದ್ದೆ  ಅವನ ನೋಟ ತಪ್ಪಿಸಿಕೊಳ್ಳಲು ಅದೇ ನೆಪ ಆಗಿ  ಅಲ್ಲಿಯೇ ಇದ್ದ  ಬೇಕರಿಗೆ ಬ್ರೆಡ್ ಕೊಳ್ಳಲು ಹೋದೆ.

ಬ್ರೆಡ್ ತೆಗೆದುಕೊಂಡು ಮತ್ತೆ ಹಿಂತಿರುಗಿ ನೋಡಿದರೆ ಆತನೂ ನನಗಾಗಿ ಎನ್ನುವಂತೆ ಅಲ್ಲಿಯೇ ಸ್ವಲ್ಪ  ದೂರದಲ್ಲಿ ನಿಂತಿದ್ದ. ‘ಅವನು ನನ್ನನ್ನೇ ಹಿಂಬಾಲಿಸುತ್ತಿದ್ದಾನೆ’ ಎನ್ನುವುದು ಈಗ ಖಾತ್ರಿಯಾಯ್ತು. ಬಸ್ ಸ್ಟಾಂಡಿನತ್ತ ಸರ ಸರ ಧಾವಿಸಿದೆ. ಸದ್ಯ ಆಗಲೇ ಬಸ್ ಬಂತು. ಕಾಯುತ್ತಿದ್ದ ಜನರ ಮಧ್ಯ ಸೇರಿ ನಾನು ತಕ್ಷಣ ನುಗ್ಗಿ ಬಸ್ ಹತ್ತಿ ಲೇಡೀಸ್ ಸೀಟಿನಲ್ಲಿ ಕುಳಿತು ದೊಡ್ಡ ಅಪಾಯದಿಂದ ಪಾರಾದಂತೆ ನಿರಾಳ ಹೊಂದಿದೆ.

ಟಿಕೆಟ್ ಕೊಡುತ್ತಾ ಕಂಡಕ್ಟರ್ ಬಂದರು. ಟಿಕೆಟ್ ತೆಗೆದುಕೊಂಡು ಅಕಸ್ಮಾತ್ ಹಿಂತಿರುಗಿ ನೋಡಿದರೆ ಮತ್ತೆ ಆತ, ನನ್ನತ್ತಲೇ ನೋಡುತ್ತಾ ಕುಳಿತಿದ್ದ. ಭೇತಾಳದಂತೆ ಬೆನ್ನು ಹತ್ತಿದ ಎನ್ನಿಸಿತು.  ನನ್ನ ಹಿಂದಿನ  ಸೀಟುಗಳಲ್ಲಿ  ಹೆಂಗಸರು ಕುಳಿತಿದ್ದು ಪಕ್ಕದಲ್ಲಿ ಕೆಲವರು ನಿಂತಿದ್ದರು. ಧೈರ್ಯ ತಂದುಕೊಂಡೆ.

ಡ್ಯಾಮ್ ಬಸ್ ಸ್ಟಾಪ್ ಬಂತು. ಆತ ಇಳಿಯಲಿಲ್ಲ. ಮುನಿರಾಬಾದ್ ಕಾಲೊನಿಗೇ ಇರಬೇಕು ಎಂದುಕೊಂಡೆ ಕಾಲೊನಿ ಬಸ್ ಸ್ಟಾಪ್ ಬರುವುದನ್ನೇ ಕಾಯತ್ತಾ ಬಸ್ ಸ್ಟಾಪ್ ಬರುತ್ತಿರುವುದು ನೋಡಿ ಮುಂದಿನ ಬಾಗಿಲಿಗೆ ಬಂದು  ಬಸ್ ನಿಲ್ಲುತ್ತಲೇ ಅವಸರದಿಂದ ಸರ ಸರ ಇಳಿದು ಇನ್ನೇನು ಅವನಿಂದ ತಪ್ಪಿಸಿಕೊಂಡೆ ಎನ್ನಿಸಿ ಬೇಗ ಮನೆ ಸೇರಿಕೊಳ್ಳಬೇಕು ಎಂದು ಇನ್ನೂ ಬಸ್ ಇಳಿಯುತ್ತಿದ್ದವರತ್ತ ನೋಡಿದರೆ ಅವನೂ ಬಸ್ಸಿನಿಂದ ಇಳಿಯುತ್ತಿರುವುದು ಕಂಡು ಎದೆ ಧಸಕ್ ಎಂದಿತು. ಅದು ಕಾಲೋನಿ, ಜನಸಂಚಾರವಿಲ್ಲ. ಮುಖ್ಯ ರಸ್ತೆಯಲ್ಲಿ ನಡೆದರೆ ಅವನು ಖಂಡಿತ ಹಿಂಬಾಲಿಸುತ್ತಾನೆ. ಏನೂ ಬೇಕಾದರೂ ಆಗಬಹುದು ಎಂದು ಅಲ್ಲಿ ಸುಂದರಮ್ಮನ ಮನೆ ದಾರಿ ಹಿಡಿದು ಅಲ್ಲಿ ಮರದ ಹಿಂದೆ ಅಡಗಿದೆ. ಅವನು ಅದೇ ದಾರಿ ಹಿಡಿದು

ನನ್ನನ್ನು ನೋಡದೇ ಮುಂದೆ ಸಾಗಿದ್ದು ಕಂಡು ಓಡಿ ಬಂದೆ’ ಅಂದು ದೀರ್ಘವಾಗಿ ಅವಳ ಆತಂಕದ ಕ್ಷಣಗಳನ್ನು ತೊದಲುತ್ತಾ ವಿವರಿಸಿದಳು.

ಅವನು ಮಧ್ಯ ವಯಸ್ಸಿನವನು. ಆದರೂ ಹುಡುಗು ಬುದ್ಧಿ. ಹುಡುಗಿ ಚನ್ನಾಗಿ ಕಂಡಿದ್ದಾಳೆ ಅಂತ ಬೆನ್ನು ಹತ್ತಿರಬೇಕು. ‘ಸರಿಬಿಡು. ಈಗೀಗ ಮಧ್ಯ ವಯಸ್ಸಿನೋರು ಪೋಲಿಗಳಾಗುತ್ತಿದ್ದಾರೆ. ಸುಧಾರಿಸಿಕೊಂಡು ಬಾ ಊಟ ಮಾಡೋಣ’ ಎನ್ನುತ್ತಿರುವಾಗಲೇ  ಬಾಗಿಲು ಬಡಿದ ಶಬ್ದ.

‘ಭಾವಾ, ಅವನೇ’, ಬೆಚ್ಚಿ ಬೆದರಿ ಕೂಗಿದಳು ನಾದಿನಿ.

ನನಗೂ ಆತಂಕವಾಯ್ತು. 'ಕುಡಕನಿರಬೇಕು. ಅವಳು ಮನೆ ಪ್ರವೇಶಿಸಿದ್ದು ನೋಡಿ  ಫಾಲೋ ಮಾಡಿದ್ದಾನೆ. ಬಾಗಿಲು ತೆಗೆದು ಬೈದು ಕಳಿಸಬೇಕು' ಅಂದುಕೊಂಡೆ.

'ಆದರೆ ಅವನು ರೌಡಿ ಆಗಿದ್ದು ಕೈಲಿ ಚಾಕು ಇದ್ದರೆ' ಎನ್ನುವ ಯೋಚನೆಯಿಂದ ಸ್ವಲ್ಪ ಭಯ ಬಂದು 'ಪೋಲೀಸ್‌ಗೆ ಕರೆ ಮಾಡಲೇ?' ಎನ್ನಿಸಿದರೂ. 'ಅವನು ಮತ್ತಾರೋ ಆಗಿದ್ದರೆ? ಎಂಬ ಯೋಚನೆಯೂ ಸುಳಿದು ಫೋನ್ ಮಾಡಲಿಲ್ಲ

ಮತ್ತೆ ಬಾಗಿಲು ಬಡಿದ ಶಬ್ದ. ನಾದಿನ ಹೆದರಿ ಗುಬ್ಬಚ್ಚಿಯಾಗಿದ್ದಳು. ಹೆಂಡತಿ ಮಾತ್ರ ಒನಕೆ ಓಬವ್ವನಂತೆ ಕೈಲಿ ಒಗೆ ತಗೆದುಕೊಂಡು ಬಂದು 'ಅವನೇನಾದರೂ ರೌಡಿ ಆಗಿ ನಿಮ್ಮ ಮೇಲೆ ಕೈ ಮಾಡಲು ಬಂದರೆ ಇದೇ ಒನಕೆಯಿಂದ ಅವನನ್ನು ಜಜ್ಜಿ ಬಿಡುತ್ತೇನೆ' ಎನ್ನುವಂತೆ ನನ್ನ ಹಿಂದೆ ನಿಂತಳು. ಕಿಟಕಿಯಿಂದ ಯಾರೆಂದು ತಿಳಿಯುವುದು ಎಂದು ಕಿಟಕಿ ಬಾಗಿಲು ತೆಗೆದರೆ ಹೊರಗೆ ಅಂಧಕಾರ. ಮಳೆ ಗುಡುಗಿಗೆ ಬೀದಿ ದೀಪಗಳು ಇರಲಿಲ್ಲ. ಮಳೆ ಹನಿಯಲು ಆರಂಭಿಸಿತ್ತು.

ಆದದ್ದಾಗಲಿ ಎಂದು ಧೈರ್ಯದಿಂದ ಬಾಗಿಲು ತೆಗೆದರೆ ಅವನು ಒಳಗೆ ನುಗ್ಗೇ ಬಿಟ್ಟ. ಹಿಂದಕ್ಕೆ ಸರಕ್ಕನೆ ಸರಿದೆ. ಕೈಯಲ್ಲಿ  ಬ್ಯಾಗ್. ಮೈಯಲ್ಲ ತೊಯ್ದಿತ್ತು. ತಕ್ಷಣ ಗುರುತು ಸಿಕ್ಕಿತು. 'ಅರೇ ನೀನಾ? ಇದೇನೋ' ಎಂದೆ.

'ಅದೇನು ನನ್ನನ್ನು ಹೊಡೆಯೋರ ತರಹ ನಿಂತಿದ್ದೀರಿ? ನೀನು ಕೈಲಿ ಕೋಲು. ಅಕ್ಕನ ಕೈಲಿ ಒನಕೆ!  ಏನಾಯ್ತು?' ಎಂದ ಗೊಂದಲಗೊಂಡು. ಬಂದವನು ಬೇರಾರೂ ಅಲ್ಲ. ನನ್ನ ಗೆಳೆಯ ಬೋಧಣ್ಣ.

'ನಾದಿನಿ ಹೊಸಪೇಟೆಗೆ ಹೋಗಿದ್ದಳು. ಅದಾವನೋ ಅವಳನ್ನು ಬಸ್ ಸ್ಟಾಂಡಿನಲ್ಲಿ ನೋಡಿ ಅವಳನ್ನು ಪಾಲೋ ಮಾಡಿಕೊಂಡು ಇಲ್ಲಿಗೂ ಬಂದನಂತೆ. ಬಾಗಿಲು ಬಡಿದದ್ದು ಅವನೇ ಎಂದು ಆ ಕುಡುಕ ಕಾಮಣ್ಣ ಏನಾದರೂ ಒಳಗೆ ಬಂದು ಗಲಾಟೆ ಮಾಡಿದರೆ ಯಾವುದಕ್ಕೂ ಇರಲಿ ಎಂದು ಕೈಲಿ ಕೋಲು ಹಿಡಿದು ಬಾಗಿಲು ತೆಗೆದೆವು. ಒಳಗೆ ಬಾ. ಅವನೇನಾದರೂ ಬಂದಾನು' ಎನ್ನುತ್ತಿರುವಾಗಲೇ ನಾದಿನಿ ನೋಡಿ 'ಭಾವಾ ಇವನೇ' ಎಂದು ಕೂಗಿದಳು.

'ಏನೋ ಇದು?' ಎಂದೆ ಅವನನ್ನು ನೋಡಿ.

'ಹೌದಪ್ಪ ದುರ್ಗದ ಬಸ್ಸಿಗೆ ಬಂದೆ. ನಿನಗೆ ಫೋನ್ ಮಾಡೋಣ ಎಂದರೆ ಮೊಬೈಲ್ ಡೆಡ್ ಆಗಿತ್ತು. ಅಡ್ರಸ್ ಇಲ್ಲ. ದೂರದಲ್ಲಿ ನಿನ್ನ ನಾದಿನಿ ಕಂಡಳು. ಆದರೂ ಹೌದೋ ಅಲ್ಲೋ ಅನುಮಾನ. ಒಂದೆರಡು ಸಲ ನೋಡಿದ್ದು. ಅದೂ ರಾತ್ರಿ. ಬಸ್ಸನ್ನು ಹತ್ತಿ ಅವಳನ್ನೇ ಹಿಂಬಾಲಿಸುವುದು ಎಂದುಕೊಂಡು ಬಸ್ ಹತ್ತಿ ಫಾಲೋ ಮಾಡಿದೆ. ಬಸ್ ಇಳಿದು ಕ್ಷಣದಲ್ಲಿ ಮಾಯವಾಗಿದ್ದಳು. ಇಲ್ಲೇ ನಿನ್ನ ಮನೆ ಇರಬೇಕು ಎಂದು ಅಲ್ಲಿ ಇಲ್ಲಿ ಕೇಳಿದೆ. ಅಲ್ಲಿ ಅಂಗಡಿಯವನು ನಿನ್ನ ಮನೆ ತೋರಿಸಿದ' ಎಂದ ಬೋಧಣ್ಣ

'ಏನಮ್ಮ ನಾನು. ಅವತ್ತು ನಿನ್ನ ನೋಡಿದ್ದೆ.; ನಿನಗೆ ಗುರುತು ಸಿಗದೆ ನನ್ನನ್ನು ಪುಂಡ ಮಾಡಿಬಿಟ್ಟಿ. ಸಧ್ಯ ನಿನ್ನ ಅಕ್ಕ ತಲೆಗೆ ಹೊಡೆಯಲಿಲ್ಲ. ಬಚಾವಾದೆ' ಎಂದೆ ನಗುತ್ತ.

ನಾವೆಲ್ಲ ನಕ್ಕೆವು. ಜಾನಕಿ ನಗಲಿಲ್ಲ. ಅವಳೇ ನಗೆಯ ವಸ್ತುವಾಗಿದ್ದಳು. ■

# ಸಣ್ಣ ರಸೀತಿ ತಂದಿಟ್ಟ ದೊಡ್ಡ ಫಜೀತಿ

**● ಅರವಿಂದ. ಜಿ.ಜೋಷಿ**

ಶನಿವಾರ –ಭಾನುವಾರ ಬಂತೆಂದರೆ ಸಾಕು, ಶ್ರೀನಿವಾಸ್ ಅಲಿಯಾಸ್ ಶೀನಿ ಎಂದಿಗಿಂತ ಲೇಟಾಗಿ ಏಳುವುದನ್ನು ರೂಢಿಸಿಕೊಂಡಿದ್ದ.ಆ ದಿನದ ಶನಿವಾರವೂ ಅಷ್ಟೇ, ಬೆಳಗಿನ ಎಂಟೂವರೆ ಆಗಿದ್ದರೂ ಇನ್ನೂ ಮುಸುಕೆಳೆದುಕೊಂಡು ಗೊರಕೆ ಹೊಡೆಯುತ್ತಿದ್ದ.ಆತನಿದ್ದ ರೂಮಿಗೆ ಯಾವುದೋ ಕೆಲಸಕ್ಕೆ ಬಂದಿದ್ದ ಪತ್ನಿ ಪಮ್ಮೀ, ಈತ ಮಲಗಿರುವುದು ಕಂಡು "ರಜಾ ಬಂತೂಂದ್ರೆ ಮಲಗೊದು ಬಿಟ್ಟು ಬೇರೆ ಕೆಲಸಾನೇ ಇಲ್ವಾ?.. ನೊಡಿ ಟೈಂ ಎಂಟುವರೆ ಆಗ್ತಾ ಬಂದಿದೆ, ಎದ್ದೇಳಿ ಸಾಕು" ಎನ್ನುತ್ತ ಆತನ ಹೊದಿಕೆ ಕೊಂಚ ಎಳೆದಳು. "ಏಯ್ ಸುಮ್ನೆ ಹೋಗು.ಡಿಸ್ಟರ್ಬ ಮಾಡ ಬೇಡ".. ಎಂದು, ಲೊಚಗುಡುತ್ತ ಶೀನ ಮತ್ತೆ ಮುಸುಕೆಳೆದುಕೊಂಡ. ಅಷ್ಟರಲ್ಲಿ ಪಮ್ಮಿಯ ಸೆಲ್ ಫೋನ್ ರಿಂಗಣಿಸಿತು. ಎತ್ತಿ ನೊಡಿದಳು, ತಾನು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ "ವನಿತಾ ಸಮಾಜದ" ಅಧ್ಯಕ್ಷೆ ಕಾಂತಾಮಣಿ ಯಿಂದ ಬಂದಿತ್ತು. "ಹಲ್ಲೋ.. ಗುಡ್ ಮಾರ್ನಿಂಗ್ ಮೇಡಂ, ಕಾಫೀ ಆಯ್ತಾ?..ಏನು ಇಷ್ಟು ಬೆಳಿಗ್ಗೆನೆ ಫೋನ್ ಮಾಡಿದೀರಿರಲ್ಲ..?" ಎನ್ನುವ ಪ್ರಶ್ನೆ ಹಾಕಿದಾಗ ಆ ಬದಿಯಿಂದ "ಏನಿಲ್ಲಾ ಪ್ರಮೀಳಾ..ನಾಳಿನ ಸಮಾಜದ ವಾರ್ಷಿಕೋತ್ಸವ ಸಮಾರಂಭದ ಬೆಳಗಿನ ಕಾರ್ಯಕ್ರಮಕ್ಕೆ ಲೈಟ್ ಕ್ರೀಂ ಕಲರ್‌ನ ಜರತಾರಿ ಸೀರೆ, ಸಂಜೆಗೆ ಮೆರೂನ್ ಕಲರ್ ಸೀರೆ ಉಟ್ಟುಕೊಂಡು ಬನ್ನೀ ಅಂತ ಜ್ಞಾಪಿಸಿದೆ" ಎನ್ನುವ ಧ್ವನಿ ತೂರಿ ಬಂದಿತು.ಆಗ ಪಮ್ಮೀ "ಹೂಂ ಮೇಡಂ ನೆನಪಿದೆ ಅದೇ ಕಲರ್ ನ ಸೀರೆ ಉಟ್ಟುಕೊಂಡು ಬರ್ತೇನೆ " ಎಂದು ಕಾಲ್ ಕಟ್ ಮಾಡಿದಳು.ಇತ್ತ ಎಚ್ಚರವಾಗಿದ್ದು ಮುಸುಕೆಳೆದು ಮಲಗಿದ್ದ ಅವಳ ಪತಿರಾಯ "ಬೆಳಿಗ್ಗೆ ಬೆಳಿಗ್ಗೆ ಬೇರೆ ಕೆಲಸಾ ಇಲ್ವಾ.." ಎಂದು ಗೊಣಗುತ್ತಿದ್ದವನನ್ನು ಅರ್ಧಕ್ಕೆ ತಡೆದ ಪಮ್ಮೀ "ರ್‍ರೀ..ಗಂಡಸರಿಗ್ಯಾಕೆ ಗೌರಿ ದು:ಖ?..ಎಂದೆನ್ನುತ್ತಿದ್ದವಳು ಏನೋ ಜ್ಞಾಪಿಸಿ ಕೊಂಡು "ರ್‍ರೀ.. ಎಂಟು ದಿನದ ಹಿಂದೆ ನನ್ನವು ನಾಲ್ಕು ಜರತಾರಿ ಸೀರೆ, ಬ್ಲೌಸ್, ನಿಮ್ಮ ಎರಡು ಪಂಚೆ, ಪ್ಯಾಂಟೂ ಶರ್ಟಗಳನ್ನ ವಾಷಿಂಗ್‌ಗೆ ಕೊಟ್ಟದ್ರಲ್ಲಾ, ಅದರದು ಇಂದು ಡ್ಯೂ ಡೇಟ್ ಇದೆ ಅಂತ ಹೇಳಿದ್ರಲ್ಲಾ ಮರೀದೆನೆ ಹೋಗಿ ತಗೊಂಡು ಬನ್ನಿ, ನಾಳೆ ನಮ್ಮ ಸಮಾಜದ ಫಂಕ್ಶನ್‌ಗೆ ಉಟ್ಕೊಂಡು ಹೋಗಬೇಕು" ಎಂದಳು. ಹಾಸಿಗೆಯಿಂದ ಎದ್ದು ಬಾತ್ ರೂಮಿಗೆ ಹೋಗುತ್ತಿದ್ದ ಶೀನ "ಅಯ್ಯೋ..ನೆನಪಿದೆ ಬಿಡೆ, ಆ ಅಂಗಡಿ ಓಪನ್ ಆಗೋದೇ ಹನ್ನೊಂದಕ್ಕೆ ಹೋಗಿ ತಂದುಕೊಡ್ತನೆ ಬಿಡು" ಎಂದ.

ಕೆಲ ಸಮಯದ ನಂತರ ಸ್ನಾನ, ಉಪಹಾರ ಪೂರೈಸಿದ ಶೀನಿ ವಾಷಿಂಗ್ ಗೆ ಕೊಟ್ಟಿದ್ದ ಬಟ್ಟೆ ತರಲೆಂದು ಸ್ಕೂಟರ್ ಏರಿ ಹೊರಟ. ಆತ, ಲಾಂಡ್ರಿ ತಲುಪಿದಾಗ ಅದರ ಮಾಲೀಕ, ಅಲ್ಲಿದ್ದ ದೇವರ ಫೋಟೋಗಳಿಗೆ ಹೂವು ಮುಡಿಸಿ, ಗಂಧದ ಕಡ್ಡಿ ಹಚ್ಚಿ ನಮಸ್ಕರಿಸುತ್ತಿದ್ದ. ಕೌಂಟರ್‌ನಲ್ಲಿ ಶೀನಿ ಬಂದು ನಿಂತಿರುವುದನ್ನು ಕಂಡವ "ಹೇಳಿ.. ಸ್ವಾಮಿ, ಏನಾಗಬೇಕು?" ಎಂದಾಗ ಶೀನಿ ಅದು "ಅದೇ ಹೋದ ಗುರುವಾರ ಸೀರೆ, ಪಂಚೆ, ಬ್ಲೌಸ್, ಪ್ಯಾಂಟ್ ಶರ್ಟ್ ವಾಷಿಂಗ್ ಗೆ ಕೊಟ್ಟದ್ನಲ್ಲಾ ಅದನ್ನು ತೆಗೆದುಕೊಂಡು ಹೋಗಲು ಬಂದಿದ್ದೇನೆ "ಎಂದ. ಮಾಲೀಕ "ರಸೀತಿ ಕೊಡಿ" ಎಂದಾಗ ಶೀನಿ "ಆಯ್ತು "ಎನ್ನುತ್ತ ತನ್ನ ಪರ್ಸ್ ತೆಗೆದು ನೋಡಿದ, ಅದು ಅಲ್ಲಿ ಕಾಣದಿದ್ದಾಗ ಸ್ವಲ್ಪ ಬೇಸರದಿಂದ "ಛೇ..."ಎನ್ನುತ್ತ ತನ್ನ ಎಲ್ಲ ಜೇಬುಗಳನ್ನು

ತಡಕಾಡಿದ.ಊಹೂಂ ಎಲ್ಲೂ ಅದರ ಸುಳಿವು ಸಿಗಲಿಲ್ಲ.ಪುನ:ಶೀನಿ ಮಾಲೀಕನಿಗೆ "ಸಾರ್ ಅದು ಸಿಗ್ತಾ ಇಲ್ಲ.. ನನಗೆ ನೆನಪಿದ್ದಂತೆ ರಸೀತಿಯ ದಿನಾಂಕ 18/4/22 ಮತ್ತು ಅದರ ಮೊತ್ತ ರೂ-3650/-"ಎಂದು ವಿವರಣೆ ನೀಡಲು ಮುಂದಾದಾಗ ಮಾಲೀಕ"ಇರ್ಲೊದು ಸ್ವಾಮಿ.. ಆದ್ರೆ ರಸೀತಿ ಇಲ್ಲದೇ ನಾವು ಯಾರಿಗೂ ಬಟ್ಟೆ ಕೊಡಲ್ಲ "ಎಂದು ಹೇಳಿ ತನ್ನ ಕೆಲಸದಲ್ಲಿ ಮಗ್ನನಾದ.ಅಷ್ಟಕ್ಕೇ ಸುಮ್ಮನಿರದ ಶೀನಿ

"ಅಲ್ಲಾ.. ಸ್ವಾಮಿ ಕಳೆದ ನಾಲ್ಕು ವರ್ಷಗಳಿಂದ ನಿಮ್ಮಲ್ಲೆ ಬಟ್ಟೆ ಕೊಟ್ಟು ತಗೋಂಡು ಹೋಗ್ತಾ ಇದ್ದೇನೆ.. ನಾನು ಹಳೇ ಗಿರಾಕಿ.."ಎಂದು ಉತ್ತರಿಸಿದಾಗ, ಮಾಲೀಕ ಸ್ವಲ್ಪ ಖಾರವಾಗಿ"ನೋಡಿ ಮಿಸ್ಟರ್ ಶ್ರೀನಿವಾಸ್.. ಮೊದಲನೆಯದಾಗಿ ನಾವು ಅಂಗಡಿ ರೂಲ್ಸ್ ಬಿಟ್ಟು ವ್ಯವಹಾರ ಮಾಡಲ್ಲ, ಇವತ್ತು ನೀವು ಹೇಳಿದ್ರಿ ಅಂತ ಅಂಥ ಕಾಸ್ಲಿ ಬಟ್ಟೆ ಕೊಟ್ರೆ, ನಾಳೆ ಇನ್ಯಾರೋ ಆ ರಸೀತಿ ಹಿಡ್ಕೊಂಡು ಬಂದು ಬಟ್ಟೆ ಕೊಡಿ ಅಂದ್ರೆ ನಾವೆಲ್ಲಿಗೆ ಹೋಗೋಣ? ದಯವಿಟ್ಟು ರಸೀತಿ ತನ್ನಿ ಬಟ್ಟೆ ತಗೊಂಡು ಹೋಗಿ "ಎಂದು ಕಡ್ಡಿ ಮುರಿದಂತೆ ಹೇಳಿ ಅನ್ಯ ಕೆಲಸಕ್ಕೆ ಇಳಿದ. ಶೀನಿಗೆ ಏನೂ ತೋಚಲಿಲ್ಲ ತಲೆಯಲ್ಲಿ " ರಸೀತಿ, ಎಲ್ಲಿಟ್ಟೆ..ಎಲ್ಲಿ ಹೋಯಿತು? ಇದೇನಾದ್ರೂ ಪಮ್ಮೀಗೆ ಗೊತ್ತಾದ್ರೆ...ನನ್ನ ಕಥೆ.. ಅಷ್ಟೇ.."ಎನ್ನುವ ಯೋಚನೆ ಗಳು ಸುತ್ತಲಾರಂಭಿಸಿದವು ಮೈ ಸಣ್ಣಗೆ ಬೆವರತೊಡಗಿತು. ಮನಸ್ಸಿನಲ್ಲಿ ಏನಾದರಾಗಲಿ ಪಮ್ಮೀಗೆ ಈ ವಿಷಯ ತಿಳಿಸೋಣ ಎಂದು ತನ್ನ ಸ್ಕೂಟರ್ ಬಳಿ ಬಂದು ಆಕೆಗೆ ಫೋನಾಯಿಸಿ "ಪಮ್ಮೀ.. ಈ ಲಾಂಡ್ರಿಯವರ ರಸೀತಿ ನೀವೇನಾದರೂ ನೋಡಿದೇಯಾ?"ಎಂದು ಒಂದೇ ಪ್ರಶ್ನೆ ಕೇಳಿದ .ಆ ಬದಿಯಿಂದ ಆಕೆ "ರ್ರೀ..ನೀವೇನಾದ್ರು ಅದನ್ನು ನನಗೆ ತೋರಿಸಿದ್ರಾ? ಅಥವಾ ತಂದು ಕೊಟ್ರಾ? ಛೇ ಎಷ್ಟು ಬೇಜವಾಬ್ದಾರಿ ಮನುಷ್ಯನಪ್ಪ.."ಎನ್ನುತ್ತ ಕಾಲ್ ಕಟ್ ಮಾಡಿದಳು.ಅದೇ ಮೂಡಿನಲ್ಲಿದ್ದ ಶೀನಿ ಸ್ಕೂಟರ್ ಏರಿ ಭರ್ರೋ ಎಂದು ಮನೆಗೆ ಬಂದಾಗ ಪಮ್ಮೀ ರೂಮಿನೊಳಗೆ ಎಲ್ಲ ಕಡೆ ತಡಕಾಡಿ ಮನೆ ತುಂಬ ರಾದ್ಧಾಂತ ಮಾಡಿದ್ದಳು.ಇವನನ್ನು ಕಂಡೊಡನೆ ಕೋಪದಿಂದ ಮುಗಿ ಬೀಳುತ್ತ, "ನಾಳೆ ಬೆಳಿಗ್ಗೆ ಫಂಕ್ಷನ್ ಗೆ ಏನು ಮಾಡೋದು? ನೋಡಿ ಒಂದು ಪಕ್ಷ ಅದು ಸಿಗದಿದ್ದರೆ ಇಂದೇ ಈಗಲೇ ಹೋಗಿ ಆ ಕಲರ್ ನ ಸೀರೆ ಕೊಡಿಸಿ ಕೊಡಿ"ಎಂದು ಆವಾಜ್ ಹಾಕಿದಳು.ಮೊದಲೇ ತನ್ನ ಬೇಜವಾಬ್ದಾರಿ ಬಗ್ಗೆ ಪೇಚಾಡುತ್ತಿದ್ದ ಶೀನಿ ಇನ್ನಷ್ಟು ಗಂಭೀರವಾಗಿ ಯೋಚನೆ ಗೆ ಬಿದ್ದ. ಏಕೆಂದರೆ ಆಕೆ ಹೇಳುವ ಎರಡು ಜರತಾರಿ ಸೀರೆ ಬೆಲೆ ಏನಿಲ್ಲವೆಂದರೂ ಹತ್ತು ಸಾವಿರಕ್ಕೂ ಹೆಚ್ಚಾಗುತ್ತಿತ್ತು.ಮನದಲ್ಲಿ "ಶಿವನೇ ಹೇಗೆ ಮಾಡೊದು" ಎಂದು ಯೋಚಿಸುತ್ತಿದ್ದಾಗ ಮನೆಗೆಲಸದ ನಿಂಗಿ,"ಅಮ್ಮಾವ್ರೇ ನಾ ಹೋಗಿ ಬರ್ತೇನೆ " ಎಂದಳು. ಆಗ ಪಮ್ಮೀ ಹೇಗಾದರಾಗಲಿ ಇವಳಿಗೊಂದು ಮಾತು ಕೇಳೋಣ ಎಂದು "ನಿಂಗೀ..ನೀ ಬೆಳಿಗ್ಗೆ ಕಸಾ ಗುಡಿಸುವಾಗ, ಪಿಂಕ್ ಕಲರ್ ಲಾಂಡ್ರಿ ರಸೀತಿ ಕಂಡ್ಯಾ" ಎಂದು ಕೇಳಿದಾಗ ಆಕೆ "ಪಿಂಕ್ ಗಿಂಕು, ರಸಿತಿ ನನಗೆ ಗೊತ್ತಾಗಲ್ಲ, ಏನು ಕಸಾ ಗುಡಿಸಿದ್ನೋ ಅದನ್ನು ಹಿತ್ತಲ್ಲಿ ಇರೋ ಡಸ್ಟ ಬಿನ್‌ಗೆ ಹಾಕಿದ್ದೇನೆ." ಎಂದು ವಿವರಣೆ ಕೊಡುತ್ತಿರುವುದನ್ನು ಕೇಳಿಸಿಕೊಂಡ ಶೀನಿಗೆ ಏನೋ ಫ್ಲಾಶ್ ಆದಂತಾಗಿ ಆತ ಲಗುಬಗೆಯಿಂದ ಓಡಿ ಆ ಬೆಸ್ಟ್ ಬಿನ್ ಎತ್ತಿಕೊಂಡು ಬಂದು ಕಾಂಪೌಂಡ್‌ನ ಒಂದು ಮೂಲೆಯಲ್ಲಿ ಹರಡಿ ಕೈಯಲ್ಲೊಂದು ಕಡ್ಡಿ ಹಿಡಿದು ಕೆದಕಲಾರಂಭಿಸಿದ. ಕೆದಕುತ್ತ ಹೋದಂತೆ ಯಾವುದೋ ಪ್ಲಾಸ್ಟಿಕ್ ಕವರ್ ಕೆಳಗೆ ಎರಡು ಮಡಿಕೆಯಾಗಿ ಬಿದ್ದಿದ್ದ ಆ ರಸೀತಿ ಕಂಡಾಗ, ಕುಳಿತಲ್ಲಿಂದಲೇ ಜೋರಾಗಿ

"ಪಮ್ಮೀ ಸಿಕ್ತು ಕಣೇ ಸಿಕ್ತು "ಎಂದು ಕೂಗಿ ಹೇಳಿದಾಗ ಆಕೆಯೂ ಇವನಷ್ಟೇ ಸಂತಸ ಪಟ್ಟು "ಮೊದಲು ಹೋಗಿ ಬಟ್ಟೆ ತಗೊಂಡು ಬನ್ನಿ" ಎಂದು ಆತನನ್ನು ಕಳುಹಿಸಿ ಕೊಟ್ಟಳು.ಲಾಂಡ್ರಿಗೆ ಬಂದ ಶೀನ ಅದನ್ನು ಮಾಲೀಕನಿಗೆ ತೋರಿಸಿ ,ಹಣ ಪಾವತಿಸಿ ರಸೀತಿ ಪ್ರಕಾರ ಎಲ್ಲಾ ಬಟ್ಟೆ ಸರಿಯಾಗಿರುವುದನ್ನು ಖಚಿತ ಪಡಿಸಿಕೊಂಡು ಮನೆಗೆ ಬಂದು ಪತ್ನಿಯ ಕೈಗೆ ಕೊಟ್ಟು "ಸಧ್ಯ "ಎಂದು ದೀರ್ಘ ಉಸಿರುಬಿಟ್ಟ.ಆನಂತರ ಒಬ್ಬನೇ ಕುಳಿತು ಆ ರಸೀತಿ ಅಲ್ಲಿ ಹೇಗೆ ಹೋಗಿತ್ತು..? ಎಂದು ಯೋಚಿಸುತ್ತಿದ್ದಾಗ ಆತನ ಮನಸ್ಸು ಫ್ಲಾಶ್ ಬ್ಯಾಕ್ ಹೋಯಿತು."ಹೌದು ನಿನ್ನೆ ಬೆಳಗ್ಗೆ ಕೂಡ ನಾನು ಅದನ್ನು ಜೇಬಿನಲ್ಲಿ ಆ ರಸೀತಿ ಇರುವುದು ಕಂಡಿದ್ದೆ. ಆದರೆ ರಾತ್ರಿ ಕಳೆದು ಬೇಳಗಾಗುವುದರಲ್ಲಿ ಹೇಗೆ ಮಾಯವಾಗಿತ್ತು.. ಪ್ರಾಯಶಃ ನಿನ್ನೆ ಸಂಜೆ ತಾನು ತರಕಾರಿ ತರಲು ಪರ್ಸ್ ಜೇಬಿನಿಂದ ತೆಗೆಯುವಾಗ ಅದು ಅದರೊಟ್ಟಿಗೆ ಬಂದು ಕೆಳಗೆ ಬಿದ್ದು, ಗಾಳಿಗೆ ಹಾರಿ ಬಾಗಿಲು ಸಂದಿಯಲ್ಲಿ ಸೇರಿತ್ತೇನೋ, ಬೆಳಿಗ್ಗೆ ನಿಂಗಿ ಸಂದಿ ಮೂಲೆಯೊಳಗಿಂದ ಕಸ ತೆಗೆಯುವಾಗ ಇದು ಕಸದ ಜೊತೆಗೆ ಬಂದಿದ್ದರಿಂದ ಎಲ್ಲಾ ಎತ್ತಿ ಕೊಂಡು ಹೋಗಿ ಡಸ್ಟ ಬಿನ್‌ಗೆ ಸುರಿದಿದ್ದಾಳೆ ಎನಿಸತ್ತೆ ಎಂದು ಮನಸ್ಸಿಗೆ ಸ್ವಸಮಾಧಾನ ಮಾಡಿಕೊಂಡ. ■

## ಉಚಿತ ಪಟಾಕಿ....!

ನಾಡಿನೆಲ್ಲೆಲ್ಲೂ ದೀಪಾವಳಿಯ ಸಂಭ್ರಮ. ಎಲ್ಲಾ ಸೀರೆ ಅಂಗಡಿಗಳಲ್ಲೂ ಭರ್ಜರಿ ಮಾರಾಟ.ಪಮ್ಮಿ ಮತ್ತು ಪರಮೇಶಿಯು ಸಹ ದೀಪಾವಳಿಗೆ ಸೀರೆ ಖರೀದಿಸಲು ಊರಿನ ಹೆಸರಾಂತ ಸೀರೆ ಅಂಗಡಿಗೆ ಹೋದರು. ಅಲ್ಲಿ ಅವರಿಗೆ ನೆಂಟರ ಮನೆಗೆ ಬಂದಂತೆ ಸ್ವಾಗತ. ಹೋದ ತಕ್ಷಣವೇ ಅಲ್ಲಿ ಒಂದು ಸೀರೆಯ ದೊಡ್ಡ ಕ್ಯಾಟಲಾಗ್ ನ ನೋಡಲು ಕೊಟ್ಟರು.ಪಮ್ಮಿ ಅದನ್ನು ಪರಮೇಶಿಗೆ ಕೊಟ್ಟು ನೀವು ನೋಡುತ್ತಿರಿ, ನಾನು ಹಾಗೆ ಒಂದು ರೌಂಡ್ ನೋಡಿಕೊಂಡು ಬರ್ತೀನಿ ಎಂದು ಹೊರಟಳು. ಸ್ವಲ್ಪ ಸಮಯದ ನಂತರ ಬಂದು, ಪಮ್ಮಿ – ಏನ್ರೀ ನೋಡಿದ್ರಾ ? ಎಂದು ಕೇಳಿದಾಗ, ಪರಮೇಶಿ – ನೋಡಿದೆ ಕಣೆ, 1,2 ಬೇಡ, 3 ಓಕೆ ಕಣೆ ಎಂದನು.ಅವಳು ನೋಡಿ, ಅದು ಸುಮಾರಾಗಿದೆ ಕಣ್ರೀ, ಈ 17 ನೋಡಿ ಎಂದಾಗ, ಅವನು – ಅಯ್ಯೋ ಚೆನ್ನಾಗಿಲ್ಲ ಕಣೇ ಎಂದನು. ಆಗ ಅವಳು – ಸರಿ, ಈ 56 ನೋಡಿ ಎಂದಾಗ, ಪರಮೇಶಿ – ಅಯ್ಯೋ ಮೂಗು ತುಂಬಾ ಚಪ್ಪೆಯಾಗಿದೆ ಎಂದನು.ಆಗ ಪಮ್ಮಿ ಹೌಹಾರಿ – ಏನ್ರೀ, ನಾನು ನಿಮಗೆ ಸೀರೆ ನೋಡ್ರಿ ಅಂತ ಹೇಳಿದ್ರೆ, ನೀವು ಸೀರೆ ಉಟ್ಟಿರುವವಳನ್ನು ನೋಡುತ್ತಿದ್ದೀರಾ? ಎಂದು ಸಿಟ್ಟಿನಿಂದ ಕೇಳಿದಾಗ, ಪರಮೇಶಿಯು – ಅಯ್ಯೋ, ನಾನು ಸೀರೆ ನೋಡಬೇಕಿತ್ತಾ ? ಹಾಗಂತಾ ನೀನು ನನಗೆ ಹೇಳಲೇ ಇಲ್ಲವಲ್ಲ ಎಂದಾಗ, ಪಮ್ಮಿಯು ಬುಸುಗುಡುತ್ತಾ ,– ಬನ್ನಿ ಮನೆಗೆ, ಅಲ್ಲಿದೆ ನಿಮಗೆ ಹಬ್ಬ ಎಂದಾಗ, ಪರಮೇಶಿಯು – ಹಾಗಾದರೆ, ಮನೆಯಲ್ಲಿ ದುಡ್ಡಿಲ್ಲದೆ ಪಟಾಕಿ ಸಿಡಿಯುವುದನ್ನು ನೋಡಬಹುದು ಎಂದು ಮನಸ್ಸಿನಲ್ಲಿ ಅಂದ್ಕೊಂಡು ಮುನಿದ ಹೆಂಡ್ತಿ ಜೊತೆಗೆ ಹೆಜ್ಜೆ ಹಾಕಿದ ಮನೆಯೆಡೆಗೆ....!

# ಅಯ್ಯೋ, ಬೂದುಗುಂಬಳ ಕಾಯಿಯೇ!

● ಎಚ್. ನರಸಿಂಹಯ್ಯ

ಪ್ರಿಯ ದಿವಂಗತ ಬೂದುಗುಂಬಳ ಕಾಯಿಗೆ,

ನಾನು ತುಂಬಾ ನೊಂದುಕೊಂಡು ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇನೆ. ನಿನ್ನೆಯ ದಿನ ಆಯುಧಪೂಜೆ. ನಾನು ಡಿ.ವಿ.ಜಿ. ರಸ್ತೆಯಲ್ಲಿ ಉದ್ದಕ್ಕೆ ನಡೆದುಕೊಂಡು ಒಬ್ಬ ಸ್ನೇಹಿತನ ಮನೆಗೆ ಹೋಗುತ್ತಿದ್ದೆ. ದಾರಿಯುದ್ದಕ್ಕೂ ನಿನ್ನನ್ನು ಅಮಾನುಷವಾಗಿ ಕೊಂದಿರುವ ಹತ್ತಾರು ದಾರುಣ ದೃಶ್ಯವನ್ನು ನೋಡಿ ನನಗೆ ತಡೆಯಲಾರದಷ್ಟು ದುಃಖವಾಯಿತು. ಬಡವರಿಂದ ಮೊದಲ್ಗೊಂಡು ಪಂಚತಾರಾ ಹೋಟೆಲುಗಳ ಅಡುಗೆ ಮನೆಗಳಲ್ಲಿ ಉಳಿದ ದಿನಗಳಲ್ಲಿ ತುಂಬಾ ಪ್ರೀತಿ ಆದರಗಳಿಂದ ನಿನ್ನನ್ನು ಹೆಚ್ಚಿ ಹುಳಿಯನ್ನೋ, ಮಜ್ಜಿಗೆ ಹುಳಿಯನ್ನೋ, ಮಾಡಿ ತಿಂದು ಸಂತೋಷಪಡುತ್ತಾರೆ. ನಿನಗೂ ಅದೇ ಬೇಕಾದದ್ದು, ಮಜ್ಜಿಗೆ ಹುಳಿಯಲ್ಲಿ ನಿನ್ನ ಜೀವನದ ಸಾರ್ಥಕತೆಯನ್ನು ಕಾಣುತ್ತೀಯಾ. ಸಾವಿನಲ್ಲೂ ಸಂತೋಷಪಡುತ್ತೀಯ. ನಿನ್ನಂತಹ ನಿಸ್ವಾರ್ಥ, ನಿಷ್ಕಪಟ ಹುತಾತ್ಮರು ಮನುಷ್ಯರಲ್ಲಿ ಸಿಗುವುದೇ ಅಪರೂಪ.

ಅಡುಗೆ ಮನೆಯಲ್ಲಿ ನಿನ್ನನ್ನು ಹಚ್ಚುವುದೇ ಒಂದು ಕಲೆ. ಆದರೆ ಆಯುಧ ಪೂಜೆ ದಿನ ಬೀದಿಯಲ್ಲಿ ಹಾಡು ಹಗಲಿನಲ್ಲಿ ನಿನ್ನನ್ನು ಕೊಲೆ, ಕಗ್ಗೊಲೆ ಮಾಡುತ್ತಾರೆ. ನಿನ್ನನ್ನು ನೆಲದ ಮೇಲೆ ತೆಂಗಿನಕಾಯಿಯನ್ನು ಬಂಡೆಯ ಮೇಲೆ ಈಡುಗಾಯಿ ಒಡೆದಂತೆ ಬಡಿದಾಗ ನಿನ್ನ ಹೋಳುಗಳು ದಿಕ್ಕಾಪಾಲಾಗಿ ಅಸ್ತವ್ಯಸ್ತವಾಗಿ ಬಿದ್ದಿರುವ ದೃಶ್ಯ ಎಂತಹವರ ಮನಸ್ಸನ್ನೂ ಕರಗಿಸುತ್ತದೆ. ಜೊತೆಗೆ ರಕ್ತದ ನೆನಪು ತಂದುಕೊಡಲು ಕೆಂಪು ಬಣ್ಣ ಬೇರೆ. ನಿಜವಾಗಿಯೂ ನಿನ್ನದು ಆಕಾಲ ಹೃದಯ ವಿದ್ರಾವಕ, ಅಪಮೃತ್ಯು. ಇದೆಲ್ಲಾ ಅನುಭವಿಸುವುದು ನಿನ್ನ ಕರ್ಮ ಅಂತ ಕಾಣುತ್ತದೆ.

ಹಾಗೇ ಇನ್ನು ನಾಲ್ಕು ಹೆಜ್ಜೆ ಮುಂದೆ ಬಂದೆ. ಗಾಂಧೀ ಬಜಾರ್ ಕಾಲು ಹಾದಿಯಲ್ಲಿ ಬಾಳೆಕಂದು, ಕಂದಮ್ಮಗಳನ್ನು ಕತ್ತರಿಸಿ ಸಾಲಾಗಿ ಮಲಗಿಸಿದ್ದರು. ಇದು ಶಿಶುಹತ್ಯೆ. ಮತ್ತೊಂದು ಹೃದಯ ವಿದ್ರಾವಕ ದೃಶ್ಯ. ಅಸಹಾಯಕರಾದ ಲಕ್ಷಾಂತರ ಕಂದಮ್ಮಗಳನ್ನು ಶೈಶಾವಸ್ಥೆಯಲ್ಲಿಯೇ ಕೊನೆಯುಸಿರು ಎಳೆಯುವಂತೆ ಈ ಕ್ರೂರಿ ಮನುಷ್ಯರು ಮಾಡಿದರು.

ನಿನ್ನ ಬಗ್ಗೆ ಮೊದಲಿನಿಂದಲೂ ತುಂಬಾ ಅನುಕಂಪ. ನಾನು ಉಪಕುಲಪತಿಯಾಗಿದ್ದಾಗ ನಮ್ಮ ವಿಶ್ವವಿದ್ಯಾಲಯದ ವಾಹನಗಳ ಚಾಲಕರು, ಕಂಡಕ್ಟರ್‌ಗಳು ಒಂದು ದಿನ ನನ್ನ ಆಫೀಸಿಗೆ ಬಂದರು. ಏನಪ್ಪಾ ವಿಷಯ ಅಂದೆ. ನಾಳೆ ಆಯುಧಪೂಜೆ ಸಾರ್ ಅಂದರು. ಎಂತೆಂತಹ ವಿದ್ಯಾವಂತರಿಗೆ, ವಿಜ್ಞಾನಿಗಳಿಗೆ ವೈಜ್ಞಾನಿಕ ಮನೋಭಾವದ ಅಭಾವವಿರುವುದರಿಂದ ಇವರಿಗೆ ವೈಚಾರಿಕ ಮನೋಭಾವವನ್ನು ಭೋಧಿಸುವುದು ಸರಿಯಲ್ಲವೆಂದು ನಾಲ್ಕು ಸೆಕೆಂಡ್ ಯೋಚನೆ ಮಾಡಿ. "ಆಯುಧಪೂಜೆ ಮಾಡಿಯಪ್ಪ. ಆದರೆ ನನ್ನದೊಂದು ಸಲಹೆ, ಎಲ್ಲಾ ವಾಹನಗಳನ್ನು ಒಟ್ಟಿಗೆ ನಿಲ್ಲಿಸಿ ಅವುಗಳಿಗೆಲ್ಲಾ ಸೇರಿ ಒಂದೇ ಒಂದು ಬೂದುಗುಂಬಳಕಾಯಿ ಒಡೆಯಿರಿ" ಎಂದೆ. ಅದಕ್ಕೆ ಅವರು ಏನು ಸಾರ್ ಹೀಗಂತೀರಿ. ಒಂದೊಂದು ವಾಹನಕ್ಕೂ ಒಂದೊಂದು ಬೂದುಗುಂಬಳಕಾಯಿ ಒಡದೇ ಆಕ್ಸಿಡೆಂಟ್‌ಗಳು ಕಡಿಮೆ ಆಗಲಿಲ್ಲ. ಅಂದ ಮೇಲೆ ಎಲ್ಲಾ ವಾಹನಗಳಿಗೂ ಸೇರಿ ಒಂದೇ ಒಂದು ಬೂದುಗುಂಬಳ ಕಾಯಿ ಒಡೆದರೆ ನಮ್ಮ ಗತಿ ಏನ್ ಸಾರ್? ಅಂತ ಹೇಳಿದರು. ಚರ್ಚಿಸಿ ಉಪಯೋಗವಿಲ್ಲವೆಂದು ಸರಿ, ಹಿಂದಿನಂತೆಯೇ ಆಯುಧಪೂಜೆ ಮಾಡಿ ಅಂದೆ. ಒಂದೊಂದು ವಾಹನಕ್ಕೂ

ನಿನ್ನ ವಂಶದ ಒಬ್ಬೊಬ್ಬರನ್ನು ಬಲಿ ಕೊಟ್ಟರು. ಆ ಪಾಪದಲ್ಲಿ ನಾನೂ ಭಾಗಿಯಾದೆ.

ನಿನ್ನನ್ನು ಹೀಗೆ ಆಯುಧಪೂಜೆ ದಿನ ಬೀದಿಯಲ್ಲಿ ಕೊಲೆ ಮಾಡುವುದರಿಂದ ಅಪಘಾತಗಳು ಕಡಿಮೆ ಆಗುವುದಿಲ್ಲ ಎಂದು ಹಲವು ದಶಕಗಳಿಂದ ಬಡುಕೋತ ಇದ್ದೀನಿ. ಯಾರೂ ಇಲ್ಲಿಯ ತನಕ ಜಗ್ಗಿಯೇ ಇಲ್ಲ. ಈಗಿನ ಶಿಕ್ಷಣ ಪದ್ಧತಿಯಿಂದ, ವಿಜ್ಞಾನದ ಬೆಳವಣಿಗೆಯಿಂದ ಇಂತಹ ಅರ್ಥವಿಲ್ಲದ ನಂಬಿಕೆಗಳನ್ನು ಸಾಕಷ್ಟು ಕಡಿಮೆ ಮಾಡಲು ಆಗಿಲ್ಲ. ಹೇಳಿಕೊಳ್ಳುವಂತಹ ಸಮಾಜ ಸುಧಾರಣೆ ಆಗಿಲ್ಲ. ವಿಜ್ಞಾನದ ಪಾಡಿಗೆ ವಿಜ್ಞಾನ. ಮೂಢನಂಬಿಕೆಗಳ ಪಾಡಿಗೆ ಮೂಢನಂಬಿಕೆಗಳು.

ನಮ್ಮ ದೇಶದಲ್ಲಿ ಅಸಂಖ್ಯಾತ ದೇವಸ್ಥಾನಗಳು, ಅವ್ಯಾಹತವಾಗಿ ಪೂಜೆ, ಪುಣ್ಯಕ್ಷೇತ್ರಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಕಾಣಿಕೆ ಅರ್ಥಾತ್ ದೇವರಿಗೆ ಲಂಚ. ಲಕ್ಷಾಂತರ ಮಂದಿ ಗಂಗಾನದಿಯಲ್ಲಿ, ಉಳಿದ ಪುಣ್ಯನದಿಗಳಲ್ಲಿ ಆಗಾಗ ಸ್ನಾನ. ವರ್ಷವೆಲ್ಲಾ ವಾರಕ್ಕೊಂದು ಸಲ ಲಕ್ಷಾಂತರ ಮಂದಿಯಿಂದ ದೂರದರ್ಶನದಲ್ಲಿ ರಾಮಾಯಣ ವೀಕ್ಷಣೆ. ಈಗ ಮಹಾಭಾರತ ಮೊದಲಾಗಿದೆ. ಇವು ಯಾವುವೂ ಜನರ ಮನೋಭಾವವನ್ನು ಸರಿಯಾದ ದಿಕ್ಕಿನಲ್ಲಿ ಕಿಂಚಿತ್ತಾದರೂ ಬದಲಾಯಿಸಿಲ್ಲ. ಮಾಮೂಲಿ ಸ್ವಾರ್ಥ, ಅಪ್ರಾಮಾಣಿಕತೆ, ಸಮಾಜಘಾತಕ ಕೃತ್ಯಗಳು, ಮೋಸ, ದಗಾ ಜೊತೆ ಜೊತೆಯಲ್ಲಿಯೇ ಸಾಗುತ್ತಿವೆ. ನಿತ್ಯಜೀವನದ ಮೇಲೆ ಧರ್ಮವು ಪ್ರಭಾವ ಬೀರಿಲ್ಲ. ವಿಜ್ಞಾನವೂ ಬೀರಿಲ್ಲ. ಧರ್ಮ ಲೇವಾದೇವಿಯಾಗಿದೆ. ವಿಜ್ಞಾನ ಕೇವಲ ಜೀವನೋಪಾಯವಾಗಿದೆ.

ಇಷ್ಟು ದಿನ ಓದಿದವರಲ್ಲಿ ವಿಜ್ಞಾನಿಗಳಲ್ಲಿ ಯಾರಾದರೂ ಒಬ್ಬರು ಹೇಳಲಿ ಮೊಟ್ಟ ಮೊದಲನೆಯದಾಗಿ ಯಾವುದೇ ಬಲಿಯಿಂದ ಏನು ಪ್ರಯೋಜನ? ಪ್ರಯೋಜನವಿದ್ದರೆ ನಿನ್ನನ್ನೇ ಏಕೆ ಬಲಿ ಕೊಡಬೇಕು? ಇದನ್ನು ಸಮಂಜಸವಾಗಿ ಉತ್ತರಿಸುವ ಭೂಪ ಇನ್ನೂ ಹುಟ್ಟಿಲ್ಲ. ನಿನಗೆ ಆಗದವನು ಯಾವನೋ ನಿನ್ನನ್ನು ಮೊದಲು ಬಲಿ ಕೊಟ್ಟಸರಿ. ಅಲ್ಲಿಂದ ಮೊದಲಾಯಿತು ಈ ಅಸಂಖ್ಯಾತ ವಾರ್ಷಿಕ ಭೀಕರ ಕೊಲೆಗಳು.

ನಿನ್ನನ್ನು ಹೀಗೆ ಅಮಾನುಷವಾಗಿ ಕೊಲೆ ಮಾಡುವುದನ್ನು ಸ್ನೇಹಿತರೊಂದಿಗೆ ಖಂಡಿಸುತ್ತಿದ್ದೆ. ಭಾಷಣಗಳಲ್ಲೂ ಅದೇ ಕೆಲಸ ಮಾಡುತ್ತಿದ್ದೆ. ಈ ಸಲವಂತೂ ನೀನು ಮತ್ತು ನಿನ್ನ ವಂಶದ ಹಲವಾರು ಬೀದಿಯಲ್ಲಿ ಕೊಲೆಗೀಡಾದ ಅಸ್ತವ್ಯಸ್ತವಾಗಿ ಬಿದ್ದಿರುವುದನ್ನು ನೋಡಿ ದುಃಖ ತಡೆಯಲಾರದೇ ನಿನಗೆ ಈ ಕಾಗದವನ್ನು ಬರೆದಿದ್ದೇನೆ. ನೀನು ಓದಲು ಆಗದೇ ಇರಬಹುದು. ಆದರೆ ನಿನಗೆ ಬರೆದ ಪತ್ರವನ್ನು ಬಹಿರಂಗಪಡಿಸುವುದರಿಂದ ನಿನ್ನ ಕೊಲೆಪಾತಕರಾದರೂ ಇದನ್ನೂ ಓದಿ ನಿನ್ನನ್ನು ಇಂತಹ ದುರ್ಗತಿಗೆ ಈಡು ಮಾಡದೇ ಹೋಗಲಿ ಎಂದು ಬರೆದಿದ್ದೇನೆ.

ನಾನು ಇಷ್ಟು ಮಾತ್ರ ನಿನಗೆ ಆಶ್ವಾಸನೆ ಕೊಡುತ್ತೇನೆ. ನಿನ್ನನ್ನು ಕೊಲೆಗೀಡು ಮಾಡುತ್ತಿರುವಂತಹ ಅಸಂಖ್ಯಾತ ಮೂಢನಂಬಿಕೆಗಳ, ಅರ್ಥವಿಲ್ಲದ ಸಂಪ್ರದಾಯಗಳ ವಿರುದ್ಧ ಒಬ್ಬನೇ ಆದರೂ ಚಿಂತೆ ಇಲ್ಲ, ಎದೆ ಗುಂದದೆ ಕೊನೆಯತನಕ ಹೋರಾಡುತ್ತಲೇ ಇರುತ್ತೇನೆ.

ಬದುಕಿರುವಾಗ ದೇಹಕ್ಕೆ ಮನಸ್ಸಿಗೆ ಸಾಕಷ್ಟು ಕಷ್ಟಕೊಟ್ಟು ಸತ್ತಾಗ ಆತ್ಮಕ್ಕೆ ಆಂತಿ ಸಿಗಲಿ ಎಂದು ಕೋರುವ ಜನ ನಾವು. ನಿನ್ನ ದೇಹಕ್ಕೆ ಮತ್ತು ಮನಸ್ಸಿಗೆ ಅಸಾಧ್ಯ ನೋವಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತು. ಗೊತ್ತಿಲ್ಲದ ಆತ್ಮದ ಬಗ್ಗೆ ನಾನು ಏನನ್ನೂ ಹೇಳಲೂ ಇಚ್ಛಿಸುವುದಿಲ್ಲ.

ಇತಿ, ನಿನ್ನ ವಂಶದ ಶ್ರೇಯೋಭಿಲಾಷಿ

**ಎಚ್. ನರಸಿಂಹಯ್ಯ**

# ಹಬ್ಬದ ಮಾರನೆಯ ದಿನ

## ಬೇಲೂರು ರಾಮಮೂರ್ತಿ

ಸೋಮುಗೆ ತನ್ನ ಮನೆಯಲ್ಲಿ ಹಬ್ಬ ಎಂಜಾಯ್ ಮಾಡೋದಕ್ಕಿಂತ ಬೇರೆಯವರ ಮನೇಲಿ ಎಂಜಾಯ್ ಮಾಡೋದು ಇಷ್ಟ. ಏಕೆಂದರೆ ಮನೆಯಲ್ಲಿ ಹಬ್ಬ ಆಚರಣೆ ಮಾಡುವಾಗ ಸೋಮಿ ಕಣ್ಣಂಚಿನಲ್ಲೇ ಆರ್ಡರ್ ಮಾಡಿ ಅವನಿಂದ ಕೆಲಸ ತೆಗೀತಾ ಇರ್ತಾಳೆ. ರೀ ಅಂದು ಇಲಿಗೆ ಮಣೆ ಕಡೆ ನೊಡಿದರೆ ಸ್ವಲ್ಪ ಕಾಯಿ ತುರೀರಿ ಅಂತ. ರೀ ಅಂದು ಸೌತೇಕಾಯಿ ಕಡೆ ನೋಡಿದರೆ ಕೋಸಂಬರಿಗೆ ಸೌತೇಕಾಯಿ ಹೆಚ್ಚಿ ಅಂತ. ಮನೇಲಿ ಅಡಿಗೆ ಆಗೋ ಸೂಚನೆ ಸಿಕ್ಕ ಮೇಲೆ ಸೋಮಿ ಮತ್ತೆ ಕಣ್ಸನ್ನೆ ಮಾಡ್ತಾಳೆ. ಆಗ ಡೈನಿಂಗ್ ಟೇಬಲ್ ಕ್ಲಿಯರ್ ಮಾಡಿ ತಟ್ಟೆ ಇಟ್ಟು ನೀರು ಇಡಬೇಕು. ಬಂದವರು ಏನಂದುಕೊಳ್ತಾರೋ ಅಂದು ನಮ್ಮನೇಲಿ ಎಲ್ಲಾ ಕೆಲಸಾನೂ ನಾನೂ ಸೋಮಿನೂ ಹಂಚ್ಕೊಂಡು ಮಾಡ್ತೀವಿ. ನನ್ನ ಎಷ್ಟೋ ಕೆಲಸಗಳಲ್ಲಿ ಅವಳು ತೊಡಗಿಸಿಕೊಳ್ತಾಳೆ ಅಂತ ಜೋಡು ಬಿಟ್ಟು ಕೆಲಸ ಮಾಡ್ತಾನೆ. ಅದೇ ಬೇರೆಯವರ ಮನೆಗೆ ಹೋದರೆ ಕಾಲು ಮೇಲೆ ಕಾಲು ಹಾಕಿಕೊಂಡು ಕೂತಿರಬಹುದು.  ತಟ್ಟೆ ಹಾಕಿ ನೀರು ಇಟ್ಟ ಮೇಲೆ ಬನ್ನಿ, ಕೈ ಕಾಲು ತೊಳ್ಕೊಳೋ ಅಭ್ಯಾಸ ಇದ್ದರೆ ಬಚ್ಚಲು ಮನೆ ಅಲ್ಲಿದೆ ಅಂತ ಕರೀತಾರೆ. ಹೀಗಾಗಿ ಹಬ್ಬದ ಸಮಯದಲ್ಲಿ ನೆಂಟರು ಯಾರಾದರೂ ಕರೀತಾರಾ ಅಂತ ಕಾಯ್ತಿರಾನೆ.

ಈ ಬಾರಿ ಸೋಮು ಮಾವ ಫೋನ್ ಮಾಡಿ ಅಳಿಯಂದಿರೇ ನೀವು ದೀಪಾವಳಿಗೆ ಬರಬೇಕು ಅಂತ ಕರೆದಾಗ ಸೋಮು ನಾನು ಯಾವ ಸೀಮೆ ಅಳಿಯ ಮದುವೆಯಾಗಿ ಹದಿನೈದು ವರ್ಷದ ಮೇಲಾಯ್ತಲ್ಲ ಅಂದ ಅದಕ್ಕೆ ಮಾವ ಗಾಬರಿಯಿಂದ ಅಯ್ಯೋ ಇದೇನು ಹೀಗಂತೀರ, ಅಳಿಯಂದಿರ ಪಟ್ಟ ಇಷ್ಟೇ ವರ್ಷದ್ದು ಅಂತೇನಿಲ್ಲ. ಆದರೆ ಅದಕ್ಕೂ ಎಕ್ಸ್‌ಪೈರಿ ಡೇಟ್ ಇದೆ. ಆದರೆ ಅದು ನಮಗೆ ಗೊತ್ತಿಲ್ಲ. ಅದಕ್ಕೇ ಅಳಿಯ ಅನ್ನೋ ಪಟ್ಟ ನೀವು ಮತ್ತು ನಾನು ಇರುವವರೆಗೂ, ಖಂಡಿತಾ ಬನ್ನಿ ಅಂದರು. ಅದಕ್ಕೆ ಸೋಮಿಯ ಅನುಮತಿಯೂ ಸಿಕ್ಕಿದ್ದರಿಂದ ಸೋಮು ಖುಷಿಯಿಂದಲೇ ಒಪ್ಪಿಕೊಂಡ.

ಮಾವನ ಮನೆಯಲ್ಲಿ ದೀಪಾವಳಿ ಗ್ರಾಂಡಾಗಿ ನಡೆಯಿತು. ಸೋಮಿ ರೀ ಬನ್ನಿ ಇಲ್ಲಿ ಅಂತ ಸೋಮುನ ಕರೆದು ಅವಳ ತಂದೆ ತಾಯಿಗೆ ಹೊಸ ಬಟ್ಟೆ ಗಿಫ್ಟು ಎಲ್ಲಾ ಸೋಮು ಕೈ ಹಿಡಿದು ಕೊಡಿಸಿದಳು. ಇದೇನು ಗ್ರಹಚಾರ, ದೀಪಾವಳಿಗೆ ಮಾವ ಅಳಿಯನಿಗೆ ಗಿಫ್ಟ್ ಕೊಡಬೇಕು ಅಂಥಾದ್ರಲ್ಲಿ. ಇದನ್ನು ಬಹಳ ಗುಟ್ಟಾಗಿ ಇಟ್ಟಿದ್ದಲ್ಲ ಅಂತ ಅಚ್ಚರಿಗೊಂಡು ಸಮಯ ಸಿಕ್ಕಾಗ ಇದೇನು ಗಿಫ್ಟು ನನಗೆ ಹೇಳಲೇ ಇಲ್ಲ ನೀನು. ಇದಕ್ಕೆ ದುಡ್ಡೆಲ್ಲಿತ್ತು ಅಂತ ಕೇಳಿದ. ಸೋಮಿ ನಗುತ್ತಾ ಅಯ್ಯೋ ನಾನು ನಿಮಗೆ ಹೇಳೋದೇ ಮರೆತಿದ್ದೆ. ನಮ್ಮಿಬ್ಬರ ಹೆಸರಿನಲ್ಲಿ ಪೋಸ್ಟಾಫೀಸಿನಲ್ಲಿ ಐವತ್ತು ಸಾವಿರದ ಆರ್. ಡಿ ಇತ್ತಲ್ಲ ಅದು ಮೊನ್ನೆ ಮೆಚೂರ್ ಆಯಿತು. ನಾನೇ ಹೋಗಿ ದುಡ್ಡು ತಂದೆ. ನಮಗೇನೂ ಖರ್ಚಿರಲಿಲ್ಲ. ಇದನ್ನು ಇಟ್ಕೊಂಡು ಏನು ಮಾಡೋದು ಅಂತ ಇರುವಾಗ ಅಪ್ಪ ಹಬ್ಬಕ್ಕೆ ಬನ್ನಿ ಅಂತ ಕರೆದ್ರಲ್ಲ, ಅದಕ್ಕೆ ಅವರಿಗೆ ಅಮ್ಮನಿಗೆ ಅಂತ ಬಟ್ಟೆ ತಗೊಂಡೆ, ಅವರಿಬ್ಬರಿಗೆ ಊಟಕ್ಕೆ ಬೆಳ್ಳಿ ತಟ್ಟೆ

ಇತ್ತು. ಆದರೆ ತಿಂಡಿನ ಅದ್ಯಾವ್ದೋ ಸ್ಟೀಲ್ ತಟ್ಟೆಲಿ ತಿನ್ತಾ ಇದ್ರು. ಅದಕ್ಕೆ ಅವರಿಗೆ ತಿಂಡಿಗೂ ಬೆಳ್ಳಿ ತಟ್ಟೆ ಗಿಫ್ಟ್ ತಂದೆ ಅಂದು ಸೋಮು ಹೃದಯ ಹೊಡ್ಕೊಳ್ಳೋ ಹಾಗೆ ಮಾಡಿದಳು. ತನ್ನ ಮನೇಲಿ ಆಗಿದ್ದರೆ ಇಷ್ಟೊತ್ತಿಗೆ ದೊಡ್ಡ ರಾಮಾಯಣವೇ ಆಗಿಹೋಗಿರೋದು. ಮಾವನ ಮನೆ ಅಂತ ಸೋಮು ಬಾಯಿ ಮುಚ್ಚಿಕೊಂಡಿದ್ದ. ನರಕ ಚತುರ್ದಶಿ ದಿನ ಐವತ್ತು ಸಾವಿರ ಬೋಳಿಸಿ ನನಗೆ ನರಕ ದರ್ಶನ ಮಾಡಿಸಿಬಿಟ್ಟಲ್ಲಾ ಅಂತ ಸೋಮು ಪರದಾಡಿದ. ಅಮಾವಾಸ್ಯೆಯೂ ಕಳೆಯಿತು, ಬಲಿಪಾಡ್ಯಮಿಯೂ ಆಯಿತು. ಮಾರನೇ ದಿನ ಊರಿಗೆ ಹೊರಡೋಣ ಅಂತ ಸೋಮು ಅಂದರೆ ಸೋಮಿ ಅದೇನು ಅರ್ಜಂಟು ನಿಮ್ಮ ಬಾಸ್ ಗೋಳು ಇದ್ದೇ ಇರುತ್ತೆ ಅಂದಳು.

ಅವತ್ತು ತಿಂಡಿ ಆದ ಮೇಲೆ ಸೋಮಿ ಕಣ್ಣು ಸನ್ನೆ ಮಾಡಿದಳು. ಇದೇನಪ್ಪಾ ಇಲ್ಲೂ ಕಣ್ಸನ್ನೆ ಮಾಡ್ತಿದಾಳೆ ಅಂದರೆ ಅವಳ ತಂದೆಯ ಕೋಣೆಯಲ್ಲಿ ಇದ್ದ ಕೆಲವು ವಸ್ತುಗಳನ್ನು ಹಿಂದೆ ಕಟ್ಟಿಸಿರೋ ಹೊಸ ಕೋಣೆಯಲ್ಲಿ ನೀಟಾಗಿ ಜೋಡಿಸಬೇಕಿತ್ತು. ಆ ಕೆಲಸ ಸೋಮು ತಲೆಗೆ ಬಂತು. ಹೀಗೆ ಸೋಮಿ ಒಂದಾದ ಮೇಲೊಂದರಂತೆ ಕಣ್ಸನ್ನೆ ಮಾಡುತ್ತಲೇ ಇದ್ದಳು, ಕೆಲಸ ಹೇಳುತ್ತಲೇ ಇದ್ದಳು, ಸೋಮು ಮಾಡುತ್ತಲೇ ಇದ್ದ. ಅದನ್ನು ಕಂಡ ಅವನ ಮಾವ ಅಳಿಯಂದಿರೇ ನನ್ನ ಹೆಂಡತಿಗೆ ಸಿಕ್ಕಿರುವುದಕ್ಕಿಂತ ಒಳ್ಳೆಯ ಗಂಡ ನನ್ನ ಮಗಳಿಗೆ ಸಿಕ್ಕಿದ್ದಾನೆ ಅಂದು ನಕ್ಕರು. ಸೋಮಿ ರೀ ಅಂದು ಅಟ್ಟ ತೋರಿಸಿದಳು. ಅಂದ್ರೆ ಅಟ್ಟದ ಮೇಲೆ ಹತ್ತಿ ಕೆಲವು ಪದಾರ್ಥಗಳನ್ನು ತೆಗೆದುಕೊಡಿ ಅಂತ. ಸೋಮು ಅಟ್ಟ ಹತ್ತಿ ಅಲ್ಲಿನ ಧೂಳಿಗೆ ಕೆಮ್ಮು ತರಿಸಿಕೊಂಡು ಒದ್ದಾಡಿದ.

ಆದರೆ ಹಬ್ಬದ ದಿನ ಎಲ್ಲರೂ ಒಟ್ಟಾಗಿ ಊಟಕ್ಕೆ ಕೂತಿದ್ದಾಗ ಸೋಮು ಮಾತ ಒಬ್ಬಟ್ಟು ಬಾರಿಸುತ್ತಾ ಏನು ಅಳಿಯಂದಿರೇ ಈಗಲೂ ನಿಮಗೆ ಪಟಾಕಿ ಹೊಡೆಯೋ ಆಸಕ್ತಿ ಇದೆಯಾ ಅಂತ ಕೇಳಿದ್ದಕ್ಕೆ ಸೋಮುಗೂ ಸೋಮಿಗೂ ಸಖತ್ತಾಗಿ ನಗು ಬಂದು ನೆತ್ತಿ ಹತ್ತಿ ಬಹಳ ಫಜೀತಿ ಆಯಿತು. ಪಟಾಕಿ ತಾನಾಗಿ ಹತ್ತಿಕೊಳ್ಳೋಲ್ಲ. ಅದಕ್ಕೆ ಬೆಂಕಿ ತಗುಲಿಸಬೇಕು. ಆದರೆ ಬೆಂಕಿ ದೂರ ಇದೆ ಅಂತ ಹೇಳಬೇಕು ಅನಿಸಿದರೂ ಸುಮ್ಮನೇ ಒಬ್ಬಟ್ಟು ನುಂಗಿ ನೀರು ಕುಡಿದ.

ಆಗ ಸೋಮುಗೆ ಅರಿವಾಗಿದ್ದೇನೆಂದರೆ ಮಳೆ ಬರ್ತಿದೆ ಅಂತ ಮರದ ಕೆಳಗೆ ನಿಂತಿದ್ದರೆ ಮಳೆ ನಿಂತ ಮೇಲೆ ಅಲ್ಲಿಂದ ಹೊರಟುಬಿಡಬೇಕು. ಇಲ್ಲದಿದ್ದರೆ ಮಳೆಹನಿ ತಲೇಮೇಲೆ ಬೀಳುತ್ತಲೇ ಇರುತ್ತದೆ. ಹಾಗೆ ಹಬ್ಬಕ್ಕೆ ಅಂತ ಅಳಿಯ ಮಾವನ ಮನೆಗೆ ಬಂದರೆ ಹಬ್ಬ ಮುಗಿಸಿಕೊಂಡು ಹೊರಟೇಬಿಡಬೇಕು ಇಲ್ಲದಿದ್ದರೆ ಹೀಗೆ ಕೆಲಸಗಳು ತಲೆ ಮೇಲೆ ಬೀಳುತ್ತಲೇ ಇರುತ್ತವೆ

ಅಂದುಕೊಂಡ. ಅವತ್ತು ಸಂಜೆ ಸೋಮಿ ಅಮ್ಮ ಕೊಬ್ಬರಿ ಮಿಠಾಯಿ ಮಾಡೋಣ ಕಣೆ ಅಂತ ಅಂದಾಗ ಸೋಮಿ ಅಮ್ಮಾ ನಿನ್ನ ಅಳಿಯ ಕೊಬ್ಬರಿ ಮಿಠಾಯಿಗೇ ಅಂತ ತೆಂಗಿನ ಕಾಯನ್ನು ಅದೆಷ್ಟು ಸಣ್ಣಗೆ ತುರ್ಕೊಡ್ತಾರೆ ಗೊತ್ತಾ. ರೀ ಬನ್ನಿ ಇಲ್ಲಿ ಅಂತ ತೆಂಗಿನ ಕಾಯಿ ಕಡೆ ತೋರಿಸಿ ಕಣ್ಸನ್ನೆ ಮಾಡಿದಾಗ ಅಯ್ಯೋ ಇಲ್ಲೂ ಇವಳ ಗೋಳು ಮುಗಿಯಲಿಲ್ವಲ್ಲಾ ಅಂದುಕೊಂಡ. ಆದರೆ ಈ ಸಂಕಟದ ನಡುವೆಯೂ ಸಡಗರ ಎನ್ನುವಂತೆ ದೀಪಾವಳಿ ಹಬ್ಬದ ದಿನ ಸೋಮಿ ಕವನ ರೂಪದಲ್ಲಿ ಆಡಿದ ಮಾತು ಮಾತ್ರ ಅವನಿಗೆ ರಾಗ ತಾನ ಪಲ್ಲವಿ ತರಹ ಕಿವಿಗೆ

ಬಿದ್ದಿದ್ದು ಅದು ಅವನನ್ನು ಈಗಲೂ ಕಾಡುತ್ತಿದೆ. ಪೇಪರ್ ಓದುತ್ತಾ ಕೂತಿದ್ದ ಸೋಮು ಬಳಿ ಬಂದ ಸೋಮಿ

**ಎಣ್ಣೆ ತರಬೇಕಾಗಿದೆ**

**ದೀಪಾವಳಿಗೆ ಹಚ್ಚುವ ಹಣತೆಗೆ**

**ನಿಮ್ಮ ಜೋಬಿಂದ**

**ಹಣ – ತೆಗೆ**

ಅಂದಾಗ ಸೋಮುಗೆ ಸಖತ್ತಾಗಿ ನಗು ಬಂದು ಮೈ ಕುಣಿಸಿ ನಗುತ್ತಾ ಇರುವಾಗ ಸೋಮಿ ಅವನ ಷರಟಿನ ಜೋಬಿಂದ ಹಣ ಎಗರಿಸಿದ್ದು ಅವನಿಗೆ ಗೊತ್ತಾಗಲೇ ಇಲ್ಲ.

■

---



Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.